ಕರ್ನಾಟಕದಲ್ಲಿ ಕೃಷಿ ಮತ್ತು ಉದ್ಯೋಗ 2018-21



ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 16 | ಸಂಚಿಕೆ 1 | ಡಿಸೆಂಬರ್ 27, 2021–ಜನವರಿ 2, 2022 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com

ಮತಾಂತರ ವಿರೋಧಿ ಮಸೂದೆ





ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಪ್ರಹಾರ
ದಲಿತ-ಆದಿವಾಸಿ ಹಕ್ಕುಗಳ ಮೇಲೆ ನಿರ್ಬಂಧ
ಜನಗಳ ಗಮನ ತಿರುಗಿಸುವ ತಂತ್ರ





ಚಿಲಿಯಲ್ಲಿ ಎಡ ಜಯಭೇರಿ
ಲ್ಯಾಟಿನ್ ಅಮೆರಿಕಾದಲ್ಲಿ ಜೋರಾದ ಎಳೆಗೆಂಪು ಅಲೆ

ಚುನಾವಣಾ ಕಾನೂನುಗಳ ಮಸೂದೆಯನ್ನು ಆಯ್ಕೆ ಸಮಿತಿಯು ಪರಿಶೋಧಿಸಲೇಬೇಕು

ದೂರಗಾಮಿ ಪರಿಣಾಮಗಳನ್ನು ಉಂಟುಮಾಡುವ ಚುನಾವಣಾ ಕಾನೂನುಗಳಲ್ಲಿನ ಪ್ರಮುಖ ಬದಲಾವಣೆಗಳನ್ನು ಲೋಕಸಭೆಯ ಮೂಲಕ ಗದ್ದಲದ ನಡುವೆ ತರಾತುರಿಯಲ್ಲಿ ಅಂಗೀಕರಿಸಿದ ವಿಧಾನವನ್ನು ಬಲವಾಗಿ ಖಂಡಿಸುವುದಾಗಿ ಸಿಪಿಐ(ಎಂ) ನ ಪೊಲಿಟ್ ಬ್ಯೂರೋ ಹೇಳಿದೆ. ಸಂಸದ್ ಸದಸ್ಯರಿಗೆ ಚರ್ಚೆಗೆ ಸಮಯ ನೀಡಲಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ, ಸಂಸದರು ಯಾವುದೇ ತಿದ್ದುಪಡಿಗಳನ್ನು ಮಂಡಿಸಲು ಅವಕಾಶ ಕೊಡಲಿಲ್ಲ, ಇದು ಸಂಸತ್ತಿನ ನಿಯಮಗಳು ಮತ್ತು ಕಾರ್ಯವಿಧಾನಗಳ ಸಂಪೂರ್ಣ ಉಲ್ಲಂಘನೆಯಾಗಿದೆ. ಬೆಳಗ್ಗೆ ಅದನ್ನು ಕೂಲಂಕುಷ ಪರೀಕ್ಷೆಗಾಗಿ ಸಂಸದೀಯ ಆಯ್ಕೆ ಸಮಿತಿಗೆ ಕಳುಹಿಸುವ ಚರ್ಚೆ ನಡೆಯಿತು. ಈ ನಿರ್ಧಾರವನ್ನು ಕೈಬಿಟ್ಟು, ಸರ್ಕಾರವು ಊಟದ ಬಿಡುವಿನ ನಂತರ ಪೂರಕ ಕಾರ್ಯಸೂಚಿಯನ್ನು ಬಿಡುಗಡೆ ಮಾಡಿತು ಮತ್ತು ಮಸೂದೆಯ ಅಂಗೀಕಾರಕ್ಕೆ ತರಾತುರಿ ಮಾಡಿತು.

ಈ ಮಸೂದೆಯು ಮತದ ಗೌಪ್ಯತೆಯನ್ನು ಉಲ್ಲಂಘಿಸುವ ಅಪಾಯವನ್ನು ಹೊಂದಿದೆ, ಇದು ರಹಸ್ಯ ಮತದಾನದ ತತ್ವವನ್ನು ಮತ್ತು ಮತದಾರರ ಖಾಸಗಿತನದ ಮೂಲಭೂತ ಹಕ್ಕನ್ನು ದುರ್ಬಲಗೊಳಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ, ವಿಪಕ್ಷಗಳು ಈ ಮಸೂದೆಯನ್ನು ಈಗ ರಾಜ್ಯಸಭೆಯಲ್ಲಿ ಬಲವಂತವಾಗಿ ಅಂಗೀಕಾರ ಮಾಡಿಸುವುದನ್ನು ದೃಢವಾಗಿ ಪ್ರತಿರೋಧಿಸಬೇಕು ಮತ್ತು ಒಂದು ಆಯ್ಕೆ ಸಮಿತಿಯಿಂದ ಅದರ ಕೂಲಂಕುಷ ಪರೀಕ್ಷಣೆಗೆ ಆಗ್ರಹಿಸಬೇಕು ಎಂದು ಹೇಳಿದೆ.

ಜಮ್ಮು–ಕಾಶ್ಮೀರ ಅಸೆಂಬ್ಲಿ ಕ್ಷೇತ್ರಗಳ ಮರುವಿಂಗಡಣೆಯಲ್ಲಿ ಅನ್ಯಾಯ

ಜಮ್ಮು ಮತ್ತು ಕಾಶ್ಮೀರ ಚುನಾವಣಾ ಕ್ಷೇತ್ರ ಮರುವಿಂಗಡಣೆ ಆಯೋಗದ ಶಿಫಾರಸುಗಳು ಖಂಡಿತಾ ನ್ಯಾಯಸಮ್ಮತವಲ್ಲದ ಮತ್ತು ತರ್ಕಬದ್ಧವಲ್ಲದ ಶಿಫಾರಸುಗಳು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ.

2011 ರ ಜನಗಣತಿಯ ಪ್ರಕಾರ, ಕಾಶ್ಮೀರದ ಜನಸಂಖ್ಯೆ 68.8 ಲಕ್ಷ, ಜಮ್ಮುವಿನದ್ದು 53.5 ಲಕ್ಷ. ಆಯೋಗದ ಪ್ರಸ್ತಾವನೆಯ ಪ್ರಕಾರ, ಕಾಶ್ಮೀರಕ್ಕೆ 47 ಅಸೆಂಬ್ಲಿ ಸ್ಥಾನಗಳು ಮತ್ತು ಜಮ್ಮುವಿಗೆ 43. ಒಂದು ನ್ಯಾಯಯುತವಾದ ಮರುವಿಂಗಡಣೆ ಕಾಶ್ಮೀರಕ್ಕೆ 90 ರಲ್ಲಿ 51 ಸ್ಥಾನಗಳನ್ನು ನೀಡಬೇಕಾಗಿತ್ತು ಎಂದು ಅದು ಹೇಳಿದೆ.

ಇದಲ್ಲದೆ, ಕ್ಷೇತ್ರ ಮರುವಿಂಗಡಣೆ ಆಯೋಗವನ್ನು ಜಮ್ಮು ಮತ್ತು ಕಾಶ್ಮೀರ ಮರುಸಂಘಟನೆ ಕಾಯಿದೆ 2019 ರ ಅಡಿಯಲ್ಲಿ ರಚಿಸಿರುವುದೇ ಪ್ರಶ್ನಾರ್ಹ, ಏಕೆಂದರೆ ಮರುಸಂಘಟನೆ ಕಾಯ್ದೆಗೆ ಸುಪ್ರೀಂ ಕೋರ್ಟ್‌ನಲ್ಲಿ ಸವಾಲು ಹಾಕಲಾಗಿದೆ. ಇದು ಇನ್ನೂ ಇತ್ಯರ್ಥವಾಗದೆ ಬಾಕಿ ಉಳಿದಿರುವ ವಿಷಯವಾದ್ದರಿಂದ, ವಿಚಾರಣಾಧೀನವಾಗಿದೆ.

ಜಮ್ಮುವಿಗೆ ಆರು ಮತ್ತು ಕಾಶ್ಮೀರ ಕಣಿವೆಗೆ ಒಂದು ಹೆಚ್ಚುವರಿ ಸ್ಥಾನಗಳನ್ನು ನೀಡುವ ಪ್ರಸ್ತಾವನೆಯನ್ನು ಮರುಪರಿಶೀಲಿಸಬೇಕು ಮತ್ತು ನ್ಯಾಯಯುತವಾದ ಕ್ಷೇತ್ರ ಮರುವಿಂಗಡಣೆ ಮಾಡಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಪ್ರಸ್ತುತ ಪ್ರಸ್ತಾವನೆ ಜಮ್ಮು ಮತ್ತು ಕಾಶ್ಮೀರದ ಜನಸಂಖ್ಯಾ ಸ್ವರೂಪವನ್ನು ಬದಲಾಯಿಸುವ ಗುರಿಯನ್ನು ಹೊಂದಿರುವ ರಾಜಕೀಯ ದುರುದ್ದೇಶದ ವಾಸನೆಯನ್ನು ಸೂಸುತ್ತಿದೆ ಎಂದಿದೆ.

ಜನವರಿ 1 ರಂದು ಪ್ರತಿಭಟನೆ–ಪಿಎಜಿಡಿ

(ಪುಟ 14 ನೋಡಿ)

ದೇಶದಲ್ಲಿ ಹೊಸ ಆರೋಗ್ಯ ತುರ್ತುಸ್ಥಿತಿ ಎರಗುವುದನ್ನು ತಡೆಗಟ್ಟಲು ಲಸಿಕೀಕರಣದ ವೇಗವನ್ನು ತುರ್ತಾಗಿ ಹೆಚ್ಚಿಸಬೇಕು-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಕೊವಿಡ್‌ನ ಹೊಸ ರೂಪಾಂತರಿ ಓಮಿಕ್ರಾನ್ ನಿಂದಾಗಿ ಹೊಸ ಅಪಾಯಗಳು ಹೊಮ್ಮಲಿವೆ ಎಂದು ಆತಂಕ ವ್ಯಕ್ತಪಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಇದನ್ನು ಎದುರಿಸಲು ಲಸಿಕೀಕರಣದ ವೇಗವನ್ನು ತುರ್ತಾಗಿ ಹೆಚ್ಚಿಸಬೇಕು ಎಂದು ಹೇಳಿದೆ. ಡಿಸೆಂಬರ್ 17–18ರಂದು ನವದೆಹಲಿಯಲ್ಲಿ ಸೇರಿದ ಪೊಲಿಟ್‌ಬ್ಯುರೊ ಸಭೆಯ ನಂತರ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಅದು ಸರಕಾರವನ್ನು ಆಗ್ರಹಿಸಿದೆ.

ಈ ಸಭೆಯಲ್ಲಿ ಇತರ ಹಲವು ವಿಷಯಗಳನ್ನು ಚರ್ಚಿಸಲಾಯಿತು. ಈ ಪತ್ರಿಕಾ ಹೇಳಿಕೆಯ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಕೋವಿಡ್ ಮಹಾಸೋಂಕು: ಓಮಿಕ್ರಾನ್ ಪ್ರಕರಣಗಳು ಹೆಚ್ಚುತ್ತಿವೆ

ಹೊಸ ರೂಪಾಂತರಿ ಓಮಿಕ್ರಾನ್ ಹೆಚ್ಚು ಜನರಿಗೆ ಸೋಂಕು ತಗಲಿಸುವುದರೊಂದಿಗೆ, ಮಹಾಸೋಂಕಿನ ಹೊಸ ಅಪಾಯಗಳು ಹೊರಹೊಮ್ಮುತ್ತಿವೆ. ದುರದೃಷ್ಟವಶಾತ್, ವರ್ಷಾಂತ್ಯದ ವೇಳೆಗೆ ದೇಶದ ಎಲ್ಲಾ ವಯಸ್ಕರಿಗೆ ಲಸಿಕೆ ಹಾಕುವ ಗುರಿಯನ್ನು ಘೋಷಿಸಿದ್ದರೂ, ಡಿಸೆಂಬರ್ 18 ರ ವೇಳೆಗೆ, ನಮ್ಮ ಜನಸಂಖ್ಯೆಯ ಕೇವಲ 39 ಪ್ರತಿಶತದಷ್ಟು ಜನರು ಮಾತ್ರ ಎರಡೂ ಡೋಸ್‌ಗಳೊಂದಿಗೆ ಸಂಪೂರ್ಣವಾಗಿ ಲಸಿಕೆಯನ್ನು ಹೊಂದಿದ್ದಾರೆ.

ದೇಶದಲ್ಲಿ ಹೊಸ ಆರೋಗ್ಯ ತುರ್ತುಸ್ಥಿತಿ ಎರಗುವುದನ್ನು ತಡೆಗಟ್ಟಲು ಲಸಿಕೀಕರಣದ ವೇಗವನ್ನು ತುರ್ತಾಗಿ ಹೆಚ್ಚಿಸಬೇಕು.

ಮಹಿಳೆಯರ ಮದುವೆಯ ವಯಸ್ಸಿನ ಏರಿಕೆ

ಮಹಿಳೆಯರ ವಿವಾಹಯೋಗ್ಯ ವಯಸ್ಸನ್ನು ಪ್ರಸ್ತುತ 18 ವರ್ಷದಿಂದ 21 ವರ್ಷಕ್ಕೆ ಹೆಚ್ಚಿಸಲು ಬಿಜೆಪಿ ಸರ್ಕಾರ ಪ್ರಸ್ತಾಪಿಸಿರುವ ಮಸೂದೆಯನ್ನು ಸಿಪಿಐ(ಎಂ) ಬೆಂಬಲಿಸುವುದಿಲ್ಲ. ಅಂತಹ ವಿಧೇಯಕಕ್ಕೆ ಸರ್ಕಾರವು ಇದಕ್ಕೆ ಮನದಟ್ಟಾಗುವ ಕಾರಣಗಳನ್ನು ಮುಂದಿಟ್ಟಿಲ್ಲ.. ಈ ಕರಡು ಮಸೂದೆಯನ್ನು ಸಂಸತ್ತಿನ ಸಂಬಂಧಪಟ್ಟ ಸ್ಥಾಯಿ ಸಮಿತಿಗೆ ಆಳವಾದ ಪರೀಕ್ಷಣೆ ಮತ್ತು ಮತ್ತು ಸಂಬಂಧಪಟ್ಟ ಎಲ್ಲರೊಂದಿಗೆ ಸಮಾಲೋಚನೆಗಾಗಿ ಕಳುಹಿಸಬೇಕು.

ಒಬ್ಬ ಮಹಿಳೆ, 18 ನೇ ವಯಸ್ಸಿನಲ್ಲಿ, ಕಾನೂನುಬದ್ಧವಾಗಿ ವಯಸ್ಕಳು. ಮದುವೆಯ ಉದ್ದೇಶಗಳಿಗಾಗಿ, ಅವಳನ್ನು ಬಾಲಾಪರಾಧಿ ಎಂದು ಪರಿಗಣಿಸುವುದು ಸ್ವಯಂ–ವಿರೋಧಾಭಾಸವಾಗಿದೆ ಮತ್ತು ತಮ್ಮ ಸಂಗಾತಿಯ ವೈಯಕ್ತಿಕ ಆಯ್ಕೆಯನ್ನು ಮಾಡುವ ವಯಸ್ಕರ ಹಕ್ಕನ್ನು ಇದನ್ನು ಉಲ್ಲಂಘಿಸುತ್ತದೆ. ಈ ಪ್ರಸ್ತಾಪವು ಮಹಿಳೆ ತನ್ನ ಜೀವನದ ಹಾದಿಯನ್ನು ನಿರ್ಧರಿಸಲಾಗದಂತೆ ವಂಚಿಸುತ್ತದೆ.

ಕನಿಷ್ಠ ವಯಸ್ಸು 18 ವರ್ಷಗಳಾಗಿದ್ದರೂ ಸಹ, 2017 ರಲ್ಲಿ ಮಹಿಳೆಯರ ವಿವಾಹದ ಅಖಿಲ ಭಾರತ ಸರಾಸರಿ ವಯಸ್ಸು 22.1 ವರ್ಷಗಳು ಎಂದು ಅಧಿಕೃತ ಅಂಕಿಅಂಶಗಳು ತಿಳಿಸುತ್ತವೆ. ಆದ್ದರಿಂದ ಇಂತಹ ಕಾನೂನು ಅನಗತ್ಯ. ಈ ಮಸೂದೆಯ ಪರಿಶೀಲನೆ ಆರೋಗ್ಯದ ಕಾರಣಗಳಿಂದಾಗಿ ಆಗಿದ್ದರೆ, ಸರ್ಕಾರವು ಹೇಳಿಕೊಳ್ಳುವಂತೆ, ತಾಯಿ ಮತ್ತು ಶಿಶು ಮರಣವನ್ನು ತಡೆಗಟ್ಟಲು ಪೋಷಣೆ ಮತ್ತು ಆಹಾರ ಭದ್ರತೆಯನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವಾಗಿದೆ. ಮಹಿಳೆಯರ ಮದುವೆ ವಯಸ್ಸನ್ನು ಹೆಚ್ಚಿಸುವುದು ಪರಿಹಾರವಲ್ಲ.

ಲಖಿಂಪುರ ಖೇರಿ ಕೊಲೆಗಳು

ಸುಪ್ರೀಂ ಕೋರ್ಟ್ ಸ್ಥಾಪಿಸಿದ ವಿಶೇಷ ತನಿಖಾ ತಂಡವು ಎಫ್‌ಐಆರ್ ದಾಖಲಿಸಿದ್ದು, ಅದರಲ್ಲಿ ಇದು "ಸಾವುಂಟುಮಾಡುವ ಪೂರ್ವ ಯೋಜಿತ ಪಿತೂರಿ" ಎಂದು ಹೇಳಲಾಗಿದೆ. ಈ ಘಟನೆಯಲ್ಲಿ ಎಂಟು ಮಂದಿಯನ್ನು ಬರ್ಬರವಾಗಿ ಸಾಯಿಸಲಾಯಿತು. ಪ್ರಮುಖ ಆರೋಪಿ ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಅವರ ಪುತ್ರ. **ಸಾರ್ವಜನಿಕರ ಆಕ್ರೋಶದ ಹೊರತಾಗಿಯೂ ಪ್ರಧಾನಿ ಮೋದಿ ಸಚಿವರನ್ನು ಸಂಪುಟದಿಂದ ವಜಾಗೊಳಿಸಿಲ್ಲ.**

ಇದನ್ನು ಕೂಡಲೇ ಮಾಡಬೇಕು ಎಂದು ಪೊಲಿಟ್ ಬ್ಯೂರೋ ಆಗ್ರಹಿಸುತ್ತದೆ.

ಯಶಸ್ವಿ ಬ್ಯಾಂಕ್ ಮುಷ್ಕರ

ಡಿಸೆಂಬರ್ 16–17 ರಂದು ನಡೆಸಿದ ಯಶಸ್ವಿ ಮುಷ್ಕರಕ್ಕಾಗಿ ಸುಮಾರು 10 ಲಕ್ಷ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ಅಭಿನಂದಿಸಿದೆ. **ಈ ಮುಷ್ಕರಕ್ಕೆ ವಿವಿಧ ಕಾರ್ಮಿಕ ಸಂಘಗಳಿಂದ ವ್ಯಾಪಕ ಬೆಂಬಲ ಮತ್ತು ಜನರಿಂದ ಸಕಾರಾತ್ಮಕ ಪ್ರತಿಕ್ರಿಯೆ ಸಿಕ್ಕಿತು. ಏಕೆಂದರೆ, ಬ್ಯಾಂಕ್ ಸಂಘಗಳು ಬ್ಯಾಂಕ್ ಖಾತೆಗಳಲ್ಲಿ ಭಾರತೀಯ ಜನತೆಯ ಜೀವಿತಾವಧಿಯ ಉಳಿತಾಯವನ್ನು ಲೂಟಿ ಮಾಡಲು ಈ ಸರ್ಕಾರದ ಬಂಟರಿಗೆ ಹಸ್ತಾಂತರಿಸುತ್ತಿರುವ ವಿಧಾನವನ್ನು ಬಯಲಿಗೆ ತಂದಿವೆ.** ಮೋದಿ ಸರ್ಕಾರದ ಈ ವರ್ಷಗಳಲ್ಲಿ ರೂ. 10.7 ಲಕ್ಷ ಕೋಟಿಗಿಂತಲೂ ಹೆಚ್ಚಿನ ಮೊತ್ತದ ಸಾಲಗಳನ್ನು ಮನ್ನಾ ಮಾಡಲಾಗಿದೆ ಮತ್ತು ಸಾರ್ವಜನಿಕ ಹಣದ ಮೂಲಕ ಬ್ಯಾಂಕುಗಳಿಗೆ ಮರು ಬಂಡವಾಳವನ್ನು ಹೊಂದಿಸಲಾಗಿದೆ.

ಸಾರ್ವಜನಿಕ ವಲಯದ ಬ್ಯಾಂಕ್‌ಗಳನ್ನು ಈ ರೀತಿ ಅಪಾಯಕ್ಕೆ ಸಿಲುಕಿಸುವ ಮೋದಿ ಸರ್ಕಾರವು ಬ್ಯಾಂಕ್‌ಗಳ ಖಾಸಗೀಕರಣಕ್ಕೆ ಇದನ್ನೇ ನೆಪವಾಗಿ ಬಳಸಿಕೊಳ್ಳುತ್ತದೆ. ಇದು ದೇಶ ಮತ್ತು ಜನತೆಗೆ ವಿಪತ್ತು ತಂದೊಡ್ಡಲಿದೆ.

ಇಂತಹ ಖಾಸಗೀಕರಣ ಯೋಜನೆಗಳನ್ನು ತಕ್ಷಣವೇ ಹಿಂಪಡೆಯಬೇಕು ಎಂದು ಪಾಲಿಟ್ ಬ್ಯೂರೋ ಆಗ್ರಹಿಸುತ್ತದೆ.

ಬೆಲೆ ಏರಿಕೆ

ಸಗಟು ಬೆಲೆ ಸೂಚ್ಯಂಕವು ನವೆಂಬರ್‌ನಲ್ಲಿ ಶೇಕಡಾ 14.2 ರಷ್ಟು ಏರಿಕೆಯಾಗಿದೆ, ಇದು ಮೂವತ್ತು ವರ್ಷಗಳಲ್ಲೇ ಅತಿ ಹೆಚ್ಚು ಏರಿಕೆ. ಸಗಟು ಇಂಧನ ಮತ್ತು ವಿದ್ಯುತ್ ಬೆಲೆಗಳು ಶೇಕಡಾ 39.81 ರಷ್ಟು ಏರಿಕೆಯಾಗಿವೆ; ಆಹಾರ ಮತ್ತು ಇಂಧನ ಬೆಲೆಗಳು ಹನ್ನೆರಡು ವರ್ಷಗಳ ದಾಖಲೆಯನ್ನು ತಲುಪಿವೆ. ಇದು ಜನರ ಸಂಕಷ್ಟವನ್ನು ಹೆಚ್ಚಿಸುತ್ತಿದೆ.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಪಕ್ಷದ ಎಲ್ಲಾ ಘಟಕಗಳಿಗೆ ಪ್ರತಿಭಟನಾ ಕಾರ್ಯಗಳನ್ನು ಸಂಘಟಿಸಲು ಕರೆ ನೀಡಿದೆ.

ನಿರುದ್ಯೋಗ

ನವೆಂಬರ್ 2021 ರ ಒಂದೇ ತಿಂಗಳಲ್ಲಿ, 68 ಲಕ್ಷ ಸಂಬಳಕ್ಕೆ ದುಡಿಯುವ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ನಗರ ಉದ್ಯೋಗಹೀನತೆ ಕಳೆದ 17 ವಾರಗಳ ಅತಿ ಹೆಚ್ಚಿನ ಮಟ್ಟಕ್ಕೆ ಮತ್ತು ಮತ್ತು ಒಟ್ಟಾರೆ ನಿರುದ್ಯೋಗ ಕಳೆದ 9 ವಾರಗಳಲ್ಲೇ ಅತೀ ಹೆಚ್ಚಿನ ಮಟ್ಟ ತಲುಪಿದೆ.

ಹಣದುಬ್ಬರದ ನಾಗಾಲೋಟದ ಜೊತೆಗೆ, ಇವುಗಳು ಒಟ್ಟಾಗಿ ಜನರ ಮೇಲೆ ಹೆಚ್ಚಿನ ಸಂಕಟಗಳನ್ನು ಹೇರುತ್ತಿವೆ ಮತ್ತು ಅರ್ಥವ್ಯವಸ್ಥೆಯಲ್ಲಿ ಬೇಡಿಕೆ ಮತ್ತಷ್ಟು ಸಂಕೋಚನಕ್ಕೆ ಒಳಗಾಗಲು ಕೊಡುಗೆ ನೀಡುತ್ತಿವೆ ಮತ್ತು ಸರ್ಕಾರದ ಆರ್ಥಿಕ ಹಿಂಜರಿತವನ್ನು ಗಾಢವಾಗಿಸುತ್ತಿವೆ.

ಆದಾಯ ತೆರಿಗೆ ವ್ಯಾಪ್ತಿಗೆ ಬರದ ಪ್ರತಿ ಕುಟುಂಬಕ್ಕೆ ಮಾಸಿಕ ರೂ.7,500 ಗಳಷ್ಟಾದರೂ ನೇರ ನಗದು ವರ್ಗಾವಣೆವನ್ನು ತಕ್ಷಣ ಮಾಡಬೇಕು.

ಭಾರತದ ಚುನಾವಣಾ ಆಯೋಗವನ್ನು ಕರೆಸಿರುವ ಪ್ರಧಾನ ಮಂತ್ರಿ ಕಚೇರಿಯ ಕ್ರಮಕ್ಕೆ ಖಂಡನೆ

ಭಾರತದ ಚುನಾವಣಾ ಆಯೋಗ(ಇಸಿಐ)ವು ಸ್ವತಂತ್ರ ಸಾಂವಿಧಾನಿಕ ಪ್ರಾಧಿಕಾರವಾಗಿದ್ದು, ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಳನ್ನು ನಡೆಸಬೇಕಾದ ಏಕೈಕ ಪ್ರಾಧಿಕಾರವಾಗಿದೆ. ಈ ಜವಾಬ್ದಾರಿಯನ್ನು ನಿರ್ವಹಿಸಲು, ಇಸಿಐ ಕಾರ್ಯಾಂಗ (ಸರ್ಕಾರ) ದಿಂದ ಸಂಪೂರ್ಣವಾಗಿ ಸ್ವತಂತ್ರವಾಗಿರಬೇಕು.

ಇತ್ತೀಚೆಗೆ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಇಬ್ಬರು ಚುನಾವಣಾ ಆಯುಕ್ತರು ಬಂದು ಭೇಟಿ ಮಾಡಬೇಕು ಎಂದು **ಪ್ರಧಾನ ಮಂತ್ರಿ ಕಚೇರಿ(ಪಿಎಂಒ) ಕರೆಸಿರುವುದು ಸಂವಿಧಾನದ ಉಲ್ಲಂಘನೆ ಮತ್ತು ಕಾನೂನು ಭಂಗದ ಕೃತ್ಯವಾಗಿದೆ. ಮೋದಿ ಸರಕಾರದ ಇಂತಹ ಕ್ರಮಗಳಿಂದ ಚುನಾವಣಾ ಆಯೋಗದ ನಿಷ್ಪಕ್ಷಪಾತತೆ ಮತ್ತು ತಟಸ್ಥತೆಯ ಮೇಲಿನ ಜನರ ನಂಬಿಕೆ ಕಡಿಮೆಯಾಗುತ್ತದೆ.**

ಸಿಪಿಐ(ಎಂ) ಪೊಲಿಟ್ ಬ್ಯೂರೋ ಇದನ್ನು ಬಲವಾಗಿ ಖಂಡಿಸುತ್ತದೆ ಮತ್ತು ನಮ್ಮ ಸಾಂವಿಧಾನಿಕ ಪ್ರಾಧಿಕಾರಗಳ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಮಾಡುವುದನ್ನು ನಿಲ್ಲಿಸಬೇಕೆಂದು ಮೋದಿ ಸರ್ಕಾರವನ್ನು ಒತ್ತಾಯಿಸುತ್ತದೆ.

23 ನೇ ಮಹಾಧಿವೇಶನ

ಪೊಲಿಟ್ ಬ್ಯೂರೋ 23 ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯವನ್ನು ಚರ್ಚಿಸಿ ಅಂತಿಮಗೊಳಿಸಿತು. ಇದನ್ನು ಈಗ 2022 ರ ಜನವರಿ 7 ರಿಂದ 9 ರವರೆಗೆ ಹೈದರಾಬಾದ್‌ನಲ್ಲಿ ನಡೆಯಲಿರುವ ಕೇಂದ್ರ ಸಮಿತಿಯ ಸಭೆಯ ಮುಂದೆ ಮಂಡಿಸಲಾಗುತ್ತದೆ. ○

ಸಂಪಾದಕೀಯ

ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ ಆಗಲಿದೆ ಸ್ವಾತಂತ್ರ್ಯ ಕಿತ್ತುಕೊಳ್ಳುವ ಕಾಯ್ದೆ

ಮತ ಎಂಬುದು ವೈಯಕ್ತಿಕ ವಿಚಾರ. ಹುಟ್ಟು ಸಾವು, ಪಾಪ ಪುಣ್ಯ, ಸ್ವರ್ಗ ನರಕ ಇತ್ಯಾದಿ ವಿಷಯಗಳ ಬಗ್ಗೆ ಒಬ್ಬ ವ್ಯಕ್ತಿಗೆ ತನ್ನದೆ ಅಭಿಪ್ರಾಯ ಇರಬಹುದು. ಇದನ್ನೇ ಧಾರ್ಮಿಕ ಸ್ವಾತಂತ್ರ್ಯ ಎನ್ನುವುದು. ಒಬ್ಬನಿಗೆ ಇಷ್ಟವಾಗುವ ಮತವನ್ನು ಆಯ್ಕೆಮಾಡಿಕೊಳ್ಳುವ, ಅದನ್ನು ಆಚರಿಸುವ ಹಕ್ಕು ಸಂವಿಧಾನಾತ್ಮಕ ಹಕ್ಕು. ಅದು ಆತನ ಪೋಷಕರ ಮತವೇ ಆಗಿರಬೇಕಾಗಿಲ್ಲ. ಹುಟ್ಟಿನಿಂದ ಬಂದ ಮತವನ್ನು ಆತ ತ್ಯಜಿಸಿ ಬೇರೊಂದು ಮತವನ್ನು ಅನುಸರಿಸಬಹುದು. ಯಾವುದೇ ಮತವನ್ನು ಇಷ್ಟಪಡದೆಯೂ ಆತ ಇರಬಹುದು. ಇದುವೇ ಧಾರ್ಮಿಕ ಸ್ವಾತಂತ್ರ್ಯ. ಒಬ್ಬರನ್ನು ಬಲವಂತದಿಂದ ಯಾವುದಾದರೊಂದು ಮತಕ್ಕೆ ಸೇರಿಸುವುದು, ಆತನಿಗೆ ಆಮಿಷವೊಡ್ಡಿ ಮತಾಂತರ ಮಾಡುವುದು ಸಹ ತಪ್ಪು. ಶಿಕ್ಷಾರ್ಹ ಅಪರಾಧ.

ಆದರೆ ಈಗ ಬಿಜೆಪಿ ಸರ್ಕಾರ ಕಾಯ್ದೆಯೊಂದನ್ನು ಅಂಗೀಕರಿಸುವ ಮೂಲಕ ನಮ್ಮ ಸಂವಿಧಾನಾತ್ಮಕ ಹಕ್ಕನ್ನು ಕಿತ್ತುಕೊಳ್ಳುವ ಪ್ರಯತ್ನ. ಬೊಮ್ಮಾಯಿಯವರು ಹೊಸ ಕಾಯ್ದೆಗೆ 'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ಮಸೂದೆ 2012' ಎಂದು ಹೆಸರು ಇಟ್ಟಿದ್ದರೂ ಅವರು ಈ ಕಾಯ್ದೆಯ ನೆಪದಲ್ಲಿ ಸಂವಿಧಾನಾತ್ಮಕವಾದ ಧಾರ್ಮಿಕ ಸ್ವಾತಂತ್ರ್ಯವನ್ನು ರದ್ದುಗೊಳಿಸುವುದೇ ಆಗಿದೆ. ಬಲವಂತದ ಮತಾಂತರ ಅಪರಾಧ. ಆದರೆ ಬಿಜೆಪಿ ಅದನ್ನು ಕಾನೂನು ಮಾಡಲು ಹೊರಟಿರುವುದು ಅದಕ್ಕಿಂತ ದೊಡ್ಡ ಅಪರಾಧ, ಬಲವಂತದ ಮತಾಂತರ ನಡೆದಿರುವುದನ್ನು ಸಾಕ್ಷಿ ಪುರಾವೆಗಳ ಮೂಲಕ ಸಾಬೀತು ಪಡಿಸಲಾಗದು. ಮತಾಂತರಗೊಂಡವವನನ್ನು ಸುಳ್ಳು ಆರೋಪ ಹೊರಿಸಿ ಶಿಕ್ಷಿಸಬಹುದು. ಮಕ್ಕಳಿಗೆ ಶಿಕ್ಷಣ ಕೊಡುವ, ರೋಗಿಗಳ ಸೇವೆ ಮಾಡುವ ಅಲ್ಪ ಸಂಖ್ಯಾತ ಕ್ರಿಶ್ಚಿಯನ್ನರಿಗೆ, ಮುಸ್ಲಿಂ ಮತದವರಿಗೆ, ಅವರು ಆಸೆ ಆಮಿಷವೊಡ್ಡಿ ಮತಾಂತರ ಮಾಡುತ್ತಿದ್ದಾರೆ ಎಂದು ಆರೋಪಿಸಿ ದಂಡಿಸಬಹುದು. ಈ ಕರಾಳ ಕಾಯ್ದೆಯ ದುರುಪಯೋಗ ಆಗದೆ ಇರಲಾರದು. ಇತ್ತೀಚೆಗೆ, ಜನಸೇವೆಯಲ್ಲಿ ತೊಡಗಿರುವ ಪಾದ್ರಿಗಳ ಮೇಲೆ, ಸನ್ಯಾಸಿನಿಯರ ಮೇಲೆ ಇಂತಹ ನಕಲಿ ಸಂಸ್ಕೃತಿ ರಕ್ಷಕರ ದಾಳಿ ದೌರ್ಜನ್ಯಗಳು ಹೆಚ್ಚಾಗಿವೆ. ಅವರ ಚರ್ಚುಗಳ ಮೇಲೆ, ಮಸೀದಿಗಳ ಮೇಲೆ ದಾಳಿಗಳು ಹೆಚ್ಚಾಗುತ್ತಿವೆ.

ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ನಮ್ಮೆಲ್ಲರ ಹಕ್ಕು. ಅದರ ರಕ್ಷಣೆ ಸರ್ಕಾರದ ಕರ್ತವ್ಯ. ಮತಾಂತರದ ನೆಪದಲ್ಲಿ ಸರ್ಕಾರ ಅಲ್ಪ ಸಂಖ್ಯಾತರನ್ನು ಗುರಿಯಾಗಿಟ್ಟುಕೊಂಡು ಕಾನೂನುಗಳನ್ನು ಜಾರಿಗೆ ತರುವುದು ಅಕ್ಷಮ್ಯ ಅಪರಾಧ. ಅನ್ಯ ಮತಗಳಿಗೆ ಸೇರಿದವರು ಪರಸ್ಪರ ಪ್ರೀತಿಸಿ, ಸ್ವಸಂತೋಷದಿಂದ ವಿವಾಹವಾಗಲು ಬಯಸಿದರೆ ಅದನ್ನು ವಿರೋಧಿಸುವುದು ಅನಾಗರಿಕ ನಡೆಯಾಗಿದೆ. ಇಂತಹ ವಿವಾಹದಲ್ಲಿ ಅವರು ಮತಾಂತರಗೊಂಡು ವಿವಾಹವಾದರೆ ಅದರಲ್ಲಿ ತಪ್ಪೇನಿಲ್ಲ. ಬಲವಂತದಿಂದ ವಿವಾಹವಾಗುವುದು ತಪ್ಪು. ಅಂತವರನ್ನು ಶಿಕ್ಷಿಸಲು ಕಾನೂನುಗಳಿವೆ. ದುರುದ್ದೇಶದ ಹೊಸ ಕಾನೂನಿನ ಅಗತ್ಯವಿಲ್ಲ. ಬೊಮ್ಮಾಯಿ ಸರ್ಕಾರದ ಈ ದೌರ್ಜನ್ಯದ ನಡೆಯನ್ನು ಎಲ್ಲ ಸಜ್ಜನರು ವಿರೋಧಿಸಬೇಕು. ಇಂತಹ ಕಾನೂನು ಬಾಹಿರ ಕ್ರಮಗಳಿಗೆ ಪ್ರೋತ್ಸಾಹ ನೀಡಬಾರದು.

ಬೊಮ್ಮಾಯಿ ಸರ್ಕಾರ ಕಾನೂನನ್ನು ಬೆಂಬಲಿಸುವ ಸರ್ಕಾರ ಅಲ್ಲ. ಅಷ್ಟು ಮನವಿ ಮಾಡಿದರೂ ಅವರು ವಿಧಾನ ಸಭೆಯಲ್ಲಿ ಮಸೂದೆ ಮಂಡಿಸಲು ಹಿಂದೇಟು ಹಾಕಲಿಲ್ಲ. ಆದ್ದರಿಂದ ಬೀದಿಗಿಳಿದು ಈ ಕಾಯ್ದೆಯನ್ನು ಹಿಮ್ಮೆಟ್ಟಿಸಬೇಕು.

ವಿಶ್ವ ಮಾನವ ಬಸವಣ್ಣನವರ ಪ್ರತಿಮೆಯನ್ನು ದುಷ್ಕರ್ಮಿಗಳು, ಧ್ವಂಸ ಮಾಡಿದಾಗ ಬಸವರಾಜ ಬೊಮ್ಮಾಯಿ ಬಾಯಿ ತೆರೆಯಲಿಲ್ಲ. ಹಿಂದುತ್ವವಾದಿಗಳು ಅನ್ಯ ಧರ್ಮಿಯರ ಮೇಲೆ ಹಲ್ಲೆ ಮಾಡಿದಾಗ 'ಕ್ರಿಯೆಗೆ ಪ್ರತಿಕ್ರಿಯೆ' ಇರುತ್ತದೆ ಎಂದು ಹಿಂದುತ್ವದ ಗುಂಡಾಗಳಿಗೆ ಕುಮ್ಮಕ್ಕು ನೀಡಲು ಹೇಸಲಿಲ್ಲ. ತಮ್ಮ ಆರೆಸ್ಸೆಸ್ ಯಜಮಾನರನ್ನು ತೃಪ್ತಿಪಡಿಸಲು ಬೊಮ್ಮಾಯಿ ಯಾವುದಕ್ಕೂ ಹೇಸುವವರಲ್ಲ ಎಂದು ತೋರಿಸಿದ್ದಾರೆ. ಇವರಿಗೆ ಪಾಠ ಕಲಿಸುವ ದಿನಗಳು ದೂರವಿಲ್ಲ.

ಬಡವರ ವಸತಿ ಸೌಲಭ್ಯ ರದ್ದು ಹಿಂಪಡೆಯಲು ಮತ್ತು ವಸತಿ ಯೋಜನೆ ಬಲ ಪಡಿಕೆಗೆ ಸಾರ್ವಜನಿಕ ಬಂಡವಾಳ ಹೂಡಿಕೆ ಹೆಚ್ಚಿಸಲು–ಸಿಪಿಐ(ಎಂ) ಆಗ್ರಹ

ನೆನ್ನೆ ಬೆಳಗಾವಿಯಲ್ಲಿ ಮುಕ್ತಾಯವಾದ ವಿಧಾನ ಮಂಡಲದ ಅಧಿವೇಶನದಲ್ಲಿ ತಮ್ಮ ಘನ ಸರಕಾರ ವಸತಿ ಹೀನರಿಗೆ ಈಗಾಗಲೇ ವಸತಿ ಸೌಲಭ್ಯ ಒದಗಿಸುವುದಾಗಿ ಪ್ರಕಟಿಸಿದ್ದ 5,962 ಗ್ರಾಮ ಪಂಚಾಯತ್ ಗಳ 1,19,240 ವಸತಿ ಸೌಲಭ್ಯಗಳನ್ನು ಹಿಂಪಡೆಯುವ ಘನ ಕಾರ್ಯ ಮಾಡಿದೆ. ಆ ಮೂಲಕ ರಾಜ್ಯ ಸರಕಾರ ಅವರ ಬೆನ್ನಿಗೆ ಚೂರಿ ಹಾಕಿದೆಯೆಂದು ಅಕಖಐ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ.

ರಾಜ್ಯ ಸರಕಾರ ಈ ಕೂಡಲೇ ಸೌಲಭ್ಯ ರದ್ದು ಪಡಿಸಿರುವುದನ್ನು ವಾಪಾಸು ಪಡೆದು ತುರ್ತು ಕ್ರಮ ವಹಿಸಿ, ವಸತಿ ಸೌಲಭ್ಯ ಒದಗಿಸಬೇಕೆಂದು ಬಲವಾಗಿ ಒತ್ತಾಯಿಸುತ್ತದೆ. ಸದರಿ ಸೌಲಭ್ಯವನ್ನು ಒದಗಿಸುವುದಕ್ಕಾಗಿ ಕಳೆದ ಗ್ರಾಮ ಪಂಚಾಯತ್ ಚುನಾವಣೆಯ ಪೂರ್ವವೇ ರಾಜ್ಯ ಸರಕಾರ ಪ್ರಕಟಿಸಿತ್ತು. ಅದೇ ರೀತಿ, ಮೊನ್ನೆ ನಡೆದ ಸ್ಥಳೀಯ ಸಂಸ್ಥೆಗಳನ್ನು ಪ್ರತಿನಿಧಿಸುವ ವಿಧಾನ ಪರಿಷತ್ ಚುನಾವಣೆಯ ಸಂದರ್ಭದಲ್ಲೂ ಹೇಳಲಾಗಿತ್ತು.

ಎರಡೂ ಚುನಾವಣೆಗಳ ಪೂರ್ವ ಜನತೆಗೆ ವಾಗ್ದಾನ ನೀಡಿ, ಅಮಿಷ ಒಡ್ಡಿ, ರಾಜಕೀಯ ಲಾಭ ಪಡೆದುಕೊಂಡ ತಮ್ಮ ಸರಕಾರ, ಈಗ ಇಲ್ಲದ ನೆಪಗಳನ್ನು ಹೇಳಿ ವಿಧಾನ ಸಭಾ ಅಧಿವೇಶನದಲ್ಲಿ ಒಂದೆಡೆ ಜನತೆಗೆ ಬೇಕಿಲ್ಲದ ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಸಂರಕ್ಷಣಾ ವಿಧೇಯಕ ಮಂಡಿಸುವ ಗದ್ದಲವೆಬ್ಬಿಸಿ, ಜನತೆಯ ಗಮನವನ್ನು ಬೇರೆಡೆ ಸೆಳೆದು ಮತ್ತೊಂದೆಡೆ, ಬಡವರ ವಸತಿ ಸೌಲಭ್ಯ ರದ್ದುಪಡಿಸಿರುವುದಾಗಿ, ವಸತಿ ಖಾತೆ ಸಚಿವರ ಮೂಲಕ ಪ್ರಕಟಿಸಿರುವುದನ್ನು ಏನೆಂದು ಬಣ್ಣಿಸ ಬೇಕೆಂದು ತಾವುಗಳೇ ಹೇಳಬೇಕೆಂದು ಸಿಪಿಐಎಂ ಒತ್ತಾಯಿಸಿದೆ.

ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯವು ಅತೀವೃಷ್ಠಿ, ಪ್ರವಾಹ, ಕೋವಿಡ್ – 19, ಲಾಕ್ ಡೌನ್ ಗಳು, ಅಗತ್ಯ ವಸ್ತುಗಳ ವ್ಯಾಪಕ ಬೆಲೆ ಏರಿಕೆ, ನಿರುದ್ಯೋಗ ಮುಂತಾದ ಸಂಕಷ್ಟಗಳಿಂದಾಗಿ ರಾಜ್ಯದ ಬಡ ರೈತರು, ಕೂಲಿಕಾರರು, ಕಸುಬುದಾರರು, ಅಸಂಘಟಿತ ಕಾರ್ಮಿಕರು, ದಲಿತರು,ಅಲ್ಪ ಸಂಖ್ಯಾತರು,ಮಹಿಳೆಯರು ಸರಕಾರದಿಂದ ಅಗತ್ಯ ನೆರವು ದೊರೆಯದಾದಾಗ ಇರುವ ವಸತಿಗಳನ್ನು ಮಾರಾಟ ಮಾಡಿ ಬದುಕುಳಿಯಲು ಯತ್ನಿಸಿದ್ದಾರೆ. ಅದೇ ರೀತಿ, ಕುಟುಂಬಗಳು ವಿಭಜನೆಯಾಗಿ ವಸತಿಗಾಗಿ ಹಪ ಹಪಿಸುವವರ ಸಂಖ್ಯೆಯು ಬೆಳೆದಿದೆ. ಕೋಟ್ಯಾಂತರ ವಲಸೆ ದುಡಿಮೆಗಾರರೂ ವಸತಿ ಸೌಲಭ್ಯಗಳಿಲ್ಲದೇ ದುಬಾರಿ ಬಾಡಿಗೆ ಮನೆಗಳಿಂದ ನಲುಗಿ ಹೋಗಿದ್ದಾರೆ. ಈ ರೀತಿಗಳಲ್ಲಿ ವಸತಿ ಹೀನರಾದವರ ಮತ್ತು ಅಗುತ್ತಿರುವವರ ಸಂಖ್ಯೆ ದಿನೇ ದಿನೇ ಬೆಳೆಯುತ್ತಲಿದೆ.

ಈ ರೀತಿ, ಸಮಸ್ಯೆ ತೀವ್ರವಾಗಿ ಬೆಳೆಯುತ್ತಿರುವಾಗ, ಈ ವಸತಿ ರಹಿತ ಬಡವರಿಗಾಗಿ, ವಸತಿ ಯೋಜನೆಯನ್ನು ಹೆಚ್ಚಿನ ಸಾರ್ವಜನಿಕ ಬಂಡವಾಳ ಹೂಡಿಕೆಯ ಮೂಲಕ ಬಲ ಪಡಿಸಿ, ವಿಸ್ಥರಿಸಿ ನೆರವಾಗ ಬೇಕಾದ್ದು ಸರಕಾರದ ಕರ್ತವ್ಯವಾಗಿದೆ. ಇಂತಹ ದುಸ್ಥಿತಿಯ ಸಂದರ್ಭದಲ್ಲಿ, ತಮ್ಮ ಸರಕಾರ ಈ ರೀತಿ, ವಸತಿ ಹೀನರನ್ನು, ಬಡವರನ್ನು ಹಿಂಸಿಸುವ ಕುಕೃತ್ಯಕ್ಕೆ ಈಡು ಮಾಡಿರುವುದು ಅಮಾನವೀಯ ಕ್ರೌರ್ಯವಾಗಿದೆ.

ಮುಖ್ಯಮಂತ್ರಿಗಳು ತಕ್ಷಣವೇ ಮದ್ಯ ಪ್ರವೇಶಿಸಿ, ರಾಜ್ಯದ ಕೋಟ್ಯಾಂತರ ವಸತಿ ಹೀನರ ರಕ್ಷಣೆಗೆ ಸಾರ್ವಜನಿಕ ಬಂಡವಾಳ ಹೂಡಿಕೆಯನ್ನು ವ್ಯಾಪಕವಾಗಿ ಹೆಚ್ಚಿಸಿ ಎಲ್ಲಾ ವಸತಿ ಹೀನರಿಗೆ ವಸತಿ ಒದಗಿಸಲು ವಸತಿ ಯೋಜನೆಯನ್ನು ಬಲ ಪಡಿಸಬೇಕು. ಈಗಾಗಲೇ ಪ್ರಕಟಿಸಲಾದ ಮತ್ತು ರದ್ದಾದ ವಸತಿ ಸೌಲಭ್ಯ ಜಾರಿಗೊಳಿಸಬೇಕೆಂದು ಸಿಪಿಐಎಂ ಆಗ್ರಹಿಸಿದೆ.

ಭವಿಷ್ಯನಿಧಿ–ಪಿಂಚಣಿ, ವಸತಿ ಯೋಜನೆ ಜಾರಿಗೆ ಆಗ್ರಹಿಸಿ ಹಮಾಲಿ ಕಾರ್ಮಿಕರ ಪ್ರತಿಭಟನೆ

ಭವಿಷ್ಯನಿಧಿ–ಪಿಂಚಣಿ, ವಸತಿ ಯೋಜನೆಗಾಗಿ ಹಾಗೂ ಎಪಿಎಂಸಿ ತಿದ್ದುಪಡಿ ಕಾಯ್ದೆ ವಾಪಸ್ಸಾತಿಗಾಗಿ ಆಗ್ರಹಿಸಿ ಅಸಂಘಟಿತ ಹಮಾಲಿ ಕಾರ್ಮಿಕರು ಇಂದು ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್ (ಸಿಐಟಿಯು) ನೇತೃತ್ವದಲ್ಲಿ ಬೆಳಗಾವಿ ಚಲೋ ನಡೆಸುವ ಮೂಲಕ ಪ್ರತಿಭಟನೆ ನಡೆಸಿದ್ದಾರೆ.

ಬೆಳಗಾವಿಯ ಸುವರ್ಣಸೌಧ ಮುಂಭಾಗ ನಡೆದ ಪ್ರತಿಭಟನೆ ಉದ್ದೇಶಿಸಿ ಸಂಘಟನೆಯ ರಾಜ್ಯಾಧ್ಯಕ್ಷ ಕೆ.ಮಹಾಂತೇಶ್ ಮಾತನಾಡುತ್ತಾ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಸ್ಥಾಪನೆಯಾಗಿ ದಶಕಗಳೇ ಕಳೆದರೂ ಮಂಡಳಿಯಿಂದ ಕನಿಷ್ಟ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ನೀಡಲು ಸಾಧ್ಯವಾಗಿಲ್ಲ. ಮಂಡಳಿಗೆ ಸರಕಾರ ಹಣಕಾಸಿನ ನೇರವು ನೀಡುತ್ತಿಲ್ಲ ಇನ್ನೊಂದಡೆ ಮಂಡಳಿಯೂ

ಪುಟ 4 ನೋಡಿ



ಮತಾಂಧ, ಜಾತಿವಾದಿ ಹಾಗೂ ಭಾಷಾಂಧ ಶಕ್ತಿಗಳ ಕೈನಲ್ಲಿ ರಾಜ್ಯಭಾರ–ಸಿಪಿಐಎಂ ಖಂಡನೆ

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಯನ್ನು ನಾಶಗೊಳಿಸಿ ರಾಜ್ಯವನ್ನು ಮತಾಂಧರು, ಜಾತಿವಾದಿಗಳು ಮತ್ತು ಭಾಷಾಂಧ ಶಕ್ತಿಗಳಿಗೆ ವಹಿಸಿಕೊಟ್ಟಿದೆ ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ರಾಜ್ಯ ಘಟಕ, ರಾಜ್ಯ ಸರಕಾರದ ಆಡಳಿತ ರಹಿತ ದುರ್ವರ್ತನೆಯನ್ನು ಬಲವಾಗಿ ಖಂಡಿಸಿದೆ.

ರಾಜ್ಯ ಸರಕಾರ ತನ್ನ ಭ್ರಷ್ಟತೆಯ ಹಾಗೂ ಲೂಟಿಕೋರ ಕಾರ್ಪೋರೇಟ್ ಗುಲಾಮಿಕೆಯ ಕ್ರೂರ ಮುಖವನ್ನು, ಕನ್ನಡ ವಿರೋಧಿತನವನ್ನು ಮುಚ್ಚಿಟ್ಟುಕೊಳ್ಳಲು ರಾಜ್ಯದ ಜನತೆಯ ಗಮನವನ್ನು ಬೇರಡೆ ಸೆಳೆದು ಒಡೆದಾಳುವ ಕುತಂತ್ರದ ಭಾಗವಾಗಿ ಈ ಎಲ್ಲ ಶಕ್ತಿಗಳು ವಿಜೃಂಭಿಸುವಂತಾಗಿದೆಯೆಂದು ಸಿಪಿಐಎಂ ತನ್ನ ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿದೆ.

ಒಕ್ಕೂಟ ಸರಕಾರದ ಇಂತಹ ಎಲ್ಲ ದುಷ್ಟ ಆಟಗಳನ್ನು ದೇಶದ ರೈತರು, ಕಾರ್ಮಿಕರು, ನಾಗರೀಕರು ಒಂದಾಗಿ ಸೋಲಿಸಿ, ಪ್ರಧಾನ ಮಂತ್ರಿಗಳನ್ನು ಮಂಡಿಯೂರುವಂತೆ ಮಾಡಿರುವಾಗ, ರಾಜ್ಯ ಸರಕಾರಕ್ಕೂ ರಾಜ್ಯದ ಜನತೆ ಅದೇ ಪರಿಸ್ಥಿತಿ ಉಂಟು ಮಾಡಲಿದ್ದಾರೆಂದು ಮುಖ್ಯಮಂತ್ರಿಗಳನ್ನು ಸಿಪಿಐ(ಎಂ) ಎಚ್ಚರಿಸಿದೆ.

ಕಾನೂನು ಸುವ್ಯವಸ್ಥೆ ರಕ್ಷಣೆಗೆ ಅದನ್ನು ನಿರ್ವಹಿಸುವ ಅಧಿಕಾರಿಗಳಿಗೆ, ಅವರ ಅಧಿಕಾರವನ್ನು ಚಲಾಯಿಸಲು ಬಿಡುವಂತೆ, ಅವರ ಮೇಲಿನ ಮತಾಂಧ ಹಾಗೂ ಲೂಟಿಕೋರ ಕಾರ್ಪೋರೇಟ್ ರಾಜಕೀಯ ಒತ್ತಡವನ್ನು ಮತ್ತು ನಿಯಂತ್ರಣವನ್ನು ತಡೆಯುವಂತೆ ಒತ್ತಾಯಿಸಿದೆ.

ಮಂಗಳೂರಿನ ಉಪ್ಪಿನಂಗಡಿಯಲ್ಲಿ, ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ, ಮಂಡ್ಯ ಜಿಲ್ಲೆಯ ಶ್ರೀ ರಂಗ ಪಟ್ಟಣದಲ್ಲಿ, ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಮತಾಂಧ ಶಕ್ತಿಗಳು ಮತೀಯ ಗಲಭೆಯನ್ನುಂಟು ಮಾಡುತ್ತಾ ಜನತೆಗೆ ಮತ್ತು ಅಲ್ಪಸಂಖ್ಯಾತರ ನಡುವೆ ಭೀತಿಯನ್ನುಂಟು ಮಾಡುತ್ತಿದ್ದಾರೆ.ಸರಕಾರವೇ ಸಂವಿಧಾನ ಹಾಗೂ ಪ್ರಜಾಪ್ರಭುತ್ವ ವಿರೋಧಿಯಾದ ಮತಾಂತರ ನಿಷೇಧ, ಲವ್ ಜೆಹಾದ್ ನಿಷೇದ ಮುಂತಾದ ಕಾಯ್ದೆಗಳನ್ನು ಜಾರಿಗೊಳಿಸುತ್ತೇನೆಂದು ಹೇಳುತ್ತಾ ವಿಭಜನಕಾರಿ ದುಷ್ಕೃತ್ಯಕ್ಕೆ, ಮತಾಂಧ ಶಕ್ತಿಗಳಿಗೆ ಕುಮ್ಮಕ್ಕು ನೀಡುತ್ತಿದೆ.

ಅಲ್ಲದೇ, ಮತಾಂಧರ ಜೊತೆ ಸೇರಿದ ಜಾತಿವಾದಿ ಶಕ್ತಿಗಳು ಮಕ್ಕಳ ಆಹಾರದ ಹಕ್ಕಿನ ಮೇಲೆ ದಾಳಿ ನಡೆಸುತ್ತಿದ್ದಾರೆ. ಅಪೌಷ್ಠಿಕತೆ ನಿವಾರಣೆಗೆ ಮೊಟ್ಟೆ ವಿತರಣೆಯನ್ನು ವಿರೋಧಿಸುತ್ತಾ ಮಾಂಸಹಾರಿಗಳು ಮತ್ತು ಸಸ್ಯ ಹಾರಿಗಳ ನಡುವೆ ವಿಭಜನೆ ತರಲು ಕ್ರಮವಹಿಸುತ್ತಿದ್ದಾರೆ.

ಅದೇ ರೀತಿ, ಭಾಷಾಂಧ ಶಕ್ತಿಗಳು ಭಾಷಾಂಧತೆಯ ಆಧಾರದಲ್ಲಿ ವಿವಿಧ ಭಾಷಿಕರ ನಡುವೆ ರಾಜ್ಯವನ್ನು ಒಡೆಯಲು, ಐತಿಹಾಸಿಕ ಮಹಾನುಭಾವರ ಪ್ರತಿಮೆಗಳನ್ನು ಭಗ್ನ ಮಾಡುವ, ಮಸಿ ಬಳೆಯುವ ದುಷ್ಕೃತ್ಯದಲ್ಲಿ ತೊಡಗಿದೆ.

ಇವೆಲ್ಲವೂ ತನ್ನ ಕುಕೃತ್ಯಗಳನ್ನು ಮುಚ್ಚಿಟ್ಟುಕೊಳ್ಳುವ ಸರಕಾರದ ದುಷ್ಕೃತ್ಯದ ಭಾಗವಾಗಿಯೇ ನಡೆಯುತ್ತಿವೆ. ಮತಾಂಧ ಹಾಗು ಲೂಟಿಕೋರ ರಾಜಕೀಯ ಒತ್ತಡದಿಂದಾಗಿ ಅಧಿಕಾರಿಗಳು ಈ ದುಷ್ಕೃತ್ಯಗಳನ್ನು ಕಣ್ಣಿಟ್ಟು ಕೊಂಡು ನೋಡುತ್ತಾ ಕುಳಿತು ಕೊಳ್ಳುವ ದುಸ್ಥಿತಿ ಉಂಟಾಗಿದೆಯೆಂದು ಕಟುವಾಗಿ ವಿಶ್ಲೇಷಿಸಿದೆ.

ರಾಜ್ಯ ಸರಕಾರ ಈ ಕೂಡಲೇ ಇದೇ ಅಧಿವೇಶನದಲ್ಲಿ ರೈತ ವಿರೋಧಿಯಾದ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ– 2020, ಎಪಿಎಂಸಿ ತಿದ್ದುಪಡಿ ಕಾಯ್ದೆ – 2020, ಜಾನುವಾರು ಹತ್ಯೆ ನಿಷೇಧ ಕಾಯ್ದೆ – 2020 ಗಳನ್ನು ವಾಪಾಸು ಪಡೆಯಬೇಕು ಮತ್ತು ಕನ್ನಡ ವಿರೋಧಿ ಹಾಗೂ ಬಡವರು, ದಲಿತರು, ಮಹಿಳೆಯರ ವಿರೋಧಿಯಾದ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಜಾರಿಯನ್ನು ಕೂಡಲೇ ನಿಲ್ಲಿಸಬೇಕು.

ರಾಜ್ಯಾದ್ಯಂತ ರೈತರು ಅತಿವೃಷ್ಠಿ ಹಾಗೂ ಪ್ರವಾಹಗಳಿಂದಾಗಿ ಆತ್ಮಹತ್ಯೆಗೀಡಿದ್ದು ಅವರ ರಕ್ಷಣೆಗಾಗಿ ಮತ್ತು ಬಡವರ ರಕ್ಷಣೆಗಾಗಿ ಖಾಸಗೀಯದ್ದು ಸೇರಿದಂತೆ ಎಲ್ಲ ಸಾಲವನ್ನು ಮನ್ನಾ ಮಾಡಬೇಕು.

ರಾಜ್ಯ ಸರಕಾರದ ಬ್ರಹ್ಮಾಂಡ ಭ್ರಷ್ಟಾಚಾರ, ಗುತ್ತಿಗೆ ದಾರರಿಂದ ಪಡೆಯುತ್ತಿರುವ ಶೇ. 40 ಲಂಚದ ಮತ್ತು ಬಿಟ್ ಕಾಯಿನ್ ಹಗರಣದಲ್ಲಿ ಸಾರ್ವಜನಿಕ ಇಲಾಖೆಗಳ ಹಣದ ಲೂಟಿಗಳನ್ನು ಸ್ವತಂತ್ರ ನ್ಯಾಯಾಂಗ ತನಿಖೆಗೊಳ ಪಡಿಸಲು ಕ್ರಮವಹಿಸಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಭವಿಷ್ಯನಿಧಿ–ಪಿಂಚಣಿ, ವಸತಿ ಯೋಜನೆ ಜಾರಿಗೆ...

ಪುಟ 3 ರಿಂದ

ಹಣಕಾಸಿನ ಸಂಪನ್ಮೂಲ ಕ್ರೋಢಿಕರಿಸಿ ಸೌಲಭ್ಯಗಳನ್ನು ಜಾರಿಮಾಡಲು ಮುಂದಾಗುತ್ತಿಲ್ಲ. ಅಸಂಘಟಿತ ಕಾರ್ಮಿಕರನ್ನು ಗುರುತಿಸಲು ನೀಡಲಾಗುತ್ತಿರುವ ಅಂಬೇಡ್ಕರ ಸಹಾಯ ಹಸ್ತ ಸ್ಮಾರ್ಟ್ ಕಾರ್ಡುಗಳನ್ನು ಸಮರ್ಪಕವಾಗಿ ವಿತರಿಸಲು ಸಾಧ್ಯವಾಗುತ್ತಿಲ್ಲ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ದೇಶದ ಎಲ್ಲಾ ಅಸಂಘಟಿತ ಕಾರ್ಮಿಕರ ನೋಂದಣಿಗಾಗಿ ಡಾಟಾಬೇಸ್ ಪೋರ್ಟಲ್ ಇ–ಶ್ರಮ ಕಾರ್ಡು ನೀಡಲಾಗುತ್ತಿದೆ ಅಷ್ಟೇ ಆದರೇ ಈ ಅಂಬೇಡ್ಕರ ಸಹಾಯ ಹಸ್ತ ಸ್ಮಾರ್ಟ್ ಕಾರ್ಡುಗಳನ್ನು ಹಾಗೂ ಇ–ಶ್ರಮ ಕಾರ್ಡು ಹೊಂದಿದವರಿಗೆ ಕೂಡಲೇ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಜಾರಿಮಾಡುವುದು ತುರ್ತು ಅಗತ್ಯವಾಗಿದೆ ಎಂದು ಆಗ್ರಹಿಸಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಮಹೇಶ್ ಪತ್ತಾರ ಮಾತನಾಡಿ, "ಹಮಾಲಿ ಕಾರ್ಮಿಕರಿಗೆ ವಸತಿ ಯೋಜನೆ ಜಾರಿಮಾಡಬೇಕು. ಎಪಿಎಂಸಿ ಕಾಯಕ ನಿಧಿ ಅಡಿ ನಿವೃತ್ತಿ ಪರಿಹಾರ ನೀಡಬೇಕು, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಿಂದ ಈಗಾಗಲೇ ಸರಕಾರದ ಮುಂದಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಭವಿಷ್ಯನಿಧಿ ಯೋಜನೆಯನ್ನು ಮತ್ತು ಪಿಂಚಣಿ ಸೌಲಭ್ಯವನ್ನು ಜಾರಿಮಾಡಬೇಕು, ಲೋಡಿಂಗ್ ಅನ್‌ಲೋಡಿಂಗ್ ಉದ್ದಿಮೆಗೆ ಕನಿಷ್ಟ ವೇತನ ಜಾರಿಮಾಡಿ ಹಮಾಲಿ ಕೂಲಿಗಳನ್ನು ನಿಗದಿಗೊಳಿಸಲಾಗಿದ್ದು ಎಲ್ಲಾ ವಿಭಾಗದಲ್ಲಿ ಕನಿಷ್ಟ ವೇತನ ಜಾರಿಯಾಗುವಂತೆ ಕಾರ್ಮಿಕ ಇಲಾಖೆ ಮುತುವರ್ಜಿ ವಹಿಸಬೇಕೆಂದು ನಮ್ಮ ಆಗ್ರಹವಾಗಿದೆ. ತೀವ್ರ ಸಂಕಷ್ಟದಲ್ಲಿರುವ ಹಮಾಲಿ ಕಾರ್ಮಿಕರು ಸೇರಿದಂತೆ ಅಸಂಘಟಿತರ ಕಾರ್ಮಿಕರ ನೆರವಿಗೆ ಬರಲು ಹೆಚ್ಚಿನ ಅನುಧಾನವನ್ನು ಸರಕಾರ ಘೋಷಿಸಬೇಕು ಮತ್ತು ಹಮಾಲಿ ಕಾರ್ಮಿಕರ ಪ್ರತ್ಯೇಕ ಮಂಡಳಿ ರಚಿಸಿ ಅಗತ್ಯ ಸೌಲಭ್ಯಗಳನ್ನು ಜಾರಿಮಾಡಬೇಕೆಂದು ಒತ್ತಾಯಿಸಿದರು.

ರಾಜ್ಯದ ಎಪಿಎಂಸಿ, ಮಿಲ್–ಗೋಡೌನ್–ವೇರಹೌಸ್, ನಗರ ಗ್ರಾಮೀಣ ಬಜಾರ, ಬಸ್ ಸ್ಟ್ಯಾಂಡ್, ಬಂದರು ಮತ್ತು ಸರಕಾರದ ವಿವಿಧ ನಿಗಮಗಳಾದ ಕೆಎಸ್‌ಬಿಸಿಎಲ್, ಕೆಎಸ್‌ಸಿಎಫ್‌ಸಿ ಸಾವಿರಾರು ಹಮಾಲಿ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉದ್ಯೋಗದ ಹಕ್ಕಿಗಾಗಿ ಯುವಜನರ ಪಾದಯಾತ್ರೆ





ನಿರುದ್ಯೋಗ ಸಮಸ್ಯೆ ಸ್ವತಂತ್ರ ಭಾರತ ಎಂದೂ ಕಂಡು ಕೇಳರಿಯದಂತಹ ಭೀಕರ ಸ್ವರೂಪಕ್ಕೆ ಬಂದು ನಿಂತಿದೆ. ಪ್ರತಿ ಮನೆಯಲ್ಲೂ ನಿರುದ್ಯೋಗಿ ಯುವಜನರ ದಂಡೇ ನಿರ್ಮಾಣಗೊಂಡಿದೆ. ವಿದ್ಯಾವಂತ ಯುವಜನರ ಕನಸುಗಳು ಭಗ್ನಗೊಂಡು ಹತಾಶತೆಗೆ ಒಳಗಾಗಿದ್ದಾರೆ. ಯುವಜನರ ಪಾಲಿಗೆ ಕರಾಳವಾಗಿರುವ ಈ ಭೀಕರ ನಿರುದ್ಯೋಗ ಸಮಸ್ಯೆಯ ವಿರುದ್ಧ ನಿರ್ಣಾಯಕ ಆಂದೋಲನವನ್ನು ಕೈಗೆತ್ತಿಕೊಳ್ಳಬೇಕಾಗಿದೆ ಎಂದು ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಮುನೀರ್ ಕಾಟಿಪಳ್ಳ ನಿನ್ನೆ 17ಡಿಸೆಂಬರ್ 2021 ರಂದು ಬೋಳಾರದ ಎ.ಕೆ.ಜಿ ಭವನದಲ್ಲಿ ಡಿವೈಎಫ್ಐ ಮಂಗಳೂರು ನಗರ ಸಮಿತಿ ಆಯೋಜಿಸಿದ ಯುವಜನರ ನಡಿಗೆ ಉದ್ಯೋಗದ ಕಡೆಗೆ ಉದ್ಯೋಗ ಸೃಷ್ಟಿಸಿ, ಸ್ಥಳೀಯರಿಗೆ ಆದ್ಯತೆ ಒದಗಿಸಲು ಹಾಗೂ ಖಾಲಿ ಇರುವ ಹುದ್ದೆಗಳನ್ನು ಭರ್ತಿಗೊಳಿಸಲು ಒತ್ತಾಯಿಸಿ ಕೈಗೊಳ್ಳಲಿರುವ ಯುವಜನರ ಪಾದಯಾತ್ರೆಯ ಸಿದ್ದತೆಗಾಗಿ ಸೇರಿದ ಡಿವೈಎಫ್ಐ ಮಂಗಳೂರು ನಗರದ ಪ್ರಮುಖ ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ದ.ಕ ಜಿಲ್ಲೆಯಲ್ಲಿ ಪಿಯುಸಿಗಿಂತ ಮೇಲ್ಪಡೆ ಸರಿ ಸುಮಾರು ಒಂದುವರೆ ಲಕ್ಷ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಶಿಕ್ಷಣ ಅತ್ಯಂತ ದುಬಾರಿಯಾಗಿರುವ ಈ ಕಾಲದಲ್ಲಿ ಪ್ರತೀ ವರುಷ ಶಿಕ್ಷಣ ಪಡೆದು ಹೊರಬರುತ್ತಿರುವ ಸುಮಾರು 40 ಸಾವಿರದಷ್ಟು ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ಎಲ್ಲಿವೆ? ಶಾಲಾ ಕಾಲೇಜುಗಳು ನಿರುದ್ಯೋಗಿಗಳನ್ನು ಸೃಷ್ಟಿಸುವ ಕಾರ್ಖಾನೆಗಳಾಗಿ ಬದಲಾಗಿವೆ. ಈಗಾಗಲೇ ಜಿಲ್ಲೆಯಲ್ಲಿ ಸಾವಿರಾರು ಸರಕಾರಿ ಉದ್ಯೋಗಗಳು ಖಾಲಿ ಬಿದ್ದಿವೆ. ಕರಾವಳಿ ಜಿಲ್ಲೆಯಲ್ಲಿ ಸ್ಥಳೀಯವಾಗಿ ಉದ್ಯೋಗಗಳು ಸೃಷ್ಠಿಯಾಗುವ, ಉದ್ಯೋಗಾಧಾರಿತ ಉದ್ಯಮಗಳು ಸ್ಥಾಪನೆಗೊಳ್ಳುವ, ಇಲ್ಲಿನ ಕೈಗಾರಿಕೆಗಳು ಸೇರಿದಂತೆ ಸೃಷ್ಠಿಯಾಗುವ ಉದ್ಯೋಗಗಳಲ್ಲಿ ಸ್ಥಳೀಯರಿಗೆ ಆದ್ಯತೆಯಲ್ಲಿ ದೊಡ್ಡಪಾಲು ಸಿಗುವಂತಹ ನೀತಿಗಳು ಜಾರಿಯಾಗುತ್ತಿಲ್ಲ. ಜಿಲ್ಲೆಯ ಪ್ರಾಕೃತಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಹೊಸ ಉದ್ಯೋಗಗಳನ್ನು ಸೃಷ್ಟಿಮಾಡುವ ಯೋಜನೆಗಳೇ ಸರಕಾರಗಳ ಮುಂದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಯುವಜನತೆ ತಮ್ಮ ಅರ್ಹತೆಗೆ ತಕ್ಕುದಾದ ಉದ್ಯೋಗಗಳನ್ನು ಪಡೆಯುವ ಅವಕಾಶಗಳೇ ಉಳಿದಿಲ್ಲ. ಉದ್ಯೋಗ ವಂಚಿತ ಯುವಜನರು ಸಮಾಜ ಘಾತುಕ ಚಟುವಟಿಕೆಗಳಿಗೆ, ಮತೀಯ ಸಂಘರ್ಷಗಳಿಗೆ ಬಲಿಯಾಗುತ್ತಿದ್ದಾರೆ. ಒಟ್ಟು ಸಾಮಾಜಿಕವಾಗಿ ಗಂಭೀರ ಬಿಕ್ಕಟ್ಟಿಗೆ ಕಾರಣವಾಗುತ್ತಿರುವ ನಿರುದ್ಯೋಗ ಸಮಸ್ಯೆಯ ವಿರುದ್ಧ ಆಂದೋಲನವನ್ನು ರೂಪಿಸಬೇಕಾಗಿದೆ. ಅಂತಹ ಆಂದೋಲನವನ್ನು ಡಿವೈಎಫ್ಐ ಸಂಘಟನೆ ಮುನ್ನಡೆಸಬೇಕಾಗಿದೆ ಎಂದರು.

ಡಿವೈಎಫ್ಐ ದ.ಕ ಜಿಲ್ಲಾಧ್ಯಕ್ಷರಾದ ಬಿ.ಕೆ ಇಮ್ತಿಯಾಜ್, ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಉದ್ಯೋಗದ ಪಾದಯಾತ್ರೆ ಹೋರಾಟದ ರೂಪುರೇಷೆಯ ಕುರಿತು ಮಾತನಾಡಿದರು. ಡಿವೈಎಫ್ಐ ಮಾಜಿ ರಾಜ್ಯಾಧ್ಯಕ್ಷರಾದ ಸುನೀಲ್ ಕುಮಾರ್ ಬಜಾಲ್ ಸಮಾರೋಪ ಭಾಷಣ ಮಾಡಿದರು. ಡಿವೈಎಫ್ಐ ಮಂಗಳೂರು ನಗರ ಅಧ್ಯಕ್ಷರಾದ ನವೀನ್ ಕೊಂಚಾಡಿ, ಕಾರ್ಯದರ್ಶಿ ಸಾಧಿಕ್ ಕಣ್ಣೂರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕುಂದಾಪುರ: ಉದ್ಯೋಗ ಖಾತ್ರಿ ಕೂಲಿ ಬಾಕಿ ವೇತನಕ್ಕೆ ಆಗ್ರಹಿಸಿ ತಾಲೂಕು ಪಂಚಾಯತ್ ಕಚೇರಿ ಎದುರು ಕೂಲಿಕಾರರ ಪ್ರತಿಭಟನೆ



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜ್ಯಾರಿ ಮಾಡಬೇಕು. ನರೇಗಾ ಕೂಲಿ ಕಾರ್ಮಿಕರಿಗೆ ಕೆಲಸದ ವೇತನ ಬಾಕಿ ಹಣವನ್ನು ಬಿಡುಗಡೆಗೊಳಿಸಬೇಕು. ಕೂಲಿಕಾರರಿಗೆ ದಿನ ಒಂದರ ರೂಪಾಯಿ 600/=ವೇತನ ಹಾಗೂ ಎಷ್ಟು ದಿನ ಕೆಲಸ ಬಯಸಿ ಅರ್ಜಿ ಸಲ್ಲಿಸುತ್ತಾರೋ ಅಷ್ಟು ದಿನ ಅವರಿಗೆ ಕೆಲಸ ಒದಗಿಸಬೇಕು ಎಂದು ಅಖಿಲ ಭಾರತ ಕೃಷಿಕೂಲಿಕಾರರ ಸಂಘ(AIAWU) ದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ರಾಜ್ಯ ಸರಕಾರವನ್ನು ಒತ್ತಾಯಿಸಿದರು.

ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ 22 ಡಿಸೆಂಬರ್ 2021 ರಂದು ಕುಂದಾಪುರ ತಾಲೂಕು ಪಂಚಾಯತ್ ಕಚೇರಿ ಎದುರು ಜರುಗಿದ ನರೇಗಾ ಕೂಲಿಕಾರರ ಬೃಹತ್ ಪ್ರತಿಭಟನೆಯಲ್ಲಿ ಕೂಲಿಕಾರ್ಮಿಕರನ್ನು ಉದ್ದೇಶಿಸಿ ಅವರು ಮಾತನಾಡಿದರು. ಕೃಷಿಕೂಲಿಕಾರರ ಸಂಘದ ಜಿಲ್ಲಾ ಉಪಾಧ್ಯಕ್ಷ ರಾಜೀವ ಪಡುಕೋಣೆ ಮಾತನಾಡಿ, ಉದ್ಯೋಗ ಖಾತ್ರಿ ಕೆಲಸಗಾರರಿಗೆ ಬೇಸಿಗೆಯಲ್ಲಿ ಮಣ್ಣುಗಟ್ಟಿಯಾಗಿರುವುದರಿಂದ ಕೆಲಸದ ಪ್ರಮಾಣವನ್ನು ಅರ್ಧದಷ್ಟು ಕಡಿಮೆ ಮಾಡಬೇಕು, ಕೂಲಿಕಾರರ ವಾಸಸ್ಥಳದಿಂದ ಕೆಲಸದ ಸ್ಥಳಕ್ಕೆ ತಲುಪಲು ಪ್ರಯಾಣ ಭತ್ಯೆ ತಪ್ಪದೆ ಕೊಡಬೇಕು ಎಂದು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾ ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಎಚ್. ನರಸಿಂಹ, ಇವರು ನರೇಗಾ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿ, ಕೂಲಿಕಾರರ ನ್ಯಾಯಬದ್ಧ ಹೋರಾಟಕ್ಕೆ ಸಿಐಟಿಯು ಕಾರ್ಮಿಕ ಸಂಘದ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು. ತಾಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿ ಶ್ವೇತ ಎನ್. ರವರ ಮೂಲಕ ಮುಖ್ಯಮಂತ್ರಿಗಳಿಗೆ ಸಾಮೂಹಿಕ ಮನವಿ ನೀಡಿದರು.

ಸೇವಾ ಭದ್ರತೆಯೂ ಇಲ್ಲ, ಖಾಯಮಾತಿಯೂ ಇಲ್ಲ– ಸಂಕಷ್ಟದಲ್ಲಿರುವ ಅತಿಥಿ ಉಪನ್ಯಾಸಕರ ಗೋಳು ಕೇಳುವವರು ಯಾರು?

ಗುರುರಾಜ ದೇಸಾಯಿ



ಸೇವಾ ಭದ್ರತೆ, ಸೇವೆ ಖಾಯಂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬೆಳಗಾವಿಯ ಸುವರ್ಣ ಸೌಧದ ಮುಂದೆ ಅತಿಥಿ ಉಪನ್ಯಾಸಕರು ನಡೆಸುತ್ತಿರುವ ಅನಿರ್ಧಿಷ್ಟಾವಧಿ ಹೋರಾಟ 8 ನೇ ದಿನಕ್ಕೆಕಾಲಿಟ್ಟಿದೆ.

ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರು ಹಲವು ವರ್ಷಗಳಿಂದ ಕಡಿಮೆ ಗೌರವಧನಕ್ಕೆ ಕೆಲಸ ಮಾಡುತ್ತಿದ್ದಾರೆ. ಇದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ಗೌರವಧನ ಹೆಚ್ಚು ಮಾಡುವಂತೆ ಹಲವು ಬಾರಿ ಹೋರಾಟ ಮಾಡಿದರೂ ಸರ್ಕಾರ ಸ್ಪಂದಿಸಿಲ್ಲ ಹಾಗಾಗಿ ಮತ್ತೆ ಈಗ ಅನಿರ್ಧಿಷ್ಟಾವಧಿ ಧರಣಿಗೆ ಕಾರಣವಾಗಿದೆ.

ರಾಜ್ಯದ 430 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 14,564 ಅತಿಥಿ ಉಪನ್ಯಾಸಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಉಪನ್ಯಾಸಕರು ಸೇವಾ ಭದ್ರತೆ, ಕನಿಷ್ಠ ವೇತನ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿಗೆ ತರಗತಿ ಬಹಿಷ್ಕರಿಸಿದ್ದಾರೆ. ಈ ಬಾರಿ ಸರಕಾರ ಪ್ರಮುಖ ನಿರ್ಧಾರ ಕೈಗೊಳ್ಳುವವರೆಗೂ ಹೋರಾಟ ಮುಂದುವರೆಸುವುದಾಗಿ ಅತಿಥಿ ಉಪನ್ಯಾಸಕರು ಘೋಷಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆ ಕುಂಠಿತವಾಗಲಿದೆ ಎಂಬುದನ್ನು ಸರಕಾರ ಅರಿಯಬೇಕು.

10–15 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರಿಗೆ ಸೇವಾಭದ್ರತೆ ಇಲ್ಲದಾಗಿದೆ. ಬಹಳಷ್ಟು ಜನ 45 ರಿಂದ 50 ವರ್ಷ ಮೇಲ್ಪಟ್ಟವರಿದ್ದಾರೆ. ಅವರು ಇತರ ನೌಕರಿಗೆ ಪರೀಕ್ಷೆ ಬರೆಯುವ ವಯೋಮಾನವನ್ನು ಕಳೆದುಕೊಂಡಿದ್ದಾರೆ. ಕೇವಲ ಏಳುಂಟು ಸಾವಿರ ರೂ. ಗೆ ನಿತ್ಯ ವಿದ್ಯಾರ್ಥಿಗಳಿಗೆ ಅಕ್ಷರ ಜ್ಞಾನ ಬಿತ್ತುವ ಅತಿಥಿ ಉಪನ್ಯಾಸಕನ ಎದೆಯಾಳದಲ್ಲಿ ನೋವೆ ತುಂಬಿಕೊಂಡಿದೆ. ಎರಡು ಮೂರು ತಿಂಗಳಿಗೊಮ್ಮೆ ವೇತನ ಬಿಡುಗಡೆಯಾಗುತ್ತದೆ. ಕೆಲ ಬಾರಿ ಅದು ಆರು ತಿಂಗಳಿಗೆ ಹೋದ ಉದಾಹರಣೆಯೂ ಇದೆ. ಸರಕಾರ ನೀಡುವ ಅಲ್ಪ ಸಂಬಳದಲ್ಲಿ ನಗರ ಪ್ರದೇಶದಲ್ಲಿದ್ದು ಜೀವನ ನಿರ್ವಹಣೆ ಮಾಡುವುದ ಸುಲಭದ ಮಾತಲ್ಲ. ಕುಟುಂಬದ ನಿರ್ವಹಣೆ, ಮಕ್ಕಳ ಶಿಕ್ಷಣ ಹೀಗೆ ಹತ್ತಾರು ಸವಾಲುಗಳಿವೆ. ಎಷ್ಟೂ ಅತಿಥಿ ಶಿಕ್ಷಕರು ಬಡ್ಡಿ ರೂಪದಲ್ಲಿ ಸಾಲ ಪಡೆದು ಜೀವನ ನಡೆಸುತ್ತಿದ್ದಾರೆ. ಸಮಾನ ಕೆಲಸಕ್ಕೆ–ಸಮಾನ ವೇತನ ನೀಡಬೇಕೆಂದು ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟಿದೆ. ರಾಜ್ಯ ಸರ್ಕಾರ ಕಾಯಂ ಉಪನ್ಯಾಸಕರಿಗೆ ನೀಡುವ ಸಂಬಳದ ಜತೆಗೆ ಅವರಿಗೆ ನೀಡುವ ಎಲ್ಲಾ ಸೇವಾ ಭದ್ರತೆಗಳನ್ನು ಅತಿಥಿ ಉಪನ್ಯಾಸಕರಿಗೂ ಒದಗಿಸಬೇಕು. ಇಲ್ಲದಿದ್ದರೆ ನ್ಯಾಯಾಂಗ ನಿಂದನೆಯಾಗುತ್ತದೆ ಎಂದು ಕಾನೂನು ತಜ್ಞರು ಹೇಳುತ್ತಾರೆ.



ಸರಕಾರ ಪದವಿ ಕಾಲೇಜುಗಳ ಮಕ್ಕಳ ಭವಿಷ್ಯ ನಿಂತಿರುವುದು ಅತಿಥಿ ಯಪನ್ಯಾಸಕರ ಮೇಲೆ. ಅವರು ಇಲ್ಲದೆ ಹೋದರೆ ಉಪನ್ಯಾಸಕರ ಪರದಾಟ ಹೆಚ್ಚಾಗುತ್ತಿತ್ತು. ಒಬ್ಬ ಸರಕಾರಿ ಉಪನ್ಯಾಸಕನಿಗೆ ಲಕ್ಷಾಂತರ ರೂ ವೇತನ ನೀಡಬೇಕು. ಅದೇ ಅತಿಥಿ ಉಪನ್ಯಾಸಕರಾದರೆ ಎಂಟತ್ತು ಸಾವಿರ ರೂ ಕೆಲಸ ಮಾಡುತ್ತಾರೆ ಎಂಬ ಪಾಲಿಸಿ ಸರಕಾರದ್ದು. ಸರಕಾರಿ ನೇಮಕಾತಿ ಮಾಡಿಕೊಂಡರೆ ಲಕ್ಷ ರೂ ವೇತನ ನೀಡುವಲ್ಲಿ 10 ಜನ ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡು ಪಾಠ ಪ್ರವಚನ ನಿರ್ವಹಿಸಬಹುದು ಎಂಬುದು ಸರಕಾರದ ಲೆಕ್ಕಾಚಾರ ಇದ್ದಂತೆ ಕಾಣುತ್ತಿದೆ. 15 ವರ್ಷಗಳಿಂದ ಅತಿಥಿ ಉಪನ್ಯಾಸಕಾರಾಗಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರನ್ನು ಮುಂದುವರೆಸುವ ಭರವಸೆಯನ್ನೂ ನೀಡುತ್ತಿಲ್ಲ. ಎಷ್ಟೋಜನ ಅತಿಥಿ ಉಪನ್ಯಾಸಕರು ಒಂದು ಬಾರಿ ಆಯ್ಕೆಯಾದರೆ ಮತ್ತೆ ಮರುವರ್ಷ ಅರ್ಜಿ ಸಲ್ಲಿಸಬೇಕು. ಆಗ ಇವರೇ ಆಯ್ಕೆ ಯಾಗುತ್ತಾರೆ ಎಂಬ ಭರವಸೆಯೂ ಇರುವುದಿಲ್ಲ. ಇದು ಅತಿಥಿ ಉಪನ್ಯಾಸಕರನ್ನು ಇನ್ನಷ್ಟು ಕಂಗಾಲಾಗಿಸಿದೆ.

'ಅತಿಥಿ ಉಪನ್ಯಾಸಕರು ಪದವಿ, ಸ್ನಾತಕೋತ್ತರ ಪದವಿ, ಡಾಕ್ಟರೇಟ್ ಪಡೆದಿದ್ದರೂ ಅವರ ಪರಿಸ್ಥಿತಿ ಕೂಲಿ ಕಾರ್ಮಿಕರಿಗಿಂತ ಹೀನಾಯವಾಗಿದೆ. ಜೀತಮುಕ್ತ ಸಮಾಜ, ಶೋಷಣೆ ಮುಕ್ತ ಸಮಾಜ ನಿರ್ಮಾಣಕ್ಕೆ ಕಾನೂನು ತರುತ್ತಿರುವ ಸರ್ಕಾರಗಳು ಶಿಕ್ಷಣ ಇಲಾಖೆಯಲ್ಲಿ ಜೀತ ಮತ್ತು ಶೋಷಣೆಯ ವಾತಾವರಣ ನಿರ್ಮಿಸಿರುವುದು ದೇಶದ ದುರಂತ' ಎಂಬುದು ಕಳವಳಕಾರಿ ವಿಚಾರವಾಗಿದೆ. 'ಕೆಸಿಎಸ್‌ಆರ್ 1977ರ ನಿಯಮ (1), (2) (3) ಮತ್ತು 14ರ ಅಡಿಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ, ತಾತ್ಕಾಲಿಕ ನೌಕರರನ್ನು ಸೇವೆಯಲ್ಲಿ ವಿಲೀನಗಳಿಸಲು ಅವಕಾಶವಿದೆ. ಸಂವಿಧಾನದ ಕಲಂ 209ರ ಪ್ರಕಾರ ತಾತ್ಕಾಲಿಕ ನೌಕರರನ್ನು ಕಾಯಂ ಮಾಡಲು ಇಲಾಖೆಯ ಸಿ ಮತ್ತು ಆರ್ ನಿಯಮಾವಳಿಗೆ ತಿದ್ದುಪಡಿ ಮಾಡಬಹುದು' ಎಂಬುದು ಅತಿಥಿ ಉಪನ್ಯಾಸಕರ ವಾದವಾಗಿದೆ. ಆದರೆ ಉನ್ನತ ಶಿಕ್ಷಣ ಸಚಿವರು ಕನಿಷ್ಠ ಈ ನಿಯಮ ಜಾರಿ ಇದೆಯಾ, ಸಾಧ್ಯವಾ ಎಂದು ಯೋಚನೆ ಮಾಡುತ್ತಿಲ್ಲ. ತಜ್ಞರ ಸಲಹೆಯನ್ನೂ ಪಡೆಯುತ್ತಿಲ್ಲ. ಬದಲಾಗಿ ಖಾಯಂ ಮಾಡಲು ಸಾಧ್ಯವಿಲ್ಲ ಎಂದು ಕಡ್ಡಿ ತುಂಡಾಗಿಸಿದಂತೆ ಮಾತನಾಡುತ್ತಿದ್ದಾರೆ.

ಸೇವಾ ಭದ್ರತೆ ನೀಡಿ, ಖಾಯಂ ಮಾಡಿ ಎಂದು ಅತಿಥಿ ಉಪನ್ಯಾಸಕರು 'ಹಲವು ವರ್ಷಗಳಿಂದ ಪ್ರತಿಭಟನೆ ಮೂಲಕ ಬೇಡಿಕೆ ಸಲ್ಲಿಸಿದರೂ ನೀಡಿದರೂ ಸರ್ಕಾರ ಕುಂಟು ಆಶ್ವಾಸನೆ ನೀಡುತ್ತಾ ಕಾಲಹರಣ ಮಾಡುತ್ತಿರುವುದು ಸ್ಪಷ್ಟವಾಗಿ ಗೊತ್ತಾಗುತ್ತಿದೆ. ರಾಜ್ಯದ ಪದವಿ ಮಕ್ಕಳ ಶಿಕ್ಷಣ ಭವಿಷ್ಯಕ್ಕೆ ಅತಿಥಿ ಉಪನ್ಯಾಸಕರ ಕೊಡುಗೆ ಅಪಾರ. ಆದರೆ, ಅವರ ಕಷ್ಟಕ್ಕೆ ಉನ್ನತ ಶಿಕ್ಷಣ ಇಲಾಖೆ ಮತ್ತು ಮುಖ್ಯಮಂತ್ರಿಗಳು ಸ್ಪಂದಿಸದಿರುವುದು ದುರಂತದ ಸಂಗತಿ. ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಿ ಎಂದು ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿವೆ. ಮಜ್ಜಿಗೆ, ತರಕಾರಿ, ಹಣ್ಣು ಮಾರಾಟದ ಮಾದರಿಯ ಪ್ರತಿಭಟನೆಗಳನ್ನು ನಡೆಸುವ ಮೂಲಕ ಅತಿಥಿ ಉಪನ್ಯಾಸಕರು ಆಕ್ರೋಶವನ್ನು ಹೊರಹಾಕುತ್ತಿದ್ದಾರೆ.

ಇನ್ನಾದರೂ ಸರ್ಕಾರ ಕೂಡಲೇ ಅತಿಥಿ ಉಪನ್ಯಾಸಕರಿಗೆ ಸೇವಾ ಭದ್ರತೆ ಒದಗಿಸಬೇಕು. ದೇಶದ ಇತರೆ ರಾಜ್ಯಗಳ ಮಾದರಿಯಲ್ಲಿ ಕನಿಷ್ಠ ವೇತನ ನಿಗದಿಪಡಿಸಬೇಕು. ಸಹಾಯಕ ಪ್ರಾಧ್ಯಾಪಕರ ನೇಮಕಾತಿಯಲ್ಲಿ ಅತಿಥಿ ಉಪನ್ಯಾಸಕರಿಗೆ ಪ್ರತಿ ವರ್ಷದ ಸೇವೆಗೆ ಕನಿಷ್ಠ 3 ಕೃಪಾಂಕ ನೀಡಬೇಕು. ಮಹಿಳಾ ಅತಿಥಿ ಉಪನ್ಯಾಸಕರಿಗೆ ಕನಿಷ್ಠ 6 ತಿಂಗಳ ವೇತನಸಹಿತ ಮಾತೃತ್ವ ರಜೆ ನೀಡಬೇಕು. ಕೋವಿಡ್ ಸಂದರ್ಭದಲ್ಲಿ ಮೃತಪಟ್ಟ ಅತಿಥಿ ಉಪನ್ಯಾಸಕರ ಕುಟುಂಬಕ್ಕೆ ಪರಿಹಾರ ನೀಡಲು ಮುಂದಾಗಬೇಕಿದೆ. ●

ಯು.ಜಿ.ಡಿ. ಯಲ್ಲಿ ಪೌರ ಕಾರ್ಮಿಕನ ಸಾವು

ಪರಿಹಾರ, ಉದ್ಯೋಗ, ತಪ್ಪಿತಸ್ಥರ ಬಂಧನಕ್ಕೆ ಮುನಿಸಿಪಲ್ ಕಾರ್ಮಿಕರ ಸಂಘದ ಅಗ್ರಹ



ಮ್ಯಾನ್ ಹೋಲ್ ಸ್ವಚ್ಛತೆಗೆ ಇಳಿದ ವೇಳೆ ಮಧು (27) ಪೌರಕಾರ್ಮಿಕ ಇವರು ಉಸಿರುಗಟ್ಟಿ ಮೃತಪಟ್ಟಿರುವ ಘಟನೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ವಾರ್ಡ್ ನಂ.10 ರಲ್ಲಿ 20 ಡಿಸೆಂಬರ್ 2021 ಸೋಮವಾರ ದಂದು ನಡೆದಿದೆ.

ಪಿರಿಯಾಪಟ್ಟಣದ ವಾರ್ಡ್ ನಂ.10 ರಲ್ಲಿ ಮ್ಯಾನ್ ಹೋಲ್ ಸ್ವಚ್ಛತೆಗೆ ಇಳಿದಿದ್ದ ವೇಳೆ ಉಸಿರುಗಟ್ಟಿ ತೀವ್ರ ಅಸ್ವಸ್ಥರಾಗಿದ್ದ ಮಧು ಕೂಡಲೇ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ ಚಿಕಿತ್ಸೆ ಫಲಕಾರಿಯಾಗದೇ ಮಧು ಮೃತಪಟ್ಟಿದ್ದಾರೆ. ಪೌರಕಾರ್ಮಿಕನನ್ನು ಬಲವಂತವಾಗಿ ಮ್ಯಾನ್ ಹೋಲ್‌ಗೆ ಇಳಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘ. ರಿ ಸಿಐಟಿಯು ರಾಜ್ಯ ಸಮಿತಿಯು ಆರೋಪಿಸಿದೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಪೌರಕಾರ್ಮಿಕ ಸಾವನ್ನಪ್ಪಿದ್ದಾರೆ. ದೇಶದ ಸವೋಚ್ಚ ನ್ಯಾಯಲಯದ ತೀರ್ಪಿನಂತೆ ಮೃತನ ಕುಟುಂಬಕ್ಕೆ 25 ಲಕ್ಷ ರೂ. ಪರಿಹಾರ ಹಾಗು ಕುಟುಂಬದ ಅವಲಂಬಿತರಿಗೆ ಖಾಯಂ ಉದ್ಯೋಗವನ್ನು ನೀಡುವಂತೆ ಕರ್ನಾಟಕ ರಾಜ್ಯ ಮುನಿಸಿಪಲ್ ಕಾರ್ಮಿಕರ ಸಂಘ ಸಿಐಟಿಯು ರಾಜ್ಯ ಸಮಿತಿ ಸರ್ಕಾರವನ್ನು ಒತಾಯಿಸಿದೆ.

ಈ ಘಟನೆಗೆ ಕಾರಣವಾಗಿರುವ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಸಹ ಮುನಿಸಿಪಲ್ ಕಾರ್ಮಿಕರ ಸಂಘ.ರಿ ಸಿಐಟಿಯು ರಾಜ್ಯ ಸಮಿತಿ ಅಗ್ರಹ ಪೂರ್ವವಾಗಿ ಸರ್ಕಾರವನ್ನು ಒತ್ತಾಯಿಸಿದೆ. ಪದೆ ಪದೆ ಈ ಯು.ಜಿ.ಡಿ ಗಳಲ್ಲಿ ಸಾವುಗಳನು ನಿಲ್ಲದೆ ಇರಲು ಸರ್ಕಾರದ ತಾತ್ಸಾರ ಬಾವನೆಯೆ ಕಾರಣ ಎಂದು ಸಂಘವು ಆರೋಪಿಸಿದೆ. ಸರ್ಕಾರ ಯು.ಜಿ.ಡಿ ಸಾವುಗಳನ್ನು ನಿಲ್ಲಿಸಲು ಗಂಭಿರ ಕ್ರಮವಹಿಸಲು ಮುನಿಸಿಪಲ್ ಕಾರ್ಮಿಕರ ಸಂಘ ಸಿಐಟಿಯು ಒತ್ತಾಯಿಸಿದೆ. ●







‘ಮತಾಂತರ’ ನಿಷೇಧ ಕಾಯ್ದೆ – ಧಾರ್ಮಿಕ ಸ್ವಾತಂತ್ರ್ಯವನ್ನು ಕಸಿಯುವ ಹುನ್ನಾರ

ಎನ್. ಪ್ರತಾಪ್ ಸಿಂಹ, ಬಿ.ಎನ್. ಮಂಜುನಾಥ್
(ಸಿಪಿಐ(ಎಂ) ಬೆಂಗಳೂರು ದಕ್ಷಿಣ ಮತ್ತು ಉತ್ತರ ಜಿಲ್ಲಾ ಸಮಿತಿಗಳ ಹೇಳಿಕೆಯಿಂದ)

ಕರ್ನಾಟಕದಲ್ಲಿ ಬಿಜೆಪಿ ನೇತೃತ್ವದ ರಾಜ್ಯ ಸರಕಾರವು ಅಂಗೀಕರಿಸಿರುವ ‘ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ 2021’ ಕಾಯ್ದೆಯು ಸಂವಿಧಾನ ಬದ್ಧ ಧಾರ್ಮಿಕ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಕಸಿಯುವ ಸಂವಿಧಾನ ವಿರೋಧಿ ಕ್ರಮವಾಗಿದೆ

ಸಮಾನತೆ–ಸಮಾಜಿಕ ನ್ಯಾಯಗಳೆಂಬ ಉದಾತ್ತ ಮಾನವೀಯ ತತ್ವಗಳ ಆಧಾರದಲ್ಲಿ ಒಂದು ಪ್ರಜಾಸತ್ತಾತ್ಮಕ–ಧರ್ಮನಿರಪೇಕ್ಷ ರಾಷ್ಟ್ರವಾಗಿ ಘೋಷಿಸಿಕೊಂಡಿರುವ ಭಾರತವು ಸಂವಿಧಾನದ 25 ನೇ ಅನುಚ್ಛೇಧದಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಯು ತನಗೆ ಇಷ್ಟ ಬಂದ ಮತ ಧರ್ಮವನ್ನು ಅನುಸರಿಸುವ, ಯಾವುದೇ ಧರ್ಮದ ವಿಚಾರಗಳನ್ನು ಪ್ರಚಾರ ಮಾಡುವ, ಯಾವುದೇ ಮತ ಧರ್ಮವನ್ನು ಅನುಸರಿಸದೇ ಇರುವ ಧಾರ್ಮಿಕ ಸ್ವಾತಂತ್ರ್ಯದ ಹಕ್ಕುಗಳನ್ನು ಖಾತ್ರಿಪಡಿಸಿದೆ.

ಕರ್ನಾಟಕ ಸರಕಾರ ವಿಧಾನಸಭೆ ಅಧಿವೇಶನಲ್ಲಿ ಮಂಡಿಸಿದ ಈ ವಿಧೇಯಕವು ಬಲವಂತ, ಅನುಚಿತ ಪ್ರಭಾವ, ಒತ್ತಾಯ, ಆಮಿಷಗಳ ಮೂಲಕ ಅಥವಾ ಯಾವುದೇ ವಂಚನೆಯ ವಿಧಾನಗಳ ಮೂಲಕ ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಮತಾಂತರ ಆಗುವುದನ್ನು ತಡೆಯುವ ಉದ್ದೇಶವನ್ನು ಹೊಂದಿದೆ ಎಂದು ಸರಕಾರ ಹೇಳಿಕೊಂಡಿದೆ. ಆದರೆ ವಾಸ್ತವವಾಗಿ ಉದ್ದೇಶಿತ ಕಾಯ್ದೆಯು ಜನರ ಸಂವಿಧಾನ ಬದ್ಧ ಹಕ್ಕನ್ನು ಕಿತ್ತುಕೊಳ್ಳುವ ಒಂದು ಸರ್ವಾಧಿಕಾರಿ ಕ್ರಮವಾಗಿದೆ.

ಬಲಾತ್ಕಾರ ಮತ್ತು ಆಮಿಷದ ಮತಾಂತರವನ್ನು ತಡೆಯುವ ಉದ್ದೇಶವೆಂದ್ದು ಹೇಳಲಾದ ಈ ಕಾಯ್ದೆಯು ಹಲವು ಕರಾಳ ಸ್ವರೂಪದ ಆಘಾತಕಾರಿ ಕಟ್ಟಳೆಗಳನ್ನು, ನಿಯಮಗಳನ್ನು ಒಳಗೊಂಡಿದ್ದು ಸಮಾಜದ ಧಾರ್ಮಿಕ ಅಲ್ಪಸಂಖ್ಯಾತರನ್ನು ಗುರಿ ಮಾಡಿಕೊಂಡಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಯಾವುದೇ ಧಾರ್ಮಿಕ ಸಂಸ್ಥೆಯು ನಡೆಸುವ ಶಾಲೆ ಅಥವಾ ಕಾಲೇಜಿನಲ್ಲಿ ಉಚಿತ ಶಿಕ್ಷಣ, ಉದ್ಯೋಗ ನೀಡುವುದನ್ನು ಸಹ ಮತಾಂತರದ ಉದ್ದೇಶದ ಆಮಿಷಗಳ ಪಟ್ಟಿಯಲ್ಲಿ ಸೇರಿಸುವ ಮೂಲಕ ಶತಶತಮಾನಗಳ ಕಾಲ ಮಹಿಳೆಯರು ಸೇರಿದಂತೆ ಅಸ್ಪೃಶ್ಯರು ಮತ್ತು ಶೂದ್ರರಿಗೆ ಅಕ್ಷರ ಜ್ಞಾನವನ್ನು ವಂಚಿಸಿದ ಭಾರತದಲ್ಲಿ ಈ ಈ ಶೋಷಿತ ಸಮುದಾಯಗಳಿಗೆ ಭಾರತದ ಬಹಳಷ್ಟು ಭಾಗಗಳಲ್ಲಿ ಅಕ್ಷರದ ಬೆಳಕು ಸಿಕ್ಕಿದ್ದೇ ಧಾರ್ಮಿಕ ಅಲ್ಪಸಂಖ್ಯಾತ ಸಂಸ್ಥೆಗಳ ಶಾಲಾ ಕಾಲೇಜುಗಳ ಮೂಲಕ ಎಂಬ ಅಂಶವನ್ನು ಈ ಕಾಯ್ದೆ ಸಂಪೂರ್ಣವಾಗಿ ಮರೆಮಾಚಿದೆ.

ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡದ ಸಮುದಾಯದವರನ್ನು ಮತಾಂತರ ಮಾಡುವವರಿಗೆ ಹತ್ತು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಶಿಕ್ಷೆ ಮತ್ತು ದಂಡದಂತಹ ಕರಾಳ ಶಿಕ್ಷೆಯನ್ನು ಕಾಯ್ದೆಯಲ್ಲಿ ನಿಗದಿ ಮಾಡಲಾಗಿದೆ. ದೇಶವು ಸ್ವಾತಂತ್ರ್ಯ ಪಡೆದ ಮುಕ್ಕಾಲು ಶತಮಾನದ ನಂತರವೂ ಭಾರತದಲ್ಲಿ ದಲಿತರಿಗೆ ಅಸ್ಪೃಶ್ಯತೆ ಮತ್ತು ಅಪಮಾನಗಳಿಂದ ಇನ್ನೂ ಮುಕ್ತಿ ಸಿಕ್ಕಿಲ್ಲ. ಜಾತಿ ದೌರ್ಜನ್ಯಗಳಿಗೆ ತಡೆ ಬಿದ್ದಿಲ್ಲ. ಮಹಿಳೆಯರು ಮತ್ತು ಶೋಷಿತ ಸಮುದಾಯಗಳಿಗೆ ಘನತೆಯ ಬದುಕಿನ ಅವಕಾಶ ದೊರೆತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಘನತೆಯ ಬದುಕನ್ನು ಬಯಸಿ ಮತ್ತೊಂದು ಮತಧರ್ಮವನ್ನು ಅಪ್ಪಿಕೊಳ್ಳಲು ಬಯಸುವ ಜನರನ್ನು ಇರುವ ಧರ್ಮದಲ್ಲೇ ಕಟ್ಟಿ ಹಾಕಬೇಕೆನ್ನುವ ಕಾಯ್ದೆಯು ಮತಾಂಧ ಸರ್ವಾಧಿಕಾರಿ ಧೋರಣೆಯನ್ನು ಕಾನೂನು ಬದ್ಧಗೊಳಿಸುವಂತಿದೆ. ಜೊತೆಗೆ ಮತಾಂತರ ನಡೆಸಲಾಗುತ್ತಿದೆ ಎಂದ ಹೆಸರಿನಲ್ಲಿ ಸಮಾಜದಲ್ಲಿ ಗೂಂಡಾಗಿರಿ ನಡೆಸುತ್ತಿರುವ ಸಂಘ ಪರಿವಾರದ ಕಾರ್ಯಕರ್ತರ ಪುಂಡಾಟಿಕೆಗಳಿಗೆ ಇನ್ನಷ್ಟು ಕುಮ್ಮಕ್ಕು ಕೊಡುವಂತಿದೆ.

ಯಾವುದೇ ವ್ಯಕ್ತಿಯು ಮದುವೆಯ ನಂತರ ಮತ್ತು ಮದುವೆಯ ಮುಂಚೆ ಸಹ ಮದುವೆಯ ಕಾರಣಕ್ಕಾಗಿ ಮತಾಂತರ ಆಗುವುದನ್ನು ಸಹ ಈ ಕಾಯ್ದೆಯು ನಿರ್ಬಂಧಿಸುತ್ತದೆ. ಮದುವೆ ಮತ್ತು ಮತ ಧರ್ಮ ಪಾಲನೆಯು ಯಾವುದೇ ವ್ಯಕ್ತಿಯ ವೈಯುಕ್ತಿಕ ಹಕ್ಕಾಗಿದ್ದು ಆಳುವ ಸರಕಾರಗಳಿಗೆ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಲು ಅವಕಾಶ ಕೊಡುವುದು ಎಂದರೆ ಸಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಮೂಲತತ್ವಗಳನ್ನು ಮಣ್ಣು ಪಾಲು ಮಾಡುವುದು ಎಂದೇ ಆಗುತ್ತದೆ. ವಯಸ್ಕ ಯುವಕ–ಯುವತಿಯರು ತಮ್ಮ ಆಯ್ಕೆಯಂತೆ ಮದುವೆ ಆಗುವುದನ್ನು ಮತ್ತು ಅಂತರ್ ಧರ್ಮೀಯ ಪ್ರೇಮ ವಿವಾಹಗಳಾಗುವುದನ್ನು ತಡೆಯುವ ದುರುದ್ದೇಶ ಈ ಕಾಯ್ದೆಯಲ್ಲಿ ಅಡಗಿದೆ. ಇದಲ್ಲದೇ ಮತಾಂತರದ ನೆಪದಲ್ಲಿ ಈ ವಿಷಯಕ್ಕೆ ಸಂಬಂಧವಿಲ್ಲದ ವ್ಯಕ್ತಿಗಳು ಸಹ ಮತ್ತೊಬ್ಬರ ಖಾಸಗಿ ವಿಷಯಗಳಲ್ಲಿ ತಲೆಹಾಕಲು ಮತ್ತು ದೂರು ಕೊಡಲು ಈ ಕಾಯ್ದೆಯು ಅವಕಾಶ ಮಾಡಿಕೊಡುತ್ತದೆ. ಮತಾಂತರದ ಆರೋಪ ಹೊರಿಸಿ ಶಿಕ್ಷಣ ಸಂಸ್ಥೆಗಳು ಸೇರಿದಂತೆ, ಯಾವುದೇ ಅಲ್ಪಸಂಖ್ಯಾತ ಸಂಘ–ಸಂಸ್ಥೆಗಳಿಗೆ ಕಿರುಕುಳ ನೀಡಲು ಮತ್ತು ಸರಕಾರದ ಅನುದಾನವನ್ನು ತಡೆಹಿಡಿಯಲು ಬೇಕಾದಂತೆ ಕಾಯ್ದೆಯಲ್ಲಿ ಅವಕಾಶವನ್ನು ಸೃಷ್ಟಿಸಿಕೊಳ್ಳಲಾಗಿದೆ.

ದುರುದ್ದೇಶ ಪೂರಿತ ಮತಾಂತರ ಮಾಡಲಾಗಿದೆ ಎಂದು ಯಾರ ಮೇಲಾದರೂ ಆರೋಪಿಸಿದರೆ ಅದನ್ನು ಸಾಬೀತು ಮಾಡುವುದು ಆರೋಪ ಮಾಡಿದವರ ಮತ್ತು ಸರಕಾರದ ಹೊಣೆಯಾಗಬೇಕು. ಇದು ಸಹಜ ನ್ಯಾಯ. ಆದರೆ ಈ ಕಾಯ್ದೆಯು ಆರೋಪಕ್ಕೆ ಗುರಿಯಾದವರು ತಾವು ದುರುದ್ದೇಶದ ಮತಾಂತರ ಮಾಡಿಲ್ಲ ಎಂದು ಸಾಬೀತು ಪಡಿಸಬೇಕು ಎಂದು ಈ ಕಾಯ್ದೆ ಹೇಳುತ್ತಿದೆ.

ತೀವ್ರವಾದ ಎರಡು ಕೋವಿಡ್ ಅಲೆಗಳಿಂದ, ಅತಿಯಾಗಿ ಸುರಿದ ಮಳೆಯಿಂದ ಉಂಟಾದ ಅತಿವೃಷ್ಟಿ, ಬೆಲೆ ಏರಿಕೆ, ನಿರುದ್ಯೋಗ, ಅರೆ ಉದ್ಯೋಗ, ಮತ್ತಿತರ ಸಂಕಷ್ಟಗಳು ರಾಜ್ಯದ ರೈತರ, ಕಾರ್ಮಿಕರ, ಜನ ಸಾಮಾನ್ಯರ ಬದುಕನ್ನು ಜರ್ಜರಿತಗೊಳಿಸಿದೆ. ರಾಜ್ಯದಲ್ಲಿ ರಸ್ತೆಗಳು ಸಂಪೂರ್ಣ ಹಾಳಾಗಿದ್ದು ಜನರುಜೀವ ಅಂಗೈಯಲ್ಲಿ ಹಿಡಿದು ಸಂಚಾರ ಮಾಡಬೇಕಿದೆ. ರೈತ ವಿರೋಧಿ ಕಾಯ್ದೆಗಳನ್ನು ಕೇಂದ್ರ ಸರ್ಕಾರರೈತರ ಐತಿಹಾಸಿಕ ಹೋರಾಟದಿಂದ ವಾಪಸ್ಸು ಪಡೆದ ರೀತಿಯಲ್ಲಿ ರಾಜ್ಯದಲ್ಲಿ ರೈತ, ಕಾರ್ಮಿಕ ವಿರೋಧಿ ಕರಾಳ ಕಾಯ್ದೆಗಳನ್ನು ವಾಪಸ್ಸು ಪಡೆಯದೆ ಜಾರಿ ಮಾಡಲು ಹೊರಟಿದೆ. ಬಿಟ್‌ಕಾಯ್ನ್ ಹಗರಣ, ಕಮೀಷನ್ ದಂಧೆ, ಭೂಕಬಳಿಕೆ ಹಗರಣಗಳು ಸೇರಿದಂತೆ ಆಳುವ ಪಕ್ಷದ ಮುಖಂಡರ ಭ್ರಷಾಚಾರಗಳು ಬಯಲಾಗಿ ಜನರು ಆಕ್ರೋಶಗೊಂಡಿದ್ದಾರೆ. ಇಂತಹ ಜನ ವಿರೋಧಿ ಕ್ರಮಗಳು, ಸರ್ಕಾರದ ವೈಫಲ್ಯಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆದು ದಿಕ್ಕು ತಪ್ಪಿಸಲು ರಾಜ್ಯ ಸರ್ಕಾರ ಪ್ರಯತ್ನಿಸುತ್ತಿದೆ. ಇಂತಹ ಪಿತೂರಿಗಳ ಭಾಗವಾಗಿ ‘ಮತಾಂತರ’, ‘ಲವ್ ಜಿಹಾದ್’ ಮುಂತಾದ ಹೆಸರಿನಲ್ಲಿ ಸೌಹಾರ್ದ ಕರ್ನಾಟಕದಲ್ಲಿ ಜನರ ಒಗ್ಗಟ್ಟನ್ನು ಮುರಿಯುವಂತಹ ಮತೀಯವಾದಿ ಉದ್ದೇಶದಿಂದಲೇ ಮತಾಂತರ ನಿಷೇಧ ಕಾಯ್ದೆಯನ್ನು ತರಲು ಮುಂದಾಗಿರುವುದನ್ನು ಸಿಪಿಐ(ಎಂ) ಖಂಡಿಸುತ್ತದೆ.

ಹುಟ್ಟಿನಿಂದ ಬರುವ ಮತಧರ್ಮವು ಯಾವುದೇ ವ್ಯಕ್ತಿಯ ಸ್ವಂತ ಆಯ್ಕೆಯಲ್ಲ. ವ್ಯಕ್ತಿಗಳು ಬೆಳೆದು ವಯಸ್ಕರರಾದಾಗ ತಮಗೆ ಸರಿ ಕಂಡ ಮತಧರ್ಮವನ್ನು ಆರಿಸಿಕೊಳ್ಳುವ ಹಕ್ಕು ಅಥವಾ ಯಾವುದೇ ಧರ್ಮವನ್ನು ಅನುಸರಿಸದಿರುವ ಹಕ್ಕು ಯಾವುದೇ ವ್ಯಕ್ತಿಗೆ ಇದ್ದೇ ಇದೆ. ಇದನ್ನು ಎಲ್ಲಾ ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳೂ ಮಾನವನ ಈ ಮೂಲಭೂತ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಮಾನ್ಯ ಮಾಡಿವೆ ಮತ್ತು ಮಾನ್ಯ ಮಾಡಬೇಕಾಗುತ್ತದೆ. ಹಾಗಾಗಿ ಸಂವಿಧಾನ ವಿರೋಧಿಯಾದ ಈ ‘ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ, 2021’ ವನ್ನು ವಾಪಸ್ಸು ಪಡೆಯಬೇಕು.



















ಮತಾಂತರ-ವಿರೋಧಿ ಮಸೂದೆ: ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಪ್ರಹಾರ

ಪ್ರಕಾಶ ಕಾರಟ್

'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ' ಇತರ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಅಂಗೀಕರಿಸಿದ ಇಂತಹ ಕಾನೂನುಗಳು ಹಾಕಿಕೊಟ್ಟ ರೀತಿಯಲ್ಲೇ ಇದೆ. ಈ ಮಸೂದೆ ರಾಜ್ಯದಲ್ಲಿ ಕ್ರೈಸ್ತರು ಮತ್ತು ಅವರ ಆರಾಧನಾ ಸ್ಥಳಗಳ ಮೇಲೆ ವ್ಯಾಪಕ ಹಲ್ಲೆಗಳ ಹಿನ್ನೆಲೆಯಲ್ಲಿ ಬಂದಿದೆ. ಮತಾಂತರದ ಆಮಿಷಗಳಿಗೆ ಬಡ ದಲಿತರು ಮತ್ತು ಆದಿವಾಸಿಗಳು ಸುಲಭದಲ್ಲಿ ಬಲಿ ಬೀಳುತ್ತಾರೆ ಎಂಬುದು ಆರೆಸ್ಸೆಸ್‌ನ ಬಹುಕಾಲದ ಭಯವನ್ನು ಬಿಂಬಿಸುತ್ತದೆ. ಕ್ರೈಸ್ತ ಧರ್ಮಕ್ಕಾಗಲೀ, ಇಸ್ಲಾಮ್ ಧರ್ಮಕ್ಕಾಗಲೀ ದಲಿತರು ಮತ್ತು ಆದಿವಾಸಿಗಳ ಮತಾಂತರ ನಡೆಯುವುದು ಅವರ ದಮನಿತ ಜಾತಿ ಸ್ಥಾನದಿಂದಾಗಿ ಮತ್ತು ಘನತೆ ಹಾಗೂ ಸಾಮಾಜಿಕ ಸ್ವೀಕೃತಿಯನ್ನು ಪಡೆಯುವ ಅವರ ಆಕಾಂಕ್ಷೆಯಿಂದಾಗಿ ಎಂಬುದನ್ನು ಆರೆಸ್ಸೆಸ್ ಎಂದಿಗೂ ಸ್ವೀಕರಿಸಲಾರದು.



ಕರ್ನಾಟಕ ವಿಧಾನಸಭೆ ಅಂಗೀಕರಿಸಿರುವ ಮತಾಂತರ–ವಿರೋಧಿ ಮಸೂದೆ ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಧಾರ್ಮಿಕ ಸ್ವಾತಂತ್ರ್ಯದ ಮೇಲಿನ ನೇರ ದಾಳಿ. ಇಂತಹ ಕಾನೂನುಗಳನ್ನು ಬಿಜೆಪಿ ಆಳ್ವಿಕೆಯ ರಾಜ್ಯಗಳಾದ ಉತ್ತರಾಖಂಡ, ಉತ್ತರಪ್ರದೇಶ, ಮಧ್ಯಪ್ರದೇಶದಲ್ಲಿ ಮತ್ತು ಇದಕ್ಕೂ ಮೊದಲು ಗುಜರಾತಿನಲ್ಲಿ ಪಾಸು ಮಾಡಿಸಿಕೊಳ್ಳಲಾಗಿದೆ. "ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ" ಎಂದು ಹೆಸರಿಸಿದ್ದರೂ, ಇವು ಮಾಡುವುದು ತದ್ವಿರುದ್ಧವಾದುದನ್ನೇ, ಅಂದರೆ ಸಂವಿಧಾನದ ಕಲಮು 25ರಲ್ಲಿ ಒದಗಿಸಿರುವ "ಧರ್ಮವನ್ನು ಮುಕ್ತವಾಗಿ ಪ್ರತಿಪಾದಿಸುವ, ಆಚರಿಸುವ ಮತ್ತು ಪ್ರಸಾರ ಮಾಡುವ" ಮೂಲಭೂತ ಹಕ್ಕನ್ನು ದಮನ ಮಾಡುವುದು.

'ಕರ್ನಾಟಕ ಧಾರ್ಮಿಕ ಸ್ವಾತಂತ್ರ್ಯ ಹಕ್ಕು ಸಂರಕ್ಷಣಾ ವಿಧೇಯಕ' ಇತರ ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಅಂಗೀಕರಿಸಿದ ಇಂತಹ ಕಾನೂನುಗಳು ಹಾಕಿಕೊಟ್ಟ ರೀತಿಯಲ್ಲೇ ಇದೆ. ನರೇಂದ್ರ ಮೋದಿ ರಾಜ್ಯ ಸರಕಾರದ ಅವಧಿಯಲ್ಲಿ ಅಂಗೀಕರಿಸಲ್ಪಟ್ಟ ಗುಜರಾತ್ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ ಮತಾಂತರದ ಸ್ವಾತಂತ್ರ್ಯವನ್ನು ತೆಗೆದು ಹಾಕಿತ್ತು ಮತ್ತು ಅಂತರ–ಧರ್ಮೀಯ ವಿವಾಹಗಳನ್ನು ನಿಷೇಧಿಸಿತ್ತು. ಕರ್ನಾಟಕ ಮಸೂದೆ ಬಲವಂತದ ಮತಾಂತರಕ್ಕೆ ಮೂರರಿಂದ ಐದು ವರ್ಷಗಳ ಸೆರೆವಾಸಕ್ಕೆ ಅವಕಾಶ ಕಲ್ಪಿಸಿದೆ; ಇಂತಹ ಬಲವಂತದ ಮತಾಂತರ ಒಬ್ಬ ಅಪ್ರಾಪ್ತ ವಯಸ್ಕ, ಮಹಿಳೆ ಅಥವ ಪರಿಶಿಷ್ಟ ಜಾತಿ/ಬುಡಕಟ್ಟಿನ ವ್ಯಕ್ತಿಯದ್ದಾಗಿದ್ದರೆ, ಸೆರೆವಾಸ ಮೂರರಿಂದ ಹತ್ತು ವರ್ಷಗಳ ವರೆಗೆ ಇರುತ್ತದೆ.

ಈ ಮಸೂದೆ ರಾಜ್ಯದಲ್ಲಿ ಕ್ರೈಸ್ತರು ಮತ್ತು ಅವರ ಆರಾಧನಾ ಸ್ಥಳಗಳ ಮೇಲೆ ವ್ಯಾಪಕ ಹಲ್ಲೆಗಳ ಹಿನ್ನೆಲೆಯಲ್ಲಿ ಬಂದಿದೆ. "ಕರ್ನಾಟಕದಲ್ಲಿ ಕ್ರೈಸ್ತರ ವಿರುದ್ಧ ದ್ವೇಷಾಪರಾಧಗಳು" ಕುರಿತಾದ ಪಿಯುಸಿಎಲ್(ಜನತಾ ನಾಗರಿಕ ಹಕ್ಕುಗಳ ಸಂಘ)ನ ಒಂದು ವರದಿಯ ಪ್ರಕಾರ, 2021ರಲ್ಲಿ ಜನವರಿಯಿಂದ ನವಂಬರ್ ನಡುವೆ ಕ್ರೈಸ್ತ ಆರಾಧನಾ ಸ್ಥಳಗಳು ಮತ್ತು ಪ್ರಾರ್ಥನಾ ಸಭೆಗಳ ಮೇಲೆ ಹಲ್ಲೆಗಳ 39 ಘಟನೆಗಳು ನಡೆದಿವೆ. ವಿವಿಧ ಆರೆಸ್ಸೆಸ್ ಸಂಘಟನೆಗಳಿಂದ ನಡೆದಿರುವ ಈ ಎಲ್ಲ ಹಲ್ಲೆಗಳಿಗೆ ಮತಾಂತರದ ಪ್ರಯತ್ನಗಳೇ ಕಾರಣ ಎನ್ನಲಾಗಿದೆ. ಆದರೆ ಇದು ಎಲ್ಲ ಪ್ರಕರಣಗಳಲ್ಲೂ ಸುಳ್ಳು ಎಂದು ಕಂಡು ಬಂದಿದೆ. ಕರ್ನಾಟಕದಲ್ಲಿ ಕ್ರೈಸ್ತರ ಸಂಖ್ಯೆ 2011ರ ಜನಗಣತಿಯ ಪ್ರಕಾರ 1.87% ಮಾತ್ರ, ಅಲ್ಲದೆ 2001ರ ಜನಗಣತಿಯ 1.9%ಕ್ಕೆ ಹೋಲಿಸಿದರೆ ಇದರಲ್ಲಿ ಇಳಿಕೆಯೇ ಆಗಿರವುದು ಕಂಡು ಬಂದಿರುವಾಗ ಕ್ರೈಸ್ತ ಧರ್ಮಕ್ಕೆ ಮತಾಂತರದ ಕುರಿತಾದ ಆರೆಸ್ಸೆಸ್ ಪ್ರಚಾರ ಸುಳ್ಳು ಎಂಬುದು ಸ್ವಯಂವೇದ್ಯ.

ಈ ಮಸೂದೆ ಕಾಯ್ದೆಯಾದರೆ, ಅದು ಕ್ರೈಸ್ತರಿಗೆ ಒಂದು ನಿರಂತರ ಬೆದರಿಕೆಯಾಗುತ್ತದೆ. ಏಕೆಂದರೆ ಆರಾಧನಾ ಸ್ಥಳಗಳ ಮೇಲೆ ಕಾವಲುಕೋರ ಕ್ರಿಯೆಗಳೊಂದಿಗೆ, ಜೀಹುಜೂರ್ ಆಡಳಿತ ಈ ಕಾಯ್ದೆಯನ್ನು ಬಳಸಿ ಸಾಮಾನ್ಯ ಧಾರ್ಮಿಕ ಚಟುವಟಿಕೆಗಳ ಮೇಲೂ ಗುರಿಯಿಟ್ಟು ದಂಡಿಸಬಹುದು.

ಈ ಮಸೂದೆ, ಇತರ ಬಿಜೆಪಿ ಆಳ್ವಿಕೆಯ ರಾಜ್ಯಗಳ ಶಾಸನಗಳಂತೆ ಪರಿಶಿಷ್ಟ ಜಾತಿ/ಬುಡಕಟ್ಟುಗಳ ವ್ಯಕ್ತಿಗಳ ಬಲವಂತದ ಮತಾಂತರಕ್ಕೆ ಹೆಚ್ಚು ಕಠಿಣವಾದ ಶಿಕ್ಷೆಗೆ ಅವಕಾಶ ಕೊಡುತ್ತದೆ. ಇದು ಮತಾಂತರದ ಆಮಿಷಗಳಿಗೆ ಬಡ ದಲಿತರು ಮತ್ತು ಆದಿವಾಸಿಗಳು ಸುಲಭದಲ್ಲಿ ಬಲಿ ಬೀಳುತ್ತಾರೆ ಎಂಬ ಆರೆಸ್ಸೆಸ್‌ನ ಬಹುಕಾಲದ ಭಯವನ್ನು ಬಿಂಬಿಸುತ್ತದೆ. ಕ್ರೈಸ್ತ ಧರ್ಮಕ್ಕಾಗಲೀ, ಇಸ್ಲಾಮ್ ಧರ್ಮಕ್ಕಾಗಲೀ ದಲಿತರು ಮತ್ತು ಆದಿವಾಸಿಗಳ ಮತಾಂತರ ನಡೆದಯುವುದು ಅವರ ದಮನಿತ ಜಾತಿ ಸ್ಥಾನದಿಂದಾಗಿ ಮತ್ತು ಘನತೆ ಮತ್ತು ಸಾಮಾಜಿಕ ಸ್ವೀಕೃತಿಯನ್ನು ಪಡೆಯುವ ಅವರ ಆಕಾಂಕ್ಷೆಯಿಂದಾಗಿ ಎಂಬುದನ್ನು ಆರೆಸ್ಸೆಸ್ ಎಂದಿಗೂ ಸ್ವೀಕರಿಸಲಾರದು.

"ಬಲವಂತದ ಮತಾಂತರ"ಗಳ ವಿರುದ್ಧ ಪ್ರಚಾರ ಆರಂಭದಿಂದಲೇ ಆರೆಸ್ಸೆಸ್‌ನ ಪ್ರಧಾನ ಅಜೆಂಡಾದ ಭಾಗವಾಗಿದೆ. ನಿಜ ಹೇಳಬೇಕೆಂದರೆ, ವಿಶ್ವ ಹಿಂದೂ ಪರಿಷದ್ ರಚನೆ ಮಾಡಿದ್ದೇ ಮತಾಂತರಗೊಂಡವರನ್ನು ಮತ್ತೆ ಹಿಂದೂಧರ್ಮಕ್ಕೆ ತರುವುದಕ್ಕಾಗಿ. ಮೋದಿ ಸರಕಾರ 2014ರಲ್ಲಿ ಅಧಿಕಾರ ವಹಿಸಿಕೊಂಡಂದಿನಿಂದ ಆರೆಸ್ಸೆಸ್ ಒಂದು ವ್ಯವಸ್ಥಿತ 'ಘರ್ ವಾಪಸೀ'(ಮರಳಿ ಮನೆಗೆ) ಪ್ರಚಾರ ನಡೆಸುತ್ತ ಬಂದಿದೆ. ಇತ್ತೀಚೆಗೆ ಇದನ್ನು "ದಾರಿ ತಪ್ಪಿದ ನಮ್ಮ ಸೋದರರನ್ನು ವಾಪಾಸು ತರುವ" ಕೆಲಸ ಎಂದು ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ್ ಸಮರ್ಥಿಸಿಕೊಂಡಿದ್ದಾರೆ. ಆರೆಸ್ಸೆಸ್ ತರ್ಕದ ಪ್ರಕಾರ ಘರ್ ವಾಪಸೀ "ಮತಾಂತರ"ವಲ್ಲ, ಒಬ್ಬ ವ್ಯಕ್ತಿ ತನ್ನ ಪೂರ್ವಜರ ಧರ್ಮಕ್ಕೆ ಹಿಂದಿರುಗುವುದು. ಆದ್ದರಿಂದಲೇ ಉತ್ತರಾಖಂಡ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ (2018) "ಯಾವುದೇ ವ್ಯಕ್ತಿ ತನ್ನ ಪೂರ್ವಜರ ಧರ್ಮಕ್ಕೆ ಮರಳಿದರೆ ಅದನ್ನು ಮತಾಂತರ ಎಂದು ಪರಿಗಣಿಸಲಾಗವುದಿಲ್ಲ ಎಂದು ಘರ್ ವಾಪಸೀಗೆ ಕಾನೂನುಬದ್ಧತೆ ಕೊಟ್ಟಿದೆ.

ಮತಾಂತರ–ವಿರೋಧ ಪ್ರಚಾರದ ಜೊತೆಗೆ ಈಗ 'ಲವ್ ಜಿಹಾದ್' ವಿರುದ್ಧ ಪ್ರಚಾರವೂ ಸೇರಿಕೊಂಡಿದೆ. ಇದು ಅಂತರ–ಧರ್ಮೀಯ ವಿವಾಹಗಳನ್ನು ನಿಲ್ಲಿಸಲಿಕ್ಕಾಗಿ ಮತ್ತು ಮುಸ್ಲಿಂ ಯುವಕರನ್ನು ರಕ್ಕಸರು ಎಂಬಂತೆ ಬಿಂಬಿಸಲಿಕ್ಕಾಗಿ. ಈಗಾಗಲೇ ಉತ್ತರಪ್ರದೇಶ ಮತ್ತು ಮಧ್ಯಪ್ರದೇಶ ಸರಕಾರಗಳು ಲವ್ ಜಿಹಾದ್ ವಿರುದ್ಧ ಕಾನೂನುಗಳನ್ನು ಪಾಸು ಮಾಡಿವೆ. ಕರ್ನಾಟಕ ಮಸೂದೆ ಕೂಡ ಅಂತರ–ಧರ್ಮೀಯ ಮದುವೆಗಳನ್ನು ಅಘರಾಧವಾಗಿ ಮಾಡುತ್ತದೆ, ಏಕೆಂದರೆ ಬಲವಂತದ ಮತಾಂತರ ಎಂಬುದರ ವ್ಯಾಖ್ಯೆಯಲ್ಲಿ ಮದುವೆಯ ಮೂಲಕ ಮತಾಂತರವನ್ನೂ ಸೇರಿಸಲಾಗಿದೆ.


ಈ ಮಸೂದೆಯನ್ನು ಕರ್ನಾಟಕ ವಿಧಾನಸಭೆಯಲ್ಲಿ ತರಾತುರಿಯಲ್ಲಿ ಮಂಡಿಸಿ ಅಂಗೀಕರಿಸಲಾಗಿದೆ. ವಿಧಾನ ಪರಿಷತ್ತು ಅದನ್ನು ಅನುಮೋದಿಸಬೇಕಾಗಿದೆ. ಅಲ್ಲಿ ಬಿಜೆಪಿಗೆ ಬಹುಮತವಿಲ್ಲ. ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಮತ್ತು ಜೆಡಿ(ಎಸ್) ಮಸೂದೆಯನ್ನು ಐಕ್ಯತೆಯಿಂದ ವಿರೋಧಿಸಿದರೆ ಅದನ್ನು ಸೋಲಿಸಬಹುದು. ಈ ಪ್ರತಿಗಾಮಿ ಮಸೂದೆಯನ್ನು ನಿಲ್ಲಿಸಲೇಬೇಕಾಗಿದೆ. ○



2021ರಲ್ಲಿ ಜನವರಿಯಿಂದ ನವಂಬರ್ ನಡುವೆ ಕ್ರೈಸ್ತ ಆರಾಧನಾ ಸ್ಥಳಗಳು ಮತ್ತು ಪ್ರಾರ್ಥನಾ ಸಭೆಗಳ ಮೇಲೆ ಹಲ್ಲೆಗಳ 39 ಘಟನೆಗಳು ನಡೆದಿವೆ. ವಿವಿಧ ಆರೆಸ್ಸೆಸ್ ಸಂಘಟನೆಗಳಿಂದ ನಡೆದಿರುವ ಈ ಎಲ್ಲ ಹಲ್ಲೆಗಳಿಗೆ ಮತಾಂತರದ ಪ್ರಯತ್ನಗಳೇ ಕಾರಣ ಎನ್ನಲಾಗಿದೆ. ಆದರೆ ಇದು ಎಲ್ಲ ಪ್ರಕರಣಗಳಲ್ಲೂ ಸುಳ್ಳು ಎಂದು ಕಂಡು ಬಂದಿದೆ. ಅಲ್ಲದೆ, ಕರ್ನಾಟಕದಲ್ಲಿ ಕ್ರೈಸ್ತರ ಸಂಖ್ಯೆ 2011ರ ಜನಗಣತಿಯ ಪ್ರಕಾರ 1.87% ಮಾತ್ರ,, 2001ರ ಜನಗಣತಿಯಲ್ಲಿ ಇದು 1.9% ಇತ್ತು.

ಅಸ್ಪೃಶ್ಯತೆ-ಜಾತೀಯತೆ ಮತ್ತು ಮತಾಂತರ ಮಸೂದೆ

ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್



ಕಾವಲುಕೋರ ಗುಂಪುಗಳು ಮತ್ತು ಮುಖ್ಯಮಂತ್ರಿಗಳು

ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಕರ್ನಾಟಕದ ಉದ್ಯೋಗ ಪರಿಸ್ಥಿತಿ: 2018–21

(ಸಿಪಿಐ–ಎಂ ಕರ್ನಾಟಕ 23ನೆಯ ರಾಜ್ಯ ಸಮ್ಮೇಳನದ ಕರಡು ವರದಿಯ ಆಯ್ದ ಭಾಗಗಳು)

ಆವರ್ತಕ ಕಾರ್ಮಿಕ ಬಲದ ಸಮೀಕ್ಷೆ 2018–19ರ ವಾರ್ಷಿಕ ವರದಿಯಂತೆ ರಾಜ್ಯದಲ್ಲಿ ಕಾರ್ಮಿಕ ಬಲದ ಭಾಗವಹಿಸಿಕೆ (LFPR) ದರವು 51.2 ಶೇಕಡವಾಗಿದೆ. ಅಂದರೆ ಉದ್ಯೋಗ ಮಾಡುವ ವಯೋಮಾನದ 15 ವರ್ಷ ವಯಸ್ಸಿನ ಮೇಲ್ಪಟ್ಟ ಜನಸಂಖ್ಯೆಯಲ್ಲಿ ಅರ್ಧದಷ್ಟು ಜನರು ಉದ್ಯೋಗ ಮಾಡುತ್ತಾ ಅಥವಾ ಅರೆಸುತ್ತಾ ಸಕ್ರಿಯರಾಗಿದ್ದಾರೆ. ಇದು ಗ್ರಾಮೀಣ ಪ್ರದೇಶದಲ್ಲಿ 52.5 ರಷ್ಟಿದ್ದರೆ, ನಗರ ಪ್ರದೇಶದಲ್ಲಿ 49.1 ರಷ್ಟಿದೆ. ಮಹಿಳೆಯರ ಪ್ರಮಾಣ ನಗರದಲ್ಲಿ 20.5 ಮತ್ತು ಗ್ರಾಮೀಣದಲ್ಲಿ 27.6 ಹಾಗೂ ಒಟ್ಟಾರೆ 24.9 ರಷ್ಟಿದೆ.

ಕಾರ್ಮಿಕ ಜನಸಂಖ್ಯೆ ಪ್ರಮಾಣ (WPR) ಒಟ್ಟಾರೆ 49.3 ನಗರದಲ್ಲಿ 46.5 ಮತ್ತು ಗ್ರಾಮೀಣದಲ್ಲಿ 51.1 ಶೇಕಡವಾಗಿದೆ. ಅಂದರೆ ಪ್ರತಿ ಸಾವಿರ ಜನರಲ್ಲಿ 493 ಜನ ಉದ್ಯೋಗ ಹೊಂದಿದ್ದಾರೆ. ಒಟ್ಟಾರೆ ಪ್ರತಿ ಸಾವಿರ ಮಹಿಳೆಯರಲ್ಲಿ 242 ಮಹಿಳೆಯರು ಮಾತ್ರ ಉದ್ಯೋಗ ಹೊಂದಿದ್ದರೆ, ಗ್ರಾಮೀಣ ಪ್ರದೇಶದಲ್ಲಿ 272 ಮತ್ತು ನಗರ ಪ್ರದೇಶಗಳಲ್ಲಿ 193 ಮಹಿಳೆಯರು ಉದ್ಯೋಗ ಹೊಂದಿದ್ದಾರೆ.

ಜನರು ತೊಡಗಿಕೊಂಡಿರುವ ಸಾಮಾನ್ಯ ಪ್ರಧಾನ ಚಟುವಟಿಕೆ ಮತ್ತು ಅಂಗಚಟುವಟಿಕೆ ಆಧಾರದಂತೆ ಉದ್ಯೋಗ ಸ್ಥಿತಿ ಆಧಾರಿತ ಪ್ರತಿ ನೂರು ಕಾರ್ಮಿಕರಲ್ಲಿ 46 ಸ್ವಯಂ ಉದ್ಯೋಗಿಗಳು, 27 ಕೂಲಿ ವೇತನ ಉದ್ಯೋಗಿಗಳು ಮತ್ತು 27 ಸಾಮಾನ್ಯ ಉದ್ಯೋಗಿಗಳಾಗಿದ್ದಾರೆ.

ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿನ ಉದ್ಯೋಗ:


ರಾಜ್ಯದ ಸಂಘಟಿತ ವಲಯದಲ್ಲಿನ ಉದ್ಯೋಗ ಪ್ರಮಾಣವು 2020 ಜೂನ್ ಅಂತ್ಯಕ್ಕೆ 24.119 ಲಕ್ಷಗಳಿದ್ದು, ಸಾರ್ವಜನಿಕ ವಲಯದ ಉದ್ಯೋಗ ಕ್ಷೇತ್ರವು 10.30 ಲಕ್ಷ (42.72 ಶೇಕಡ)ಮತ್ತು ಖಾಸಗಿ ಕ್ಷೇತ್ರವು 13.81 ಲಕ್ಷ (57.28 ಶೇಕಡ) ರಷ್ಟು ಗಾತ್ರವನ್ನು ಹೊಂದಿದೆ. ಸಾರ್ವಜನಿಕ ವಲಯದಲ್ಲಿ 0.14 ರಷ್ಟು ಇಳಿಕೆಯಾಗಿದ್ದರೆ ಖಾಸಗಿ ವಲಯದಲ್ಲಿ 0.26 ರಷ್ಟು ಏರಿಕೆಯಾಗಿದೆ.

ನಿರುದ್ಯೋಗ ಪರಿಸ್ಥಿತಿ

ರಾಜ್ಯದಲ್ಲಿ ಪ್ರತಿ ಒಂದು ಸಾವಿರ ಜನರಲ್ಲಿ ಒಟ್ಟಾರೆ 36 ಜನರು ನಿರುದ್ಯೋಗಿಗಳಾಗಿದ್ದರೆ, ನಗರ ಪ್ರದೇಶದಲ್ಲಿ 51 ಜನರು ಮತ್ತು ಗ್ರಾಮೀಣ ಪ್ರದೇಶದಲ್ಲಿ 27 ಜನರು ನಿರುದ್ಯೋಗಿಗಳಾಗಿದ್ದಾರೆ. ಪ್ರತಿ ಸಾವಿರ ಮಹಿಳೆಯರಲ್ಲಿ ಒಟ್ಟಾರೆ 28 ಮಹಿಳೆಯರು ನಿರುದ್ಯೋಗಿಗಳಾಗಿದ್ದರೆ, ನಗರದಲ್ಲಿ 61 ಮತ್ತು ಗ್ರಾಮೀಣದಲ್ಲಿ 14 ಮಹಿಳೆಯರು ನಿರುದ್ಯೋಗಿಗಳಾಗಿದ್ದಾರೆ ಎಂದು 2018–19 ವಾರ್ಷಿಕ ವರದಿ ಗುರುತಿಸಿದೆ.

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೊಂದಾಯಿಸಿದವರ ಸಂಖ್ಯೆಯು ನವೆಂಬರ್ 2020 ರಲ್ಲಿ 3.21 ಲಕ್ಷ ಇದ್ದರೆ, ಮಾರ್ಚ್ 2019 ರಲ್ಲಿ 3.43 ಲಕ್ಷ ನೊಂದಾಯಿಸಿದ್ದರು. ನವೆಂಬರ್ 2020 ರಲ್ಲಿ 3505 ಸ್ನಾತಕೋತ್ತರ ಪದವೀಧರರು, 45048 ಪದವೀಧರರು, 11838 ಡಿಪ್ಲಮೋ ಹೊಂದಿದವರು, 42272 ಐಟಿಐ ತರಬೇತಿ ಮತ್ತು ಇತರೆ ಪ್ರಶಸ್ತಿ ಪತ್ರ ಹೊಂದಿದವರು, 189539 ಹತ್ತನೇ ತರಗತಿ ತೇರ್ಗಡೆಯಾದವರು, 28896 ಹತ್ತನೇ ತರಗತಿಗಿಂತ ಕಡಿಮೆ ವಿದ್ಯಾರ್ಹತೆ ಹೊಂದಿದವರು ನೋಂದಾಯಿಸಿಕೊಂಡಿದ್ದಾರೆ.

ಈ ಕಾಲಾವಧಿಯಲ್ಲಿ ಅಧಿಸೂಚಿತ ಹುದ್ದೆಗಳು ನಿರಂತರವಾಗಿ ಇಳಿಕೆಯಾಗಿದ್ದರೆ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಉದ್ಯೋಗ ಮೇಳಗಳ ಮೂಲಕ ಆಯ್ಕೆಯಾದವರು ಒಳಗೊಂಡು ಉದ್ಯೋಗ ಪಡೆದವರ ಸಂಖ್ಯೆ ಏರಿಳಿತವನ್ನು ಈ ಕೆಳಗಿನ ಕೋಷ್ಟಕ–2ರಲ್ಲಿನ ಅಂಕಿ ಅಂಶಗಳಲ್ಲಿ ಕಾಣಬಹುದು.



ಕೋಷ್ಟಕ–1: ರಾಜ್ಯದಲ್ಲಿ 15 ವರ್ಷ ಮೇಲ್ಪಟ್ಟ ವ್ಯಕ್ತಿಗಳಲ್ಲಿ ದುಡಿಯುವ ಜನ (ಶೇಕಡವಾರು)

	ಗ್ರಾಮೀಣ			ನಗರ			ಗ್ರಾಮೀಣ ಮತ್ತು ನಗರ		
	ಪು	ಮ	ಒಟ್ಟು	ಪು	ಮ	ಒಟ್ಟು	ಪು	ಮ	ಒಟ್ಟು
LFPR ಕಾರ್ಮಿಕ ಬಲ ಭಾಗವಹಿಸುವಿಕೆಯ ದರ	76.6	27.6	52.5	76.1	20.5	49.1	76.5	24.9	51.2
WPR ಕಾರ್ಮಿಕ ಜನಸಂಖ್ಯೆ ಪ್ರಮಾಣ ದರ	74.2	27.2	51.1	72.4	19.3	46.5	73.5	24.2	49.3
ನಿರುದ್ಯೋಗ ದರ	3.2	1.4	2.7	4.9	6.1	5.1	3.8	2.8.	3.6
ಉದ್ಯೋಗ ಸ್ಥಿತಿ ಪ್ರಕಾರ ಕಾರ್ಮಿಕರ ವಿಂಗಡಣೆ	ಸ್ವಯಂ ಉದ್ಯೋಗಿಗಳು			ಕೂಲಿ/ವೇತನ ಉದ್ಯೋಗಿಗಳು			ಸಾಮಾನ್ಯ ಉದ್ಯೋಗಿಗಳು		
	45.6			27.2			27.2		

ಆಧಾರ: ರಾಷ್ಟ್ರೀಯ ಮಾದರಿ ಸಮೀಕ್ಷೆ, ಭಾರತ ಸರ್ಕಾರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಮಂತ್ರಾಲಯ

ರಾಜ್ಯದಲ್ಲಿ 18 ರಿಂದ 50 ವರ್ಷ ವಯಸ್ಸಿನ ಒಟ್ಟು 10,71,038 ಉದ್ಯೋಗ ಆಕಾಂಕ್ಷಿಗಳು (4,36,415 ಮಹಿಳೆಯರು ಮತ್ತು 6,34,623 ಪುರುಷರು), ನವೆಂಬರ್ 2020ರ ಅಂತ್ಯಕ್ಕೆ ಕೌಶಲ್ಯ ಕರ್ನಾಟಕ ಡಾಟ್ ಕಾಮ್‌ನಲ್ಲಿ ನೋಂದಣಿಯಾಗಿದ್ದಾರೆ. ಅವರಲ್ಲಿ 2.5 ಲಕ್ಷ ಪರಿಶಿಷ್ಟ ಜಾತಿ ಮತ್ತು 87,817 ಪರಿಶಿಷ್ಟ ಪಂಗಡ ಹಾಗೂ 11,303 ಅಂಗವಿಕಲರು ನೋಂದಾಯಿಸಿಕೊಂಡಿದ್ದಾರೆ.

ಕೋವಿಡ್ ಲಾಕ್ಡೌನ್ ಪರಿಣಾಮವಾಗಿ ದೊಡ್ಡ ಪ್ರಮಾಣದ ಉದ್ಯೋಗ ನಾಶವುಂಟಾಗಿದೆ. ಲಾಕ್ಡೌನ್‌ನಿಂದಾಗಿ ಒಂದೆರೆಡು ತಿಂಗಳಲ್ಲೆ 6 ಶೇಕಡ ವಿದ್ದ ನಿರುದ್ಯೋಗ ದರವು 20 ಶೇಕಡಕ್ಕೆ ಏರಿಕೆಯಾಗಿರುವುದು ವರದಿಯಾಗಿದೆ. ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಏಕಾನಮಿ (CMIE) ನಡೆಸಿದ ಸರ್ವೆ ಪ್ರಕಾರ 2020 ಏಪ್ರಿಲ್‌ನಲ್ಲಿ ನಿರುದ್ಯೋಗ ದರವು 26.3 ಶೇಕಡವಾರು ಅಂಶ ಏರಿಕೆಯಾಗಿ 29.8 ಶೇಕಡಕ್ಕೆ ತಲುಪಿದೆಯಂತೆ. ರಾಷ್ಟ್ರೀಯ ನಿರುದ್ಯೋಗ ಸರಾಸರಿಯು 23.5 ಶೇಕಡವಿದ್ದಾಗ ರಾಜ್ಯದ ನಿರುದ್ಯೋಗ ದರವು 29.8 ರಷ್ಟಕ್ಕೆ ಏರಿಕೆಯಾಗುವ ಮೂಲಕ ಏಪ್ರಿಲ್ 2019 ರಲ್ಲಿ ಅತ್ಯಂತ ಕಡಿಮೆಯಿದ್ದ 0.5 ಶೇಕಡದಿಂದ ಪ್ರಸಕ್ತ ಪರಿಸ್ಥಿತಿ ತಲುಪಿದೆ ಎಂದು ವರದಿಯು ಗುರುತಿಸಿದೆ.

ಕೋಷ್ಟಕ–2: ಅನುಸೂಚಿತ ಹುದ್ದೆಗಳು ಮತ್ತು ಉದ್ಯೋಗ ಪಡೆದವರು

ವರ್ಷ	ಅನುಸೂಚಿತ ಹುದ್ದೆಗಳು	ಉದ್ಯೋಗ ಪಡೆದವರು
2016–17	2062	8200
2017–18	1,100	14,362
2018–19	260	25,300
2019–20	407	12,987
2020–21 (ನವೆಂಬರ್ 2020 ಅಂತ್ಯಕ್ಕೆ)	–	3454

ಆಧಾರ : ರಾಜ್ಯ ಆರ್ಥಿಕ ಸಮೀಕ್ಷೆ : 2020–21

2019–20 ರಲ್ಲಿದ್ದ 80,379 ಅತಿಸಣ್ಣ ಕೈಗಾರಿಕೆಗಳ ಸಂಖ್ಯೆ 2020–21 ರಲ್ಲಿ 67,031ಕ್ಕೆ ಕುಸಿದಿದ್ದು, ಕಾರ್ಮಿಕರ ಸಂಖ್ಯೆಯು 3,89,244 ರಿಂದ 2,66,704ಕ್ಕೆ ಕುಸಿದಿದೆ. ಸಣ್ಣ ಕೈಗಾರಿಕೆಗಳ ಸಂಖ್ಯೆ 16,069 ರಿಂದ 14,276ಕ್ಕೆ ಕುಸಿದು ಕಾರ್ಮಿಕರ ಸಂಖ್ಯೆಯು 2,57,408 ರಿಂದ 2,08,273 ಕ್ಕೆ ಕುಸಿದಿದೆ. ಅಂದರೆ ರಾಜ್ಯದ ಅತಿಸಣ್ಣ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಒಟ್ಟು 1,71,639 ಕಾರ್ಮಿಕರು ಕಡಿಮೆಯಾಗಿದ್ದಾರೆ, ನಿಜಾರ್ಥದಲ್ಲಿ ಉದ್ಯೋಗ ಕಳೆದು ಕೊಂಡಿದ್ದಾರೆ. 2017–18 ರಲ್ಲಿ ಅತಿಸಣ್ಣ, ಸಣ್ಣ, ಮದ್ಯಮ ಉದ್ಯಮಗಳಲ್ಲಿ ಪ್ರತಿ ಉದ್ಯಮಕ್ಕೆ 9.08 ಉದ್ಯೋಗಗಳಿದ್ದರೆ 2020–21 ರಲ್ಲಿ ಪ್ರತಿ ಉದ್ಯಮಕ್ಕೆ ಕೇವಲ 6.6 ಉದ್ಯೋಗಗಳಿವೆ.

ರಾಜ್ಯದಲ್ಲಿ ಕಾರ್ಮಿಕ ಇಲಾಖೆಯ ವರದಿಯಂತೆ ಒಟ್ಟು 65.45 ಲಕ್ಷ ಅಂತರರಾಜ್ಯ ವಲಸೆ ಕಾರ್ಮಿಕರಿದ್ದಾರೆ. ಕೋವಿಡ್ ಲಾಕ್ಡೌನ್ ಕಾರಣ ಮೊದಲನೆ ಅಲೆಯ ವೇಳೆ ತಮ್ಮ ತವರು ರಾಜ್ಯಗಳಿಗೆ ಮರು ವಲಸೆ ಹೋಗಿರುವ ಕಾರ್ಮಿಕರು ಪೂರ್ಣ ಪ್ರಮಾಣದಲ್ಲಿ ರಾಜ್ಯಕ್ಕೆ ಹಿಂತಿರುಗಿಲ್ಲ. ಅದೇ ವೇಳೆ ನಗರ ಪ್ರದೇಶಗಳಲ್ಲಿದ್ದ ಅಸಂಘಟಿತ ಕಾರ್ಮಿಕರು ಗ್ರಾಮಾಂತರ ಪ್ರದೇಶಗಳಿಗೆ ವಾಪಸ್ಸಾಗಿದ್ದವರು, ಇದುವರೆಗೆ ಪೂರ್ಣ ಪ್ರಮಾಣದಲ್ಲಿ ಹಿಂತಿರುಗಿಲ್ಲ.

ಉದ್ಯೋಗ ಖಾತ್ರಿ ಉದ್ಯೋಗದ ವಾಸ್ತವತೆ

ಗ್ರಾಮಾಂತರ ಪ್ರದೇಶಗಳಲ್ಲೂ ಪೂರ್ಣ ರೀತಿಯಲ್ಲಿ ಇವರಿಗೆಲ್ಲಾ ಉದ್ಯೋಗ ಸೃಜಿಸುವ ಯತ್ನವನ್ನು ಕೇಂದ್ರ ಮತ್ತು ರಾಜ್ಯದ ಬಿಜೆಪಿ ಸರ್ಕಾರಗಳು ಕೈಗೊಳ್ಳಲಿಲ್ಲ. ಕೆಲಸದ ದಿನಗಳನ್ನು ವಾರ್ಷಿಕ 200 ದಿನಗಳಿಗೆ ಹೆಚ್ಚಿಸಿ ಗ್ರಾಮೀಣ ಉದ್ಯೋಗ ಖಾತ್ರಿಯನ್ನು ಒದಗಿಸಬೇಕು, ನಗರ ಪ್ರದೇಶಗಳಿಗೂ ವಿಸ್ತರಿಸಬೇಕೆಂಬ ಬೇಡಿಕೆ ಪರಿಗಣಿಸಲಿಲ್ಲ. ಪರಿಣಾಮವಾಗಿ 100 ದಿನಗಳ ಉದ್ಯೋಗ ಖಾತ್ರಿ ಕೆಲಸಗಳ ಶಾಸನಬದ್ಧ ಹಕ್ಕನ್ನು ಖಾತ್ರಿಪಡಿಸುವ ಬದಲು ಪ್ರತಿಕುಟಂಬಕ್ಕೆ 2019–20ರಲ್ಲಿ 42 ಮಾನವ ದಿನಗಳ ಕೆಲಸವನ್ನು ಒದಗಿಸಿದ್ದರೆ. 2020–21 ರಲ್ಲಿ ಡಿಸೆಂಬರ್ 2020ರ ಅಂತ್ಯಕ್ಕೆ ಸರಾಸರಿ 42.33 ಮಾನವ ದಿನಗಳ ಕೆಲಸಗಳನ್ನು ಸರ್ಕಾರ ಒದಗಿಸಿದೆ.

2019–20 ರಲ್ಲಿ ಲಭ್ಯವಿದ್ದ 6044.71 ಕೋಟಿ ರೂಗಳ ಅನುದಾನದಲ್ಲಿ 4748.14 ಕೋಟಿ ರೂಗಳ ವೆಚ್ಚದೊಂದಿಗೆ 1119.13 ಲಕ್ಷ ಮಾನವ ದಿನಗಳನ್ನು ಸೃಜಿಸಿ 22.38 ಲಕ್ಷ ಕುಟುಂಬಗಳಿಗೆ ಉದ್ಯೋಗ ನೀಡಲಾಗಿದೆ. ಆದರೆ 2020–21 ರಲ್ಲಿ ಒದಗಿಸಿದ ಅನುದಾನವನ್ನು 4877.67 ಕೋಟಿ ರೂಗಳಿಗೆ ಇಳಿಸಿ, ಡಿಸೆಂಬರ್ 2020 ರ ಅಂತ್ಯದ ವೇಳೆಗೆ 4197.90 ಕೋಟಿ ರೂಗಳ ವೆಚ್ಚದೊಂದಿಗೆ ಕೇವಲ

ಪುಟ 10 ನೋಡಿ

ಕೋಷ್ಟಕ–4: ರಾಜ್ಯದಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಜಾರಿ ವಿವರ:


ವರ್ಷ	ಲಭ್ಯವಿರುವ ಅನುದಾನ (ಕೋಟಿ ರೂ)	ವೆಚ್ಚ ಕೋಟಿ ರೂ.	ಸೃಜಿಸಿದ ಮಾನವ ದಿನಗಳು ಲಕ್ಷಗಳಲ್ಲಿ	ಉದ್ಯೋಗ ನೀಡಿದ ಕುಟುಂಬಗಳು ಲಕ್ಷಗಳಲ್ಲಿ	ಆರಂಭದಿಂದ ವಿತರಿಸಲಾದ ಉದ್ಯೋಗ ಚೀಟಿ (ಲಕ್ಷ)	100 ದಿನ ಪೂರೈಸಿದ ಕುಟುಂಬಗಳು	ಪ್ರತಿ ಕುಟುಂಬಕ್ಕೆ ಒದಗಿಸಿದ ಸರಾಸರಿ ಮಾನವ ದಿನಗಳು
2019–20	6044.71	4748.14	1119.13	22.38	61.49	21241	42
2020–21 24.12.2020 ರವರೆಗೆ	4877.67	4197.90	1146.84	29.34	68.93	30028	42.33

ಮೂಲ: ಕರ್ನಾಟಕ ರಾಜ್ಯ ಪಂಚಾಯತಿ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ

ಕೋಷ್ಟಕ–3 : ರಾಜ್ಯದ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳು – ಕಾರ್ಮಿಕರು

ವರ್ಷ	ಅತಿ ಸಣ್ಣ ಕೈಗಾರಿಕೆ		ಸಣ್ಣ ಕೈಗಾರಿಕೆ	
	ಕಾರ್ಖಾನೆ	ಕಾರ್ಮಿಕರು	ಕಾರ್ಖಾನೆ	ಕಾರ್ಮಿಕರು
2019–2020	80,379	3,89,244	16,069	2,57,408
2020–2021	67,031	2,66,704	14,276	2,08,273
ವ್ಯತ್ಯಾಸ	–13,348	–1,22,540	–1,793	–49,135

ಆಧಾರ: ಕರ್ನಾಟಕ ಆರ್ಥಿಕ ಸಮೀಕ್ಷೆ 2020–21



ಕರ್ನಾಟಕದ ಕೃಷಿ ಪರಿಸ್ಥಿತಿ

(ಸಿಪಿಐ-ಎಂ 23ನೆಯ ರಾಜ್ಯ ಸಮ್ಮೇಳನದ ಕರಡು ವರದಿಯಿಂದ ಆಯ್ದ ಭಾಗ)

ಕೋಷ್ಟಕ-1: ರಾಜ್ಯದಲ್ಲಿ ಹಿಡುವಳಿದಾರರು ಮತ್ತು ಹಿಡುವಳಿ ಗಾತ್ರ

ವರ್ಷ	ಅತಿಸಣ್ಣ		ಸಣ್ಣ		ಅರೆಮಧ್ಯಮ		ಮಧ್ಯಮ		ದೊಡ್ಡ	
	ಹಿಡುವಳಿ ದಾರರು	ವಿಸ್ತೀರ್ಣ	ಹಿಡುವಳಿ ದಾರರು	ವಿಸ್ತೀರ್ಣ	ಹಿಡುವಳಿ ದಾರರು	ವಿಸ್ತೀರ್ಣ	ಹಿಡುವಳಿ ದಾರರು	ವಿಸ್ತೀರ್ಣ	ಹಿಡುವಳಿ ದಾರರು	ವಿಸ್ತೀರ್ಣ
1995-96	2610	1248	1707	2480	1204	3298	594	3490	106	1593
2000-01	3252	1492	1909	2742	1259	3429	569	3317	90	1327
2005-06	3655	1651	2014	2876	1278	3468	555	3206	79	1184
2010-11	3849	1851	2138	3020	1267	3393	511	2904	68	994
2015-16	4767	2080	2214	3107	1193	3188	451	2569	56	861

ಹಿಡುವಳಿದಾರರು: (ಸಾವಿರಗಳಲ್ಲಿ) ವಿಸ್ತೀರ್ಣ: (ಸಾವಿರ ಹೆಕ್ಟೇರುಗಳಲ್ಲಿ) ಮೂಲ: ಕೃಷಿ ಗಣತಿ ವರದಿ 2015-16

ರಾಜ್ಯದ ಕೃಷಿಯು ಎರಡು ವರ್ಷಗಳ ಅತಿವೃಷ್ಟಿಯ ಪರಿಣಾಮಗಳನ್ನು ಎದುರಿಸುತ್ತಿರುವಾಗಲೇ, ರಾಜ್ಯ ಬಿಜೆಪಿ ಸರ್ಕಾರವು ತಂದಿರುವ ಭೂಸುಧಾರಣೆ ತಿದ್ದುಪಡಿ ಕಾಯ್ದೆ, ಕೃಷಿ ಉತ್ಪನ್ನ ಮಾರುಕಟ್ಟೆ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ಕಾಯ್ದೆ, ಭೂಕಂದಾಯ ತಿದ್ದುಪಡಿ ಕಾಯ್ದೆಗಳಿಂದಾಗಿಯು ಬಾಧಿತವಾಗಿದೆ. ಅದೇ ವೇಳೆ ಕೋವಿಡ್-19 ಮೊದಲ ಅಲೆ ಹಾಗೂ ಎರಡನೇ ಅಲೆಯ ವೇಳೆಗಳ ಲಾಕ್ಡೌನ್‌ನಿಂದಾಗಿ ಉಂಟಾದ ಆರ್ಥಿಕ ಪರಿಣಾಮಗಳನ್ನು ಅನುಭವಿಸುತ್ತಿದೆ. ಬೆಳೆದ ಬೆಳೆಗಳಿಗೆ ಮಾರುಕಟ್ಟೆಯ ಕೊರತೆ, ಮಾರುಕಟ್ಟೆ ತಲುಪುವ ಸಾಧನದ ಕೊರತೆ, ಲಾಭದಾಯಕ ಬೆಲೆಯು ಸಿಗದ ಸಂಕಷ್ಟಗಳು ಕೋವಿಡ್‌ನಿಂದಾಗಿ ಲಾಕ್ಡೌನ್ ವೇಳೆ ತೀವ್ರಗೊಂಡಿವೆ. ಅದೇ ವೇಳೆ ಕೃಷಿ ಲಾಗುವಾಡುಗಳ ಪೂರೈಕೆಯಲ್ಲಿನ ವ್ಯತ್ಯಾಸಗಳು, ಕೊರತೆಯೊಂದಿಗೆ, ಸಾಲಗಳ ಲಭ್ಯತೆಯ ಕೊರತೆಯನ್ನು ಹಾಗೂ ಸಾಲ ತೀರಿಸಲಾಗದ ಬಾಧೆಯನ್ನು ರಾಜ್ಯದ ಕೃಷಿ ಪರಿಸ್ಥಿತಿಯು ಎದುರಿಸಿರುವಾಗಲೇ, ಬೆಲೆ ಕುಸಿತ ಮತ್ತು ಪರಿಹಾರ ದೊರಕದ, ಅತಿವೃಷ್ಟಿಯಿಂದ ಬೆಳೆನಾಶದ ಸಂಕಷ್ಟಗಳಿಗೆ ತುತ್ತಾಗಿದೆ.

2018-19ರ ಸಾಲಿನ ವರದಿಯ ಪ್ರಕಾರ ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ 190.50 ಲಕ್ಷ ಹೆಕ್ಟೇರುಗಳ ಪೈಕಿ ನಿವ್ವಳ ಬಿತ್ತನೆಯಾದ ಕ್ಷೇತ್ರ 106.64 ಲಕ್ಷ ಹೆ.ಗಳಷ್ಟಿದ್ದು, ಶೇ.56 ರಷ್ಟಾಗಿರುತ್ತದೆ. ಶೇಕಡ 8 ರಷ್ಟು ವಿಸ್ತೀರ್ಣ ಚಾಲ್ತಿ ಸಾಗುವಳಿಯಿಲ್ಲದ ಬೀಳುಬಿಟ್ಟ ಜಮೀನು ಹಾಗೂ ಇತರೆ ಬೀಳು ಜಮೀನಾಗಿರುತ್ತದೆ. ಶೇಕಡ 16 ವಿಸ್ತೀರ್ಣ ಅರಣ್ಯಕ್ಕೊಳಪಟ್ಟಿದೆ. ಶೇಕಡ 8 ರಷ್ಟು ವ್ಯವಸಾಯೇತ್ತರ ಉದ್ದೇಶಗಳಿಗೆ ಉಪಯೋಗವಾಗಿದ್ದರೆ, 4 ಶೇಖಡವು ಬಂಜರು ಮತ್ತು ವ್ಯವಸಾಯ ಮಾಡಲು ಯೋಗ್ಯವಾಗಿರುವುದಿಲ್ಲ. ಶೇಕಡ 2 ಸಾಗುವಳಿ ಯೋಗ್ಯವಾದ ಬಂಜರು ಪ್ರದೇಶವಾಗಿದ್ದರೆ, ಉಳಿದ ಶೇಕಡ 6 ವಿಸ್ತೀರ್ಣವು ಖಾಯಂ ಗೋಮಾಳ, ಇತರೆ ಹುಲ್ಲುಗಾವಲು ವಿಸ್ತೀರ್ಣವಾಗಿದೆ. ರಾಜ್ಯದಲ್ಲಿ 4.03 ಲಕ್ಷ ಹೆಕ್ಟೇರ್ ಪ್ರದೇಶವು ಸಾಗುವಳಿ ಯೋಗ್ಯವಾದ ಬಂಜರು ಪ್ರದೇಶವಾಗಿದೆ. ಇದನ್ನು ಭೂಹೀನರಿಗೆ ವಿತರಿಸಲು ಒತ್ತಾಯಿಸಬೇಕಿದೆ.

2015-16ರ ಕೃಷಿ ಗಣತಿಯ ಅಂಕಿ ಅಂಶಗಳ ಪ್ರಕಾರ (ವಿವರಗಳು ಕೋಷ್ಟಕ 1 ರಲ್ಲಿವೆ) ಭೂ ಹಿಡುವಳಿದಾರರ ಒಟ್ಟು ಸಂಖ್ಯೆ 86.81 ಲಕ್ಷ ಇದ್ದು, ಹಿಡುವಳಿಯ ಒಟ್ಟು ವಿಸ್ತೀರ್ಣವು 118.05 ಲಕ್ಷ ಹೆಕ್ಟೇರ್ ಇರುತ್ತದೆ. ಸಣ್ಣ ಮತ್ತು ಅತಿ ಸಣ್ಣ ಭೂ ಹಿಡುವಳಿದಾರರು 80 ಶೇಕಡರಷ್ಟಿದ್ದು ಅವರ ಹಿಡುವಳಿ ಗಾತ್ರ 44 ಶೇಕಡದಷ್ಟಿದೆ. ಅರೆ ಮಧ್ಯಮ, ಮಧ್ಯಮ ಹಿಡುವಳಿದಾರರು ಶೇ.19.35 ರಷ್ಟಿದ್ದು, ದೊಡ್ಡ ಹಿಡುವಳಿದಾರರು 0.65 ರಷ್ಟಿದ್ದಾರೆ.

1995-96ರ ನಂತರ ನಿರಂತರವಾಗಿ ಅತಿ ಸಣ್ಣ ಮತ್ತು ಸಣ್ಣ ಹಿಡುವಳಿದಾರರ ಸಂಖ್ಯೆ ಮತ್ತು ಅವರ ಕೈಯಲ್ಲಿನ ಹಿಡುವಳಿ ವಿಸ್ತೀರ್ಣವು ಹೆಚ್ಚುತ್ತಾ ಬಂದಿದೆ. ಅದೇ ವೇಳೆ ಅರೆ ಮಧ್ಯಮ, ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರ ಸಂಖ್ಯೆ ಹಾಗೂ ಹಿಡುವಳಿ ವಿಸ್ತೀರ್ಣ ಎರಡೂ ಕಡಿಮೆಯಾಗುತ್ತ ಬಂದಿದೆ.

ರಾಜ್ಯದಲ್ಲಿ ಒಟ್ಟು ಭೂ ಹಿಡುವಳಿದಾರರಲ್ಲಿ 54.92 ಶೇಕಡ ಅತಿ ಸಣ್ಣ ಭೂಹಿಡುವಳಿದಾರರಿದ್ದಾರೆ. ರಾಜ್ಯದ ರಾಮನಗರ, ಉಡುಪಿ, ಮಂಡ್ಯ ಜಿಲ್ಲೆಗಳಲ್ಲಿ ಶೇಕಡ 77.49 ರಿಂದ 83.02 ಶೇಕಡ ಸಣ್ಣ ಹಿಡುವಳಿದಾರರಿದ್ದಾರೆ. ಮೈಸೂರು, ದಕ್ಷಿಣ ಕನ್ನಡ, ಹಾಸನ, ಉತ್ತರ ಕನ್ನಡ, ಬೆಂಗಳೂರು ನಗರ ಗ್ರಾಮಾಂತರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಸೇರಿ ಒಟ್ಟು 8 ಜಿಲ್ಲೆಗಳಲ್ಲಿ 65.52 ರಿಂದ 77.48 ಶೇಕಡ ಅತಿಸಣ್ಣ ಹಿಡುವಳಿದಾರರಿದ್ದಾರೆ. ತುಮಕೂರು, ಚಾಮರಾಜನಗರ, ಚಿಕ್ಕಮಗಳೂರು, ದಾವಣಗೆರೆ, ಶಿವಮೊಗ್ಗ ಸೇರಿ ಒಟ್ಟು 5 ಜಿಲ್ಲೆಗಳಲ್ಲಿ 47.82 ರಿಂದ 65.51 ಶೇಕಡ ಅತಿ ಸಣ್ಣ ಹಿಡುವಳಿದಾರರಿದ್ದಾರೆ. ಕೊಡಗು, ಚಿತ್ರದುರ್ಗ, ಬಳ್ಳಾರಿ, ಹಾವೇರಿ, ಕೊಪ್ಪಳ, ರಾಯಚೂರು, ಬಾಗಲಕೋಟೆ, ಬೆಳಗಾವಿ, ಯಾದಗಿರಿ ಮತ್ತು ಬೀದರ್ ಸೇರಿ 10 ಜಿಲ್ಲೆಗಳಲ್ಲಿ 30.34 ರಿಂದ 47.61 ಶೇಕಡ ಸಣ್ಣ ಹಿಡುವಳಿದಾರರಿದ್ದಾರೆ. ಗದಗ, ಧಾರವಾಡ, ವಿಜಯಪುರ ಮತ್ತು ಕಲ್ಬುರ್ಗಿ ಸೇರಿ ಒಟ್ಟು 4 ಜಿಲ್ಲೆಗಳಲ್ಲಿ 17.38 ರಿಂದ 30.33 ಶೇಕಡ ಅತಿ ಸಣ್ಣ ಹಿಡುವಳಿದಾರರಿದ್ದಾರೆ.

2014 ರಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕ ಕೃಷಿ ಬೆಲೆ ಆಯೋಗವು ಈಗಾಗಲೇ ಎರಡು ಅವಧಿಗಳನ್ನು ಪೂರೈಸಿದ್ದು, 2020-23 ರವರೆಗೆ ಮೂರನೆ ಅವಧಿಗೆ ಮುಂದುವರಿಸಲಾಗಿದೆ. ಆಯೋಗವು 2021 ನವೆಂಬರ್ 23 ರಂದು ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ವಿಸ್ತೃತ ವರದಿಯಲ್ಲಿ ಹೊಲಕ್ಕೊಂದು ಕೆರೆ ನಿರ್ಮಾಣ, ತೋಟಗಾರಿಕಾ ಮಾರಾಟ ಮಹಾಮಂಡಳಿ ರಚನೆ, ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆಗೆ ಕೇಂದ್ರ ಸರ್ಕಾರವು ರಾಜ್ಯದಿಂದಲೇ ಆಹಾರ ಧಾನ್ಯ ಸಂಗ್ರಹಿಸುವುದು ಸೇರಿ ಈ ಕೆಳಗಿನ ಪ್ರಮುಖ 7 ಶಿಫಾರಸ್ಸುಗಳನ್ನು ಮಾಡಿದೆ.

1) ಕೃಷಿ ಉತ್ಪನ್ನಗಳು ಕನಿಷ್ಟ ಬೆಂಬಲ ಬೆಲೆಗಿಂತಲೂ ಕಡಮೆ ಬೆಲೆಗೆ ಮಾರಾಟ ಆಗದ ರೀತಿಯಲ್ಲಿ 'ಶಾಸನ ಬದ್ಧ ಕನಿಷ್ಟ ಬೆಲೆ' ಕಾಯ್ದೆ ಜಾರಿಗೊಳಿಸಲು ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕು.
2) ಕೃಷಿ ಯಂತ್ರಗಳ ಖರೀದಿಗೆ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇ.90, ಮಧ್ಯಮ ರೈತರಿಗೆ ಶೇ.75, ದೊಡ್ಡ ರೈತರಿಗೆ ಶೇ.50 ರಷ್ಟು ರಿಯಾಯಿತಿ ನೀಡಬೇಕು.
3) ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (ಎನ್.ಡಿ.ಆರ್.ಎಫ್) ಮಾರ್ಗಸೂಚಿ ಬದಲಿಸಿ, ಪ್ರತಿ ಹೆಕ್ಟೇರ್ ಕೃಷಿ ಮತ್ತು ವಾಣಿಜ್ಯ ಬೆಳೆಗಳಿಗೆ ರೂ.50 ಸಾವಿರ, ಬಹುವಾರ್ಷಿಕ ಬೆಳೆಗಳಿಗೆ ರೂ. 1 ಲಕ್ಷ ಪರಿಹಾರಧನ ನೀಡುವಂತೆ ಕೇಂದ್ರಕ್ಕೆ ಶಿಫಾರಸ್ಸು ಮಾಡಬೇಕು.
4) ಬೆಳೆ ವಿಮೆಯಲ್ಲಿರೈತರು ನೋಂದಣಿ ಕಡ್ಡಾಯಗೊಳಿಸಬೇಕು. ಕಿಸಾನ್ ಸಮ್ಮಾನ್ ಹಣದಲ್ಲಿ ವಿಮಾಕಂತು ಭರಿಸಬಹುದು.
5) ಕೃಷಿ ಯಂತ್ರಗಳು ದೊರಕುವಂತೆ ಮಾಡಲು ಓಲಾ, ಊಬರ್ ಮಾದರಿ ವ್ಯವಸ್ಥೆ ಅಭಿವೃದ್ಧಿ ಪಡಿಸಬೇಕು.
6) ರೈತ ಸಂಶೋಧಕರಿಗೆ ಪ್ರೋತ್ಸಾಹ ನೀಡಲು 'ರೈತ ಆವಿಷ್ಕಾರ ನಿಧಿ' ಸ್ಥಾಪಿಸಬೇಕು.
7) ಎ.ಪಿ.ಎಂ.ಸಿಗಳನ್ನು ಸದೃಢಗೊಳಿಸಲು ಮಾರುಕಟ್ಟೆ ಶುಲ್ಕವನ್ನು ಶೇ.0.60 ರಿಂದ ಶೆ.1ಕ್ಕೆ ಹೆಚ್ಚಿಸಬೇಕು.

2019-20 ರಲ್ಲಿ ರೂ. 618 ಕೋಟಿಯಷ್ಟಿದ್ದ ರಾಜ್ಯದ ಎ.ಪಿ.ಎಂ.ಸಿ. ಮಾರುಕಟ್ಟೆ ಶುಲ್ಕದ ಸಂಗ್ರಹವು 2020-21 ರಲ್ಲಿ ರೂ. 294 ಕೋಟಿ ರೂ. ಗಳಿಗೆ ಇಳಿಕೆಯಾಗಿ ರಾಜ್ಯದ ಎ.ಪಿ.ಎಂ.ಸಿ. ಮಾರುಕಟ್ಟೆಗಳು ಸಂಕಷ್ಟಕ್ಕೆ ಸಿಲುಕಿರುವುದನ್ನು ವರದಿಯು ಗುರುತಿಸಿದೆ. ಕೇಂದ್ರ ಬಿಜೆಪಿ ರೂಪಿಸಿದ್ದ ಕೃಷಿ ಕಾಯ್ದೆಗಳಿಗೆ ಪೂರಕವಾಗಿ ರಾಜ್ಯ ಬಿಜೆಪಿ ಸರ್ಕಾರವು ತಂದಿರುವ ಕೃಷಿ ಮಾರುಕಟ್ಟೆ ತಿದ್ದುಪಡಿ ಕಾಯ್ದೆ-2020ರ ನೇರ ಪರಿಣಾಮ ಇದಾಗಿದೆ ಎಂಬುದನ್ನು ಗಮನಿಸಬೇಕಿದೆ. ಅದೇ ರೀತಿ ಭೂ ಸುಧಾರಣಾ ತಿದ್ದುಪಡಿ ಕಾಯ್ದೆಯಲ್ಲಿ ಕೃಷಿಕರಲ್ಲದವರಿಗೂ ಕೃಷಿ ಭೂಮಿ ಖರೀದಿಗೆ ಅವಕಾಶ ಕಲ್ಪಿಸಿರುವ ಕಾರಣ ಕೃಷಿ ಭೂಮಿ ಮಾರಾಟ ನೊಂದಾವಣಿಯು ರಾಜ್ಯ ಉಪ ನೋಂದಾವಣಾಧಿಕಾರಿಗಳ ಕಚೇರಿಗಳಲ್ಲಿ 71 ಶೇಕಡ ಹೆಚ್ಚಳಗೊಂಡಿರುವ ವರದಿಗಳಿವೆ.

ಭಾರತದ ಕೃಷಿ ಮತ್ತು ಗ್ರಾಮೀಣ ಆರ್ಥಿಕತೆ ಮೇಲಿನ ಕೋವಿಡ್-19 ಪರಿಣಾಮ ಕುರಿತು ನಬಾರ್ಡ್ 2020 ಆಗಸ್ಟ್‌ನಲ್ಲಿ ಪ್ರಕಟಿಸಿರುವ ವರದಿಯಲ್ಲಿ ರಾಜ್ಯದ 26 ಜಿಲ್ಲೆಗಳಲ್ಲಿ ನಡೆಸಿದ ಸರ್ವೇಕ್ಷಣೆಯಂತೆ ವಾರದ ಸಂತೆಗಳು ನಡೆಯದ ಕಾರಣ ರಾಜ್ಯದ 22 ಜಿಲ್ಲೆಗಳ ರೈತರ ಬೆಳೆಗಳು ಮಾರಾಟವಾಗದೆ ಮತ್ತು ಕೃಷಿ ಕೂಲಿಕಾರರು ಸಿಗದೆ ನಷ್ಟ ಅನುಭವಿಸಿದ್ದಾರೆ. 14 ಜಿಲ್ಲೆಗಳಲ್ಲಿ ಒಟ್ಟಾರೆ ಕೃಷಿ ಉತ್ಪಾದನೆ ಕಡಿಮೆಯಾಗಿದ್ದರೆ 10 ಜಿಲ್ಲೆಗಳಲ್ಲಿ ಹಿಂದಿನ ಉತ್ಪಾದನೆಯಷ್ಟೆ ಉಳಿದಿದೆ, 2 ಜಿಲ್ಲೆಗಳಲ್ಲಿ ಹೆಚ್ಚಳವಾಗಿದೆ ಎಂದು ವರದಿಯು ಗುರುತಿಸಿದೆ.

'ರಾಷ್ಟ್ರೀಯ ಸ್ಯಾಂಪಲ್ ಸರ್ವೆಯ-2019'ರ **"ಗ್ರಾಮೀಣ ಭಾರತದಲ್ಲಿನ ಕೃಷಿ ಕುಟುಂಬಗಳು ಮತ್ತು ಭೂಮಿ ಹಾಗೂ ಜಾನುವಾರು ಹಿಡುವಳಿ"** ವರದಿಯು ರಾಜ್ಯದ ಒಟ್ಟು 77.58 ಲಕ್ಷ ಗ್ರಾಮೀಣ ಕುಟುಂಬಗಳಲ್ಲಿ 42.5 ಲಕ್ಷ ಕೃಷಿ ಆಧಾರಿತ ಕುಟುಂಬಗಳಾದರೆ 35.08 ಲಕ್ಷ ಕುಟುಂಬಗಳು ಕೃಷಿಯೇತ್ತರ ಕುಟುಂಬಗಳಾಗಿವೆ. ಅಂದರೆ ಶೇಕಡ 45.2 ಶೇಕಡ ಕುಟುಂಬಗಳು ಕೃಷಿಯೇತ್ತರ ಜೀವನಾಧಾರ ಹೊಂದಿವೆ ಎಂದು ಗುರುತಿಸಿದೆ. ಅದರಲ್ಲಿ 26.5 ಶೇಕಡ ಪರಿಶಿಷ್ಟ ಜಾತಿ, 8.5 ಪರಿಶಿಷ್ಟ ಪಂಗಡ, 45.7 ಇತರೆ ಹಿಂದುಳಿದ ಜಾತಿ, 19.3 ಇತರರಿದ್ದಾರೆ. ಕೃಷಿ ಆಧಾರಿತ 54.8 ಕುಟುಂಬಗಳಲ್ಲಿ 14.6 ಪರಿಶಿಷ್ಟ ಜಾತಿ, 9.2 ಪರಿಶಿಷ್ಟ ಪಂಗಡ, 56.5 ಇತರೆ ಹಿಂದುಳಿದ ಜಾತಿ ಮತ್ತು 19.6 ಇತರರಿದ್ದಾರೆ ಎಂದು ಗುರುತಿಸಿದೆ. (ವಿವರಗಳಿಗೆ ಕೋಷ್ಟಕ 2 ನೋಡಿ)

ಕೃಷಿಯೇತ್ತರ ಕುಟುಂಬಗಳಲ್ಲಿ 75.8 ಶೇಕಡ ಕುಟುಂಬಗಳು ಒಂದು ಎಕರೆಗಿಂತ ಕಡಿಮೆ ಭೂ ಹಿಡುವಳಿ ಹೊಂದಿದ್ದಾರೆ. 39.7 ಶೇಕಡ ಕುಟುಂಬಗಳು ಒಂದು ಗುಂಟೆಗಿಂತ ಕಡಿಮೆ ಭೂ ಹಿಡುವಳಿ ಹೊಂದಿದ್ದಾರೆ. ಕೃಷಿ ಆಧಾರಿತ ಕುಟುಂಬಗಳಲ್ಲಿ 14 ಶೇಕಡ ಕುಟುಂಬಗಳು ಒಂದು ಎಕರೆಗಿಂತ ಕಡಿಮೆ ಭೂ ಹಿಡುವಳಿ

ಪುಟ 10 ನೋಡಿ


ಕೋಷ್ಟಕ 2-ರಾಜ್ಯದಲ್ಲಿನ ಗ್ರಾಮೀಣ ಕುಟುಂಬಗಳು: ಕೃಷಿ ಆಧಾರಿತ ಮತ್ತು ಕೃಷಿಯೇತ್ತರ ಕುಟುಂಬಗಳು

ಒಟ್ಟು ಕುಟುಂಬಗಳು	ಕೃಷಿ ಆಧಾರಿತ ಕುಟುಂಬಗಳು					ಕೃಷಿಯೇತ್ತರ ಕುಟುಂಬಗಳು				
	ಒಟ್ಟು	ಎಸ್ಸಿ	ಎಸ್ಟಿ	ಒಬಿಸಿ	ಇತರೆ	ಒಟ್ಟು	ಎಸ್ಸಿ	ಎಸ್ಟಿ	ಒಬಿಸಿ	ಇತರೆ
77.50 ಲಕ್ಷ	42.5	6.20	3.91	24.01	8.33	35.08	9.29	2.98	16.03	6.77
ಶೇಕಡವಾರು	54.8	14.6	9.2	56.5	19.6	45.2	26.5	8.5	45.7	19.3

ಆಧಾರ: ಗ್ರಾಮೀಣ ಭಾರತದಲ್ಲಿನ ಕೃಷಿ ಕುಟುಂಬಗಳು ಮತ್ತು ಭೂಮಿ ಹಾಗೂ ಜಾನುವಾರು ಹಿಡುವಳಿ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ವರದಿ 2019.

ಕೋಷ್ಟಕ 3 - ರಾಜ್ಯದಲ್ಲಿನ ಕೃಷಿ ಮತ್ತು ಕೃಷಿಯೇತ್ತರ ಕುಟುಂಬಗಳು ಹಾಗೂ ಭೂ ಹಿಡುವಳಿ

ಹಿಡುವಳಿ		ಒಂದು ಗುಂಟೆಗಿಂತ ಕಡಿಮೆ	ಒಂದು ಎಕರೆಗಿಂತ ಕಡಿಮೆ	1 ರಿಂದ 2.5 ಎಕರೆ	2.5 ರಿಂದ 5 ಎಕರೆ	5 ರಿಂದ 10 ಎಕರೆ	10 ರಿಂದ 25 ಎಕರೆ	25 ಎಕರೆ ಗಿಂತ ಹೆಚ್ಚು
ಕೃಷಿ ಆಧಾರಿತ ಕುಟುಂಬಗಳು 42.5 ಲಕ್ಷ	ಲಕ್ಷ	–	5.95	16.11	11.0	6.97	2.21	0.25
	ಶೇಕಡ	–	14.00	37.9	25.9	16.40	5.2	0.6
ಕೃಷಿಯೇತ್ತರ ಕುಟುಂಬಗಳು 35.08 ಲಕ್ಷ	ಲಕ್ಷ	13.93	26.59	4.38	0.42	0.03	0.14	–
	ಶೇಕಡ	39.7	75.8	12.5	1.20	0.1	0.4	–



ಕರ್ನಾಟಕದ ಕೃಷಿ ಪರಿಸ್ಥಿತಿ........

ಪುಟ 9 ರಿಂದ

ಹೊಂದಿದ್ದಾರೆ. ಒಂದರಿಂದ ಎರಡುವರೆ ಎಕರೆ ಭೂ ಹಿಡುವಳಿ ಹೊಂದಿರುವವರ ಪ್ರಮಾಣ 37.9 ಶೇಕಡವಾಗಿದೆ. ಎರಡುವರೆಯಿಂದ ಐದು ಎಕರೆ ಭೂ ಹಿಡುವಳಿ ಹೊಂದಿರುವವರು 25.9 ಶೇಕಡವಾದರೆ, ಐದರಿಂದ 10 ಎಕರೆ ಹಿಡುವಳಿದಾರರ ಪ್ರಮಾಣವು 16.4 ಶೇಕಡ, ಹತ್ತರಿಂದ ಇಪ್ಪತ್ತೈದು ಎಕರೆ ಹಿಡುವಳಿದಾರರು 5.2 ಶೇಕಡ ಮತ್ತು 25 ಎಕರೆಗಿಂತ ಹೆಚ್ಚು ಹಿಡುವಳಿದಾರರು 0.6 ಶೇಕಡವಾಗಿದ್ದಾರೆ. ರಾಜ್ಯದಲ್ಲಿ 8.4 ಶೇಕಡ ಅಂದರೆ 6.52 ಲಕ್ಷ ಭೂಹೀನ ಗ್ರಾಮೀಣ ಕುಟುಂಬಗಳಿವೆ ಎಂದು ವರದಿ ಗುರುತಿಸಿದೆ. ಈ ಅಂಶಗಳು ಕೃಷಿ ಕೂಲಿಕಾರರ ಸಂಖ್ಯೆ ಹೆಚ್ಚಳವಾಗಿರುವುದನ್ನು ಒಂದೆಡೆ ಸೂಚಿಸುವಾಗಲೇ ಕೃಷಿಯೇತ್ತರ ಕುಟುಂಬಗಳ ಸಂಖ್ಯೆಯ ಹೆಚ್ಚಳವು ಕೃಷಿಯೇತ್ತರ ಗ್ರಾಮೀಣ ಕಾರ್ಮಿಕರ ಸಂಖ್ಯೆ ಹೆಚ್ಚಳವನ್ನು ಸೂಚಿಸುತ್ತವೆ. ಪರಿಣಾಮವಾಗಿ ಅದೇ ವೇಳೆ ಗ್ರಾಮೀಣ ಕೃಷಿ ಚಟುವಟಿಕೆಗಳಲ್ಲಿ ಯಾಂತ್ರಿಕೃತ ಕೃಷಿ ಪದ್ಧತಿಯು ಹೆಚ್ಚುತ್ತಿರುವುದನ್ನು ಈ ಕಾಲಾವಧಿಯಲ್ಲಿ ಕಾಣಬಹುದಾಗಿದೆ.

ಗ್ರಾಮೀಣ ಕುಟುಂಬಗಳ ಸರಾಸರಿ ಮಾಸಿಕ ಆದಾಯವು ರಾಜ್ಯದಲ್ಲಿ 13441 ರೂ. ಗಳಾಗಿದೆ. ಅದರಲ್ಲಿ ವೇತನದ ಪಾಲು ರೂ.4576, ಭೂಮಿ ಭೋಗ್ಯದಿಂದ ರೂ.104, ಬೆಳೆಗಳಿಂದ ರೂ.6835, ಜಾನುವಾರು ಸಾಕಾಣಿಕೆಯಿಂದ ರೂ.1663, ಕೃಷಿಯೇತ್ತರ ವ್ಯವಹಾರದಿಂದ ರೂ.265 ಸೇರಿದೆ. ರಾಷ್ಟ್ರೀಯ ಸರಾಸರಿ ರೂ.10218 ಆಗಿದ್ದರೆ, ಮೇಗಾಲಯದಲ್ಲಿ ರೂ.29348, ಪಂಜಾಬಿನಲ್ಲಿ ರೂ.26701, ಹರಿಯಾಣದಲ್ಲಿ ರೂ.22841 ಮಾಸಿಕ ಸರಾಸರಿ ಆದಾಯವನ್ನು ಕೃಷಿ ಕುಟುಂಬಗಳು ಹೊಂದಿವೆ. ಗ್ರಾಮೀಣ ಕುಟುಂಬಗಳ ಸರಾಸರಿ ಮಾಸಿಕ ಆದಾಯದ ಲೆಕ್ಕದಲ್ಲಿ ರಾಜ್ಯವು 9ನೇ ಸ್ಥಾನದಲ್ಲಿದೆ ಎಂದು ವರದಿಯು ಗುರುತಿಸಿದೆ.

ರಾಜ್ಯದಲ್ಲಿ ಗ್ರಾಮೀಣ ಪ್ರದೇಶದಲ್ಲಿನ ಜನತೆಯ ಮಾಸಿಕ ಆದಾಯದ ಮೂಲಗಳಲ್ಲಿ ಹೈನುಗಾರಿಕೆಯು ಒಂದು ಪ್ರಮುಖ ಮೂಲವಾಗಿದೆ. ರಾಜ್ಯದ 14 ಜಿಲ್ಲಾ ಹಾಲು ಒಕ್ಕೂಟಗಳ ವ್ಯಾಪ್ತಿಯಲ್ಲಿ 14,904 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ಅದರಲ್ಲಿನ 25.50 ಲಕ್ಷ ರೈತರು ಸದಸ್ಯತ್ವ ಹೊಂದಿದ್ದರೆ, 8.90 ಲಕ್ಷ ಸದಸ್ಯರು ಮಾತ್ರ ಸಕ್ರಿಯರಾಗಿದ್ದಾರೆ. ರಾಜ್ಯದ ಹೈನುಗಾರಿಕೆಯು ವಿದೇಶಿ ಹಾಲಿನ ಆಮದು ಮತ್ತು ಕೇಂದ್ರ ಬಿಜೆಪಿ ಸರ್ಕಾರವು 2021 ರಲ್ಲಿ ಆರಂಭಿಸಿರುವ ನೂತನ ಸಹಕಾರ ಸಚಿವಾಲಯ ಮತ್ತು ನೂತನ ಸಹಕಾರ ನೀತಿಯ ಸವಾಲನ್ನು ಎದುರಿಸುತ್ತಿದೆ. ಖಾಸಗಿ ಹಾಲು ಉತ್ಪಾದಕ ಕಂಪನಿಗಳ ಪೈಪೋಟಿಯನ್ನು ಮೆಟ್ಟಿ ನಿಂತಿರುವ ರಾಜ್ಯದ ಸಹಕಾರಿ ಹೈನುಗಾರಿಕೆಯು, ಪ್ರಸಕ್ತ ಕೋವಿಡ್ ಲಾಕ್ಡೌನ್ ವೇಳೆ ಬೇಡಿಕೆ ಕುಸಿತ ಮುಂತಾದ ಸಮಸ್ಯೆ ಎದುರಿಸಿದೆ. ಹೈನುಗಾರಿಕೆಯಲ್ಲಿ ತೊಡಗಿರುವ ರೈತರು ಲಾಭದಾಯಕ ಬೆಲೆ ಸಿಗದ ಸಂಕಷ್ಟ ಎದುರಿಸುತ್ತಿದ್ದಾರೆ. ಸಾಲದ ಬಲೆಗೆ ಸಿಲುಕುತ್ತಿದ್ದಾರೆ. ಕುಕ್ಕುಟೋದ್ಯಮವು ನಿರಂತರ ವಿವಿಧ ಹಕ್ಕಿ ಜ್ವರಗಳ ಅಪಾಯ ಎದುರಿಸುತ್ತಿದೆ.

ವಿವಿಧ ಬೆಳೆಗಳು, ಬೆಂಬಲ ಬೆಲೆ ಹೆಚ್ಚಳವಾಗದ ಸಮಸ್ಯೆಯೊಂದಿಗೆ ವಿವಿಧ ರೀತಿಯ ರೋಗ ಬಾಧೆಯನ್ನು ಎದುರಿಸುತ್ತಿವೆ. ಅದಕ್ಕೆ ಅಗತ್ಯ ಪರಿಹಾರ ನೀಡದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಕ್ರಮಗಳಿಂದಾಗಿ ಸಮಸ್ಯೆಗಳು ಬಿಗಡಾಯಿಸುತ್ತಿವೆ. ಕೃಷಿ ಲಾಗವಾಡುಗಳ ಬೆಲೆಗಳ ಹೆಚ್ಚಳ, ಬೀಜ, ಗೊಬ್ಬರ ಮುಂತಾದವುಗಳಿಗೆ ಸಬ್ಸಿಡಿಗಳ ಕಡಿತ ಒಂದೆಡೆ ಉತ್ಪಾದನೆ ವೆಚ್ಚ ಹೆಚ್ಚಿಸಿದ್ದರೆ, ಅದಕ್ಕೆ ತಕ್ಕ ಬೆಂಬಲ ಬೆಲೆ ಹೆಚ್ಚಳವಾಗದಿರುವುದು ಸಂಕಷ್ಟಗಳ ಹೆಚ್ಚಳಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ 2019–20 ಕ್ಕೆ ಹೋಲಿಕೆಯಲ್ಲಿ 2020–21 ರಲ್ಲಿ ರಾಜ್ಯದಲ್ಲಿನ ಒಟ್ಟು ಆಹಾರ ಧಾನ್ಯ ಉತ್ಪಾದನೆಯು 25 ಸಾವಿರ ಟನ್ ನಷ್ಟು ಅಲ್ಪ ಪ್ರಮಾಣದ ಹೆಚ್ಚಳ ಕಂಡರೆ, ದ್ವಿದಳ ಧಾನ್ಯಗಳ ಉತ್ಪಾದನೆ 2.27 ಲಕ್ಷ ಟನ್‌ಗಳಷ್ಟು ಕುಸಿತವಾಗಿದೆ. ಹತ್ತಿ ಉತ್ಪಾದನೆ 4.18 ಲಕ್ಷ ಟನ್ ಕುಸಿತವಾಗಿದೆ. 50 ಲಕ್ಷ ಟನ್ ಉತ್ಪಾದನೆ ಹೆಚ್ಚಳ ಕಂಡಿರುವ ಕಬ್ಬು ಬೆಳೆಯು ಕಾರ್ಖಾನೆ ಮತ್ತು ಲಾಭದಾಯಕ ಬೆಲೆ ಸಿಗದ ಹಾಗೂ ಹಿಂದಿನ ಸಾಲಿನ ಬಾಕಿ ಬಾರದ ಸಮಸ್ಯೆಯನ್ನು ಎದುರಿಸುತ್ತಿದೆ. ರೇಷ್ಮೆ ಬೆಳೆ ಬೆಲೆ ಕುಸಿದು, ವಿದೇಶಿ ಆಮದು ರೇಷ್ಮೆಯ ಸವಾಲನ್ನು ಎದುರಿಸುತ್ತಿದೆ. ಭಾರತೀಯ ಕೃಷಿ ಮತ್ತು ಗ್ರಾಮೀಣ ಆರ್ಥಿಕತೆಯ ಮೇಲಿನ ಕೋವಿಡ್–19ರ ಪರಿಣಾಮ ಅಂದಾಜಿಸಿರುವ ನಬಾರ್ಡ್‌ನ 2020 ಆಗಸ್ಟ್ ವರದಿಯು, ರಾಜ್ಯದ ಕೃಷಿ ಉತ್ಪನ್ನಗಳ ಬೆಲೆಯು ಶೇಕಡ 15 ಮತ್ತು ತೋಟಗಾರಿಕೆ ಬೆಳೆಗಳ ಬೆಲೆಗಳು ಶೇಕಡ 23ರಷ್ಟು ಇಳಿಕೆಯಾಗಿವೆ ಎಂದು ಗುರುತಿಸಿದೆ.

ರಾಜ್ಯದ ಗ್ರಾಮೀಣ ಕುಟುಂಬಗಳು ಸರಾಸರಿ ರೂ.1,26,240 ತಲಾ ಸಾಲವನ್ನು ಹೊಂದಿವೆ. 37.3 ಶೇಕಡ ಸಾಲವನ್ನು ಶೆಡ್ಯೂಲ್ ವಾಣಿಜ್ಯ ಬ್ಯಾಂಕ್‌ಗಳಿಂದ, 11 ಶೇಕಡ ಸಾಲವನ್ನು ಆರ್.ಆರ್.ಬಿ. ಗಳಿಂದ, 13.6 ಶೇಕಡ ಸಾಲವನ್ನು ಸಹಕಾರ ಸಂಘಗಳಿಂದ, 3.7 ಶೇಕಡ ಸಾಲವನ್ನು ಸಹಕಾರಿ ಬ್ಯಾಂಕ್‌ಗಳಿಂದ ಮತ್ತು 5.1 ಶೇಕಡ ಸಾಲವನ್ನು ಸ್ವಸಹಾಯ ಗುಂಪುಗಳಿಂದ ಗ್ರಾಮೀಣ ಕುಟುಂಬಗಳು ಪಡೆದಿವೆ ಎಂದು ವರದಿಯಲ್ಲಿ ಗುರುತಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿನ ಸಂಕಷ್ಟವನ್ನು ಇದು ತೋರುತ್ತದೆ. ■

ಕರ್ನಾಟಕದ ಉದ್ಯೋಗ ಪರಿಸ್ಥಿತಿ: 2018–21....

ಪುಟ 8 ರಿಂದ



1146.84 ಲಕ್ಷ ಮಾನವ ದಿನಗಳನ್ನು ಸೃಜಿಸಿ 29.34 ಲಕ್ಷ ಕುಟುಂಬಗಳಿಗೆ ಉದ್ಯೋಗ ನೀಡಲಾಗಿದೆ. 2019–20ರಲ್ಲಿ 21241 ಕುಟುಂಬಗಳು 100 ದಿನಗಳ ಉದ್ಯೋಗ ಪೂರೈಸಿದ್ದರೆ 2020–21 ರಲ್ಲಿ ಡಿಸೆಂಬರ್ ಅಂತ್ಯದ ವೇಳೆಗೆ 30028 ಕುಟುಂಬಗಳು 100 ದಿನಗಳ ಉದ್ಯೋಗ ಪೂರೈಸಿವೆ ಎಂಬ ಅಂಕಿ ಅಂಶವು ಕೋವಿಡ್ ಮತ್ತು ಲಾಕ್ಡೌನ್‌ನಿಂದಾಗಿ ಗ್ರಾಮೀಣ ಪ್ರದೇಶಗಳಿಗೆ ನಗರಗಳಿಂದ ಹಿಂತಿರುಗಿದ್ದ ಅಸಂಘಟಿತರಿಗೆ ಉದ್ಯೋಗ ಒದಗಿಸದೆ ಬಿಜೆಪಿ ಸರ್ಕಾರ ವಂಚಿಸಿದೆ ಎಂಬುದನ್ನು ತೋರುತ್ತದೆ. ಪ್ರತಿ ಕುಟುಂಬಕ್ಕೆ ನೀಡಲಾದ ಕೆಲಸದ ಸರಾಸರಿ ಮಾನವ ದಿನಗಳು ಅಲ್ಪಪ್ರಮಾಣದಲ್ಲಿ ಏರಿಕೆಯಾಗಿರುವಾಗ ಉದ್ಯೋಗ ಚೀಟಿ ಪಡೆದ ಕುಟುಂಬಗಳ ಸಂಖ್ಯೆ 7.44 ಲಕ್ಷ ಹೆಚ್ಚಳವಾಗಿರುವುದು ಗ್ರಾಮೀಣ ಸಂಕಷ್ಟವನ್ನು ಬಿಂಬಿಸುತ್ತದೆ.

ಉದ್ಯೋಗದ ಹೊಸ ಸ್ವರೂಪ:

ಡಿಜಿಟಲ್ ಲೇಬರ್ ಪ್ಲಾಟ್‌ಫಾರ್ಮ್ (ಗಿಗ್ ಆರ್ಥಿಕತೆ) ಇತ್ತೀಚಿನ ಅವಧಿಯಲ್ಲಿ ರೂಪಾಂತರವಾಗುತ್ತಿರುವ ಅತ್ಯಂತ ಮಹತ್ವದ ಉದ್ಯೋಗ ಸ್ವರೂಪಗಳಲ್ಲಿ ಒಂದೆಂದರೆ, 'ಡಿಜಿಟಲ್ ಲೇಬರ್ ಪ್ಲಾಟ್‌ಫಾರ್ಮ್'ಗಳ ಬೆಳವಣಿಗೆ. ಇದರಲ್ಲಿ ಎರಡು ರೀತಿಗಳಿವೆ: ಒಂದು ವೆಬ್ ಆಧಾರಿತ ("ಕ್ರೌಡ್ ವರ್ಕ್"), ಮತ್ತೊಂದು ಸ್ಥಳ–ಆಧಾರಿತ ಅಪ್ಲಿಕೇಶನ್ಸ್ (ಆಪ್ಸ್). ಇಲ್ಲಿ ಕೆಲಸದ ವಿಧಾನಗಳು ಹಿಂದಿನಿಂದ ಬಂದ ಹಲವಾರು ಕೆಲಸದ ವಿಧಾನಗಳ ರೀತಿಯಲ್ಲೇ ಕಾಣುತ್ತವೆ. ಆದರೆ ಆ ಕೆಲಸಗಳನ್ನು ಡಿಜಿಟಲ್ ಸಾಧನಗಳೆಂಬ ಮಧ್ಯವರ್ತಿಗಳ ಮೂಲಕ ನಿರ್ವಹಿಸುವ ವಿಧಾನಗಳು ಮಾತ್ರ ತಂತ್ರಜ್ಞಾನದ ಬೆಳವಣಿಗೆಯ ಉತ್ಪನ್ನವಾಗಿದ್ದು, ಅವೇ ಡಿಜಿಟಲ್ ಲೇಬರ್ ಪ್ಲಾಟ್‌ಫಾರ್ಮ್‌ಗಳಾಗಿವೆ.

ವೆಬ್ ಆಧಾರಿತ ಎಂದರೆ ಭೌಗೋಳಿಕವಾಗಿ ಚದುರಿಕೊಂಡಿರುವ ಸಮೂಹಗಳಿಗೆ ಬಹಿರಂಗ ಕರೆಯ ಮೂಲಕ ಕೆಲಸವನ್ನು ಹೊರಗುತ್ತಿಗೆ ನೀಡುವುದು. ಒಂದು ಕಂಪ್ಯೂಟರ್ ಅಥವಾ ಇಂಟರ್‌ನೆಟ್ ಸಂಪರ್ಕ ಬಳಸಿ ಜಗತ್ತಿನ ಯಾವುದೇ ಮೂಲೆಯಿಂದಾದರೂ ಮಾಡಬಹುದಾದ ಬಹುತೇಕ ಕ್ಲೆರಿಕಲ್ ಕೆಲಸಗಳನ್ನು – ಇಮೇಜ್ ಐಡೆಂಟಿಫಿಕೇಷನ್, ಟ್ರಾನ್ಸ್‌ಕ್ರಿಪ್ಶನ್ ಮತ್ತು ಅನ್ನೋಟೇಶನ್, ಕಂಟೆಂಟ್ ಮಾಡರೇಷನ್, ಡೇಟಾ ಕಲೆಕ್ಷನ್ ಮತ್ತು ಪ್ರೊಸೆಸಿಂಗ್, ಆಡಿಯೋ ಮತ್ತು ವಿಡಿಯೋ ಟ್ರಾನ್ಸ್‌ಕ್ರಿಪ್ಶನ್, ಮುಂತಾದವುಗಳನ್ನು – ಇದು ಒಳಗೊಂಡಿದೆ. ಕೆಲಸವನ್ನು ನೀಡುವವರು ಈ ಪ್ಲಾಟ್‌ಫಾರ್ಮ್‌ಗಳನ್ನು ಬಳಸಿ ತಮಗೆ ಆಗಬೇಕಾದ ಕೆಲಸವನ್ನು ಅದರಲ್ಲಿ ಹಾಕುತ್ತಾರೆ. ಇದರಲ್ಲಿ ಬೇಕಾದ್ದನ್ನು ಆಯ್ಕೆ ಮಾಡಿಕೊಂಡು ಕೆಲಸ ಮಾಡುವ ಕಾರ್ಮಿಕರಿಗೆ ನಿಗದಿಪಡಿಸಿದ ಮೊತ್ತವನ್ನು ನೀಡಲಾಗುತ್ತದೆ. ಈ ಕಾರ್ಮಿಕರಿಗೆ ಕಾಯ್ದೆಗಳ ಮತ್ತು ಸಾಮಾಜಿಕ ಸುರಕ್ಷತೆಗಳ ಯಾವುದೇ ರಕ್ಷಣೆ ಇವುಗಳಲ್ಲಿ ಇಲ್ಲ. ಮಾಡಿದ ಕೆಲಸಕ್ಕೆ ಹೇಗೆ ಮತ್ತು ಎಲ್ಲಿ ಹಣ ನೀಡಲಾಗುವುದು, ಇವರ ಕೆಲಸವನ್ನು ಹೇಗೆ ಮೌಲ್ಯಮಾಪನ ಮಾಡಲಾಗುವುದು, ಸಮಸ್ಯೆಯಾದಲ್ಲಿ ಕಾರ್ಮಿಕರಿಗೆ ಪರಿಹಾರದ ದಾರಿ ಏನಿದೆ, ಮುಂತಾದ ಅಂಶಗಳು ಇಲ್ಲದ ಷರತ್ತುಗಳಿಗೆ ಬಹುತೇಕ ಕಾರ್ಮಿಕರು ಒಳಪಟ್ಟಿರುತ್ತದೆ. ಇದರಿಂದ ಕಾರ್ಮಿಕರು ಅಪಾರವಾದ ಶೋಷಣೆಗೆ ಒಳಗಾಗುತ್ತಿದ್ದಾರೆ.

ಸ್ಥಳ–ಆಧಾರಿತ ಅಪ್ಲಿಕೇಶನ್ಸ್, ಅಂದರೆ ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ವ್ಯಕ್ತಿಗಳಿಗೆ ಕೆಲಸವನ್ನು ಹಂಚುವುದು. ವಸತಿ, ಸಾರಿಗೆ, ಎಲ್ಲಾ ರೀತಿಯ ವಸ್ತುಗಳ ಡೆಲಿವರಿ, ಗೃಹ ಕೆಲಸಗಳು ಮುಂತಾದ ಕೆಲಸಗಳನ್ನು ಇದು ಒಳಗೊಂಡಿದೆ. ಬೆಂಗಳೂರು ಮತ್ತು ಇತರ ನಗರಗಳಲ್ಲಿ ಇದನ್ನು ವ್ಯಾಪಕವಾಗಿ ಬಹಿರಂಗವಾಗಿ ಕಾಣಬಹುದು. ಅಮೇಜಾನ್, ಫ್ಲಿಪ್‌ಕಾರ್ಟ್, ಊಬರ್, ಓಲಾ, ಸ್ವಿಗ್ಗಿ, ಜೊಮಾಟೊ, ಬಿಗ್ ಬ್ಯಾಸ್ಕೆಟ್, ಹೀಗೆ ನೂರಾರು ಕಂಪನಿಗಳಲ್ಲಿ ಕಾರ್ಮಿಕರು ಗಂಟೆಗಳ ಆಧಾರದಲ್ಲಿ, ಡೆಲಿವರಿಯ ಆಧಾರದಲ್ಲಿ, ಟ್ರಿಪ್‌ಗಳ ಆಧಾರದಲ್ಲಿ ಕೆಲಸ ಮಾಡುವುದನ್ನು ಕಾಣಬಹುದು. ಈ ಆಪ್ ಆಧಾರಿತ ಕೆಲಸಗಳು ಕಾರ್ಮಿಕರ ಕೆಲಸದ ಸ್ವರೂಪವನ್ನೇ ಬದಲಾಯಿಸಿಬಿಟ್ಟಿದೆ. ಎಲ್ಲಾ ಕೆಲಸಗಳನ್ನೂ ಅತಂತ್ರಗೊಳಿಸುತ್ತಾ, ಅಸಂಘಟಿತಗೊಳಿಸುತ್ತಾ ಇದು ಬೆಳೆಯುತ್ತಿದೆ. ಮುಂದಿನ ದಿನಗಳಲ್ಲಿ ಎಲ್ಲಾ ರಂಗಗಳಲ್ಲೂ ಇಂತಹ ತಂತ್ರಜ್ಞಾನಗಳ ಬೆಳವಣಿಗೆ ಹೆಚ್ಚಾಗಲಿದೆ. ಹೀಗಾಗಿ ಇಂತಹ ಕ್ಷೇತ್ರಗಳಿಗೆ ಸಂಬಂಧಿಸಿ ಇರುವ ಕಾಯ್ದೆ ಮತ್ತು ಕಾನೂನುಗಳನ್ನು ಪುನರ್ ರೂಪಿಸಲು ಮತ್ತು ನೂತನವಾದ ಕಾನೂನುಗಳನ್ನು ಜಾರಿಗೆ ತರುವುದು ಅಗತ್ಯವಿದೆ. ಈ ನಿಟ್ಟಿನಲ್ಲಿ ಡಿಜಿಟಲ್ ಲೇಬರ್ ಪ್ಲಾಟ್‌ಫಾರ್ಮ್‌ಗಳ ವಿಧಾನವನ್ನು ಅರ್ಥ ಮಾಡಿಕೊಂಡು ಕಾರ್ಮಿಕರನ್ನು ಸಂಘಟಿಸಲು ಮುಂದಾಗಬೇಕಾಗಿದೆ. ಗಿಗ್ ಕಾರ್ಮಿಕರಿಗೆಂದು ರಾಜ್ಯ ಸರ್ಕಾರವು ನೂತನ ಕಾನೂನು ರೂಪಿಸಲು ನಡೆಸಿದ ಯತ್ನಗಳನ್ನು ಕಾರ್ಮಿಕ ಕಾನೂನು ಸಂಹಿತೀಕರಣದ ನಂತರ ಕೈಬಿಟ್ಟಿದೆ.

ಕಾರ್ಮಿಕರ ಪರಿಸ್ಥಿತಿ

ಕೋವಿಡ್ ಸಾಂಕ್ರಾಮಿಕ ರೋಗದ ಲಾಕ್ಡೌನ್‌ನಿಂದ ಸಂಘಟಿತ ಮತ್ತು ಅಸಂಘಟಿತ ಎರಡೂ ಕ್ಷೇತ್ರಗಳಲ್ಲಿ ಕಾರ್ಮಿಕರ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಗ್ರಾಮೀಣ ಭೂರಹಿತರು ಮತ್ತು ಬಡ ರೈತರು ಕೃಷಿಯಿಂದ ಹೊರದೂಡಲ್ಪಡುತ್ತಿದ್ದಾರೆ. ಇಂತಹವರು ನಗರಗಳಲ್ಲಿ ಆಟೋ, ಟ್ಯಾಕ್ಸಿ, ಸೆಕ್ಯೂರಿಟಿ ಗಾರ್ಡ್‌ಗಳು, ಬೀದಿ ಬದಿ ವ್ಯಾಪಾರ, ಮನೆಗೆಲಸ, ಕಟ್ಟಡ ಕೆಲಸ ಮುಂತಾದ ಅಸಂಘಟಿತ ಕಾರ್ಮಿಕರ ಸಾಲಿಗೆ ಸೇರುತ್ತಿದ್ದಾರೆ. ಕರ್ನಾಟಕದ ಗ್ರಾಮೀಣ ನಿರುದ್ಯೋಗಿ ಯುವಕರು ಮತ್ತು ನಗರದ ಅರೆ–ಉದ್ಯೋಗಿ ಮತ್ತು ನಿರುದ್ಯೋಗಿ ಯುವಕರು ಆಪ್ ಆಧಾರಿತ ಕೆಲಸಗಳಲ್ಲಿ ತೊಡಗುತ್ತಿದ್ದಾರೆ. ಆಟೋ ಚಾಲಕರು ಓಲಾ ಊಬರ್ ವ್ಯಾಪ್ತಿಗೆ ಒಳಪಡುವಿಕೆಯ ಪ್ರಕ್ರಿಯೆ ತೀವ್ರಗೊಂಡಿದೆ. ಕೋವಿಡ್ ಲಾಕ್ಡೌನ್‌ನಿಂದಾಗಿ ಖಾಸಗಿ ಸಾರಿಗೆ ಚಾಲಕರು ತೀವ್ರ ಸಂಕಷ್ಟಕ್ಕೆ ಸಿಲುಕಿ, ಕೆಲಸ ತೊರೆಯುತ್ತಿರುವ ಪ್ರವೃತ್ತಿ ಕಾಣಲಾಗುತ್ತಿದೆ.

ಅಸಂಘಟಿತ ಕಾರ್ಮಿಕರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಹೊರ ರಾಜ್ಯಗಳ ವಲಸೆ ಕಾರ್ಮಿಕರು ಮುಖ್ಯವಾಗಿ ಬಿಹಾರ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಒರಿಸ್ಸಾ ರಾಜ್ಯಗಳ ಬಡವರು ಕಟ್ಟಡ ಕಾರ್ಮಿಕರಲ್ಲಿ ಗಣನೀಯವಾಗಿದ್ದಾರೆ. ವಲಸೆ ಅಸಂಘಟಿತ ಕಾರ್ಮಿಕರಾಗಿ ಕಡಿಮೆ ಕೂಲಿಗೆ, ಸರಿಯಾದ ವಸತಿಯಿಲ್ಲದೆ ಶೆಡ್ಡುಗಳಲ್ಲಿ ವಾಸಿಸುತ್ತಾ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಮತ್ತೊಂದೆಡೆ ಉದ್ಯೋಗಾವಕಾಶಗಳು ಉತ್ತರ ಭಾರತದವರ ಪಾಲಾಗುತ್ತಿವೆ ಎಂಬ ಅಸಮಾಧಾನವೂ ಜನರ ನಡುವೆ ಬೆಳೆಯುತ್ತಿದೆ. ಮುಂದೆ ಇದು ಭಾಷಾ ಸಮಸ್ಯೆಗೂ ಎಡೆಮಾಡಿ ಕೊಡಬಹುದಾಗಿದೆ. ಆಟೋ, ಕಟ್ಟಡ ಕಾರ್ಮಿಕರು, ಬೀದಿ ಬದಿ ವ್ಯಾಪಾರಿಗಳು, ಮನೆಗೆಲಸದ ಕಾರ್ಮಿಕರ ಸಾಮಾಜಿಕ ಸುರಕ್ಷತೆಯ ಪ್ರಶ್ನೆಗಳ ಮೇಲೆ ಮತ್ತು ಕೋವಿಡ್ ಪರಿಹಾರಕ್ಕಾಗಿ ಹಲವು ಹೋರಾಟಗಳನ್ನು ಲಾಕ್ಡೌನ್ ನಡುವೆ ನಡೆಸಲಾಗಿದೆ.

ಚಳುವಳಿಯಿಂದಾಗಿ ನೌಕರರು ಪಡೆದಿರುವ ಸೌಲಭ್ಯಗಳು, ಗೌರವಧನ ಹೆಚ್ಚಳದಂತಹ ಸಾಧನೆಗಳಿಗೆ ಕಾರಣವಾದ ಸ್ಕೀಂ ನೌಕರರ ಚಳುವಳಿ ಮುರಿಯಲು ಒಂದೆಡೆ ಟ್ರಸ್ಟ್ ಹೆಸರಿನಲ್ಲಿ ಅಂಗನವಾಡಿ ನೌಕರರನ್ನು ಸಂಘಟಿಸುವ ಮತ್ತೊಂದೆಡೆ ರಾಷ್ಟ್ರಿಯ ಶಿಕ್ಷಣ ನೀತಿಯಡಿ ಇಡೀ ಯೋಜನೆಯನ್ನೇ ಇಲ್ಲದಾಗಿಸುವ ಯತ್ನ ನಡೆದಿದೆ. ಈ ಸವಾಲನ್ನು ಎದುರಿಸಬೇಕಿದೆ. ಪರಂಪರಾಗತ ಬೀಡಿ, ಗೇರು ಮುಂತಾದ ಕೈಗಾರಿಕಾ ಕಾರ್ಮಿಕರು ಉದ್ದಿಮೆಗಳು ಎದುರಿಸುತ್ತಿರುವ ಸವಾಲುಗಳಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪಂಚಾಯಿತಿ ಮತ್ತು ಬಿಸಿಊಟ ನೌಕರರು ವರ್ಷಾನುಗಟ್ಟಲೆ ಸಂಬಳ ಇಲ್ಲದೆ ದುಡಿಯಬೇಕಾಗಿ ಬಂದಿದೆ. ಸ್ಕೀಂ ನೌಕರರು ನೇರ ನಗದು ವರ್ಗಾವಣೆ, ISKCON ಅದಮ್ಯ ಚೇತನ ಮುಂತಾದ ಸ್ವಯಂ ಸೇವಾ ಸಂಘಟನೆಗಳ ಅಪಾಯವನ್ನು ಎದುರಿಸಬೇಕಾಗಿ ಬಂದಿದೆ.

ಸಂಘಟಿತ ಕಾರ್ಮಿಕರ ಕಾಯ್ದೆಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳು ನಡೆದಿರುವಾಗಲೇ, ಬಹುಸಂಖ್ಯಾತ ಕಾರ್ಮಿಕರು ಕಾರ್ಮಿಕ ಸಂಘಗಳ ಅಡಿಯಲ್ಲಿ ಸಂಘಟಿತರಾಗಿಲ್ಲ ಎಂಬುದನ್ನು ಗಮನಿಸಬೇಕಾಗಿದೆ. ರಾಜ್ಯ ಬಿಜೆಪಿ ಸರ್ಕಾರವು ನಿಶ್ಚಿತ ಅವಧಿಯ ಕಾರ್ಮಿಕರಿಗೆ (FTE) ಅನುವುಗೊಳಿಸುವ ತಿದ್ದುಪಡಿಯನ್ನು ಕೈಗಾರಿಕಾ ಕಾರ್ಮಿಕರ ಸ್ಥಾಯಿ ಆದೇಶಗಳಿಗೆ ಮಾಡಿದ ಕಾರಣ ಮಾಲೀಕರಿಗೆ FTE ಗಳ ನೇಮಕಕ್ಕೆ ಮುಕ್ತ ಅವಕಾಶ ನೀಡಿದೆ. ಪರಿಣಾಮವಾಗಿ ಬಹುತೇಕ ದೊಡ್ಡ ಕಾರ್ಖಾನೆಗಳಲ್ಲಿ ಏನಾದರೂ ಮಾಡಿ ಖಾಯಂ ಕಾರ್ಮಿಕರನ್ನು ಸ್ವಯಂ ನಿವೃತ್ತಿಗೆ ದೂಡುವ, ಗುತ್ತಿಗೆ ಕಾರ್ಮಿಕರಿಗೂ ಪ್ರತ್ಯೇಕಗೊಳ್ಳಲು ವಿಶೇಷ ಪರಿಹಾರ ನೀಡುವ ಪ್ರಯತ್ನಗಳು ನಡೆದಿವೆ. ಸಾವಿರಾರು ಸಂಖ್ಯೆಯಲ್ಲಿ ಕಾರ್ಮಿಕರು ಸ್ವಯಂ ನಿವೃತ್ತಿ ಪಡೆಯುವ, ಬೇರ್ಪಡೆಗೊಳ್ಳುವ ಪ್ರವೃತ್ತಿಯು ತೀವ್ರಗೊಂಡಿದೆ. ಪರಿಣಾಮವಾಗಿ ಡಿಪ್ಲಮೊ, ಇಂಜಿನಿಯರಿಂಗ್ ಪದವಿ ಪಡೆದವರು FTE ಗಳಾಗಿ ಕೆಲಸ ಮಾಡುವವರ ಸಂಖ್ಯೆ ಹೆಚ್ಚುತ್ತಾ ವ್ಯಾಪಕವಾಗುತ್ತಿದೆ. ದಿವಾಳಿ ಮತ್ತು ಪಾಪರಿಕೆ ಸಂಹಿತೆಯಡಿ, ರಾಷ್ಟ್ರೀಯ ಕಂಪನಿ ಕಾನೂನು ಟ್ರಿಬುನಲ್‌ಗಳಿಗೆ ದಿವಾಳಿ ಅರ್ಜಿ ಸಲ್ಲಿಸಿ ಅದರ ಪರಿಹಾರದ ನೆಪದಲ್ಲಿ ಕಾರ್ಮಿಕರನ್ನು ಬೀದಿಗೆ ತಳ್ಳುವ, ಸಾಲಗಳನ್ನು ಮನ್ನಾ ಮಾಡಿಸಿಕೊಂಡು ಮತ್ತೊಂದು ಹೆಸರಿನಲ್ಲಿ ಕಂಪನಿ ತೆರೆದು ಅನಿವಾರ್ಯವಾದಲ್ಲಿ ಅದೇ ಕಾರ್ಮಿಕರನ್ನು ಕಡಿಮೆ ವೇತನಕ್ಕೆ ಶರತ್ತುಬದ್ಧವಾಗಿ ಕೆಲಸಕ್ಕೆ ನೂತನವಾಗಿ ಸೇರಿಸಿಕೊಳ್ಳುವ ಪ್ರವೃತ್ತಿಗಳು ತೀವ್ರವಾಗಿವೆ. ರಾಜ್ಯ ರಸ್ತೆ ಸಾರಿಗೆ ನೌಕರರು ರಾಜ್ಯ ಸರ್ಕಾರಿ ನೌಕರರಾಗಬೇಕು ಮತ್ತು ವೇತನ ಆಯೋಗದ ಸೌಲಭ್ಯ ಪಡೆಯಬೇಕೆಂದು ನಡೆಸಿದ ಮುಷ್ಕರಕ್ಕೆ ಪ್ರತಿಕಾರವಾಗಿ ರಾಜ್ಯ ಸರ್ಕಾರ ನಡೆಸಿರುವ ಅಮಾನತ್ತು ಮತ್ತು ವಜಾಗೊಳಿಸುವ ಕ್ರಮಗಳಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದಾರೆ.

ದೊಡ್ಡ ಕೈಗಾರಿಕೆಗಳ ಕಾರ್ಮಿಕರ ನಡುವೆ ಮೋದಿ ಪರ ಕ್ರಿಯಾಶೀಲತೆ ಹೆಚ್ಚಿದೆ. ಅದೇ ವೇಳೆ ನೀತಿಗಳ ವಿರುದ್ಧ ಮುಷ್ಕರಗಳಲ್ಲಿ, ಹೋರಾಟಗಳಲ್ಲಿ ಭಾಗವಹಿಸುತ್ತಿರುವ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ. ಕಾರ್ಮಿಕರಲ್ಲಿ ಬೆಳೆದು ಬರುತ್ತಿರುವ ಅತೃಪ್ತಿಯ ಮನೋಭಾವವನ್ನು ಸರ್ಕಾರದ ನೀತಿಗಳ ವಿರುದ್ಧದ ಹೋರಾಟ ಚಳುವಳಿಯಾಗಿ ಮಾರ್ಪಡಿಸಲು ಕಾರ್ಮಿಕರ ನಡುವೆ ವ್ಯಾಪಕ ರಾಜಕೀಯ ಪ್ರಚಾರಾಂದೋಲನಗಳನ್ನು ಸಂಘಟಿಸಬೇಕಿದೆ. ■

ಮಾಧ್ಯಮ ಕ್ಷೇತ್ರದ ಬೆಳವಣಿಗೆಗಳು: 2018-21 ಭಾಗ-2

ಸಾಂಪ್ರದಾಯಿಕ ಮಾಧ್ಯಮಗಳಿಗೆ ಡಿಜಿಟಲ್ ಸವಾಲು

ಸಿಪಿಐ(ಎಂ) ಕರ್ನಾಟಕ 23ನೆಯ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ 22ನೆಯ ಸಮ್ಮೇಳನದ ನಂತರದ ಅವಧಿಯಲ್ಲಿ ವಿವಿಧ ಕ್ಷೇತ್ರಗಳಲ್ಲಿನ ಬೆಳವಣಿಗೆಗಳ ಕುರಿತ ಲೇಖನಗಳ ಸರಣಿಯ ಭಾಗವಾಗಿ, ಈ ಅವಧಿಯ ಮಾಧ್ಯಮ ಕ್ಷೇತ್ರದ ಬೆಳವಣಿಗೆಗಳನ್ನು ಇಲ್ಲಿ ಕೊಡಲಾಗಿದೆ. ಹಿಂದಿನ ಸಂಚಿಕೆಯಲ್ಲಿ ಪ್ರಕಟವಾದ ಭಾಗ-1 ರಲ್ಲಿ ಬಹುಪಾಲು ಮಾಧ್ಯಮಗಳು ಆಳುವವರ ಬೇಟೆನಾಯಿಗಳಾದ ಪ್ರಮುಖ ಬೆಳವಣಿಗೆ ಮತ್ತಿತರ ಬೆಳವಣಿಗೆಗಳ ನಿರೂಪಣೆಯಿತ್ತು. ಭಾಗ-1 ರಲ್ಲಿ ವಿವರಿಸಲಾದ ವೆಬ್ ಸಂಪರ್ಕ ವಿಸ್ತಾರದ ಪರಿಣಾಮವಾಗಿ ಮಾಧ್ಯಮ ಕ್ಷೇತ್ರದಲ್ಲಿ ಆಗಿರುವ ಮಹತ್ತರ ಬದಲಾವಣೆಗಳ ನಿರೂಪಣೆ ಈಭಾಗ-2 ರಲ್ಲಿ ಇದೆ.

— ವಸಂತರಾಜ ಎನ್.ಕೆ.

ಯಾವಾಗ ಬೇಕಾದರೂ, ಎಲ್ಲಿ ಬೇಕಾದರೂ ಬಳಸಬಹುದಾದ, ಬಹು ಮಾಧ್ಯಮಗಳನ್ನು (ಪಠ್ಯ, ಚಿತ್ರ, ಅಡಿಯೊ, ವಿಡಿಯೊ) ತಲುಪಿಸಬಲ್ಲ, ಪರಸ್ಪರ ಸ್ಪಂದನೆ ಇರುವ, ವೇಗದ, ವೈಯಕ್ತಿಕ/ಸಾಮೂಹಿಕ ಮಾಧ್ಯಮವಾಗಿ ವೆಬ್ (ಅಥವಾ ಡಿಜಿಟಲ್) ಬೆಳೆದಿದೆ.

ವೆಬ್-ಆಧಾರಿತ ಸೇವೆಗಳ ವಿಸ್ತರಣೆ

ವೆಬ್ (ಅಥವಾ ಡಿಜಿಟಲ್) – ಪತ್ರಿಕೆ ಟಿವಿ, ರೇಡಿಯೋ ಮತ್ತು ಫಿಲಂ ಥಿಯೇಟರ್ ಸ್ಥಾನ ಆಕ್ರಮಿಸಬಲ್ಲ, ಅವುಗಳ ಪಾತ್ರಕ್ಕೆ ಸವಾಲು ಹಾಕಬಲ್ಲ, ಅವುಗಳಿಗೆ ಇನ್ನೂ ಉತ್ತಮವಾದ ಬದಲಿಯಾಗಬಲ್ಲ – ಮಾಧ್ಯಮವಾಗಿ ಬೆಳೆದಿದೆ. ಪ್ರಿಂಟ್ ಪತ್ರಿಕೆಗೆ ಬದಲಿಯಾಗಿ ವೆಬ್ ಪತ್ರಿಕೆಗಳು ಬೆಳೆದಿವೆ. ರೇಡಿಯೊ ಗೆ ಬದಲಿಯಾಗಿ ಪಾಡ್ ಕಾಸ್ಟ್, ಅಡಿಯೋ/ಸಂಗೀತದ ಸ್ಟ್ರೀಮಿಂಗ್ ಸೇವೆಗಳು ಬೆಳೆದಿವೆ. ಟಿವಿ ಗೆ ಬದಲಿಯಾಗಿ ವೆಬ್ ಆಧಾರಿತ ಯೂ ಟ್ಯೂಬ್, ವಿಮಿಯೊ ನಂತಹ ಒಟಿಟಿ ಎಂದು ಕರೆಯಲಾಗುವ (ಓವರ್ ದ ಟಾಪ್ – ಇಂಟರ್-ನೆಟ್ ಅಥವಾ ವೆಬ್ ವೇದಿಕೆಯ ಮೇಲೆ ಕೊಡುವ ಎಂಬರ್ಥದಲ್ಲಿ) ವಿಡಿಯೊ ಸೇವೆಗಳು ಬೆಳೆದಿವೆ. ಫಿಲಂ ಥೀಯೆಟರ್ ಗೆ ಬದಲಿಯಾಗಿ ಅಮೆಜಾನ್ ಪ್ರೈಂ ವಿಡಿಯೊ, ನೆಟ್‌ಫ್ಲಿಕ್ಸ್ ನಂತಹ ಚಂದಾ ಆಧಾರಿತ ಒಟಿಟಿ ಸೇವೆಗಳು ಆರಂಭವಾಗಿವೆ. ಕೊವಿಡ್ ಅವಧಿಯಲ್ಲಿ ಹಲವು (ಕನ್ನಡ ಸೇರಿದಂತೆ) ಫಿಲಂಗಳು ಒಟಿಟಿ ಯಲ್ಲೇ ಬಿಡುಗಡೆಯಾದವು. ಹಿಂದಿನ ಅವಧಿಯಲ್ಲಿ ವೆಬ್-ಆಧಾರಿತ ಸೇವೆಗಳು ಬಹುಪಾಲು ಜಾಹೀರಾತು ಆಧಾರಿತವಾಗಿದ್ದು ನೋಡುಗ/ಕೇಳುಗ/ಓದುಗರಿಗೆ ಉಚಿತವಾಗಿದ್ದವು. ಆದರೆ ಈಗ ಚಂದಾ ಆಧಾರಿತ ಸೇವೆಗಳು (ವಿಶೇಷವಾಗಿ ವಿಡಿಯೋಗಳಲ್ಲಿ) ಆರಂಭವಾಗಿ ವಿಸ್ತರಣೆಯಾಗುತ್ತಿದೆ. ಮಾತ್ರವಲ್ಲ, ಸಾಂಪ್ರದಾಯಿಕ ಮಾಧ್ಯಮಗಳಾದ ಪತ್ರಿಕೆ, ಟಿವಿ, ರೇಡಿಯೊ, ಫಿಲಂ ಗಳು ತಮ್ಮ ವೆಬ್ ಆವೃತ್ತಿಯನ್ನು ಆರಂಭಿಸಿ ಅದನ್ನು ಮೊದಲು ಉಚಿತವಾಗಿ, ಕ್ರಮೇಣ ಚಂದಾ-ಆಧಾರಿತವಾಗಿ ನಡೆಸುವುದು ಅಗತ್ಯವಾಗಿ ಬಿಟ್ಟಿದೆ. ಹೀಗೆ ಮಾಧ್ಯಮಗಳಲ್ಲಿ ಪತ್ರಿಕೆ, ಟಿವಿ, ರೇಡಿಯೋ, ಡಿಜಿಟಲ್/ವೆಬ್ (ಮತ್ತು ಫಿಲಂ ಸಹ) ಎಂದು ಮಾಧ್ಯಮ ವೇದಿಕೆ, ಆ ಸೇವೆ ಕೊಡುವ ಕಂಪನಿ, ಅದಕ್ಕೆ ಕೊಡಬೇಕಾದ ಚಂದಾ-ಇವುಗಳ ಮೇಲೆ ಆಧಾರಿತವಾಗಿ ಪ್ರತ್ಯೇಕಿಸುವುದು ಗೋಜಲಾಗುತ್ತಿದೆ. ಉದಾಹರಣೆಗೆ ಮೊಬೈಲ್ ಸೇವೆ ಕೊಡುವ ಕಂಪನಿಗಳು ವೆಬ್, ಕೆಲವು ಒಟಿಟಿ ಅಡಿಯೊ/ವಿಡಿಯೊ ಸೇವೆಗಳನ್ನು ಬಂಡಲ್ ಮಾಡಿ ಒಂದು ಚಂದಾ ವಿಧಿಸುತ್ತವೆ. ಅದೇ ರೀತಿ ಕೇಬಲ್ ಅಥವಾ ಸ್ಯಾಟಲೈಟ್ ಟಿವಿ ಸೇವೆಯ ಕಂಪನಿಗಳು ಸಹ ಟಿವಿ ಚಾನೆಲುಗಳಲ್ಲದೆ ವೆಬ್, ಒಟಿಟಿ ಅಡಿಯೊ/ವಿಡಿಯೊ ಸೇವೆಗಳನ್ನು ಬಂಡಲ್ ಮಾಡಿ ಕೊಡುತ್ತಿವೆ. ಅವುಗಳಲ್ಲಿ ಅಡಿಯೊ/ವಿಡಿಯೊ ಕರೆ ಸಹ ಮಾಡಬಹುದು. ಟಿವಿ, ಕಂಪ್ಯೂಟರ್, ಲ್ಯಾಪ್ ಟಾಪ್, ಪ್ಯಾಡ್, ಮೊಬೈಲ್ ಉಪಕರಣಗಳು ಸಹ ಎಲ್ಲ ಸೇವೆ, ಮಾಧ್ಯಮಗಳನ್ನು ಕೊಡಬಲ್ಲದ್ದಾಗಿ ವಿಕಾಸ ಹೊಂದಿವೆ. ಪ್ರಜಾವಾಣಿ ಇ-ಪತ್ರಿಕೆಯನ್ನು ಇವ್ಯಾವುದರಲ್ಲಿ ಓದಬಹುದು, ವಿವಿಧ ಭಾರತಿ ಬೆಂಗಳೂರು ಕೇಂದ್ರದ ಕಾರ್ಯಕ್ರಮವನ್ನು ಯಾವುದರಲ್ಲೂ ಕೇಳಬಹುದು. ಟಿವಿ ಚಾನೆಲ್ ಮತ್ತು ಅಮೆಜಾನ್ ಪ್ರೈಂ ವಿಡಿಯೊ ಫಿಲಂ/ಸೀರಿಯಲ ನ್ನು ಸಹ ಯಾವುದರಲ್ಲೂ ನೋಡಬಹುದು.



ವೆಬ್-ಆಧಾರಿತ ಸೇವೆಗಳ ವಿಸ್ತರಣೆ, ಚಂದಾ ಆಧಾರಿತ ಸೇವೆಗಳ ಆರಂಭ/ವಿಸ್ತರಣೆ, ವಿವಿಧ ಸೇವೆಗಳ ಸಂಗಮ – ಈ ಅವಧಿಯ ಹೊಸ ಬೆಳವಣಿಗೆಯೆನ್ನಬಹುದು.

ವೆಬ್ ಬಳಕೆ ಹೆಚ್ಚಿದೆ

ಇ.ವೈ-ಫಿಕ್ಕಿ (EY-FICCI) ಸಮೀಕ್ಷೆ ವರದಿಯ ಪ್ರಕಾರ 2020ರಲ್ಲಿ, **ವೆಬ್ ವಿಡಿಯೋ ನೋಡುವವರ ಸಂಖ್ಯೆ ಶೇ.15ರಷ್ಟು ಹೆಚ್ಚಿ 46.8 ಕೋಟಿ ಆಗಿದೆ. ಇದು ಸ್ಮಾರ್ಟ ಫೋನ್ ಗಳ ಶೇ. 96 ಎಂದು ಗಮನಿಸಬೇಕು.** ವೆಬ್ ಸುದ್ದಿಯನ್ನು 45.4 ಕೋಟಿ ಜನ ಪಡೆದರು, ಇದು ವೆಬ್ ಬಳಕೆದಾರರ ಶೇ. 57 ಎಂದು ಗಮನಿಸಬೇಕು. ಆದರೆ ಕೇವಲ 10 ಲಕ್ಷ ಮಾತ್ರ ಚಂದಾ-ಆಧಾರಿತ ಸುದ್ದಿ ಸೇವೆಗಳನ್ನು ಪಡೆದರು. ವೆಬ್ ಸಂಗೀತ ಕೇಳಿದವರು 20.5 ಕೋಟಿ. ವೆಬ್ ಆಟದಲ್ಲಿ ತೊಡಗಿದವರು 24.5 ಕೋಟಿ. 2430 ಕೋಟಿ ಆಪ್ ಗಳನ್ನು (ಜಗತ್ತಿನಲ್ಲೇ ಅತಿ ಹೆಚ್ಚು) ಡೌನ್‌ಲೋಡ್ ಮಾಡಿದರು. ಇದರಲ್ಲಿ ನ್ಯೂಸ್ ಆಪ್ ಗಳ ಪ್ರಮಾಣ 3% ಆಗಿತ್ತು. ಈಗ **16 ವರ್ಷಕ್ಕಿಂತ ಹೆಚ್ಚು ವಯಸ್ಸಿನವರಲ್ಲಿ** ಶೇ. 32 ಜನ ಸಾಮಾಜಿಕ ಮಾಧ್ಯಮ ಬಳಸುತ್ತಾರೆ. ಅವರಲ್ಲಿ **ವಿವಿಧ ಸಾಮಾಜಿಕ ಮಾಧ್ಯಮಗಳನ್ನು ಬಳಸುವವರ ಪ್ರಮಾಣ : ಯೂ ಟ್ಯೂಬ್ (86%), ಫೇಸ್ ಬುಕ್ (75%), ವಾಟ್ಸಪ್ (75%), ಫೇಸ್ ಬುಕ್ ಮೆಸೆಂಜರ್ (71%), ಇನ್ಸ್ಟಾ ಗ್ರಾಂ(55%), ಟ್ವಿಟರ್ (51%), ಟಿಕ್ ಟಾಕ್ (32%).** ಕರ್ನಾಟಕ 5 ಕೋಟಿ ವೆಬ್ ಬಳಕೆದಾರರನ್ನು ಹೊಂದಿದ್ದು ದೇಶದ ಅರ್ಧದಷ್ಟು ಡಿಜಿಟಲ್ ಬಳಕೆದಾರರನ್ನು ಹೊಂದಿರುವ ಒಟ್ಟು 5 ರಾಜ್ಯಗಳಲ್ಲಿ ಒಂದು. ದೇಶದ ಶೇ.7.4 ವೆಬ್ ಬಳಕೆದಾರರನ್ನು ಕರ್ನಾಟಕವು ಹೊಂದಿದೆ.

ವೆಬ್ ಪತ್ರಿಕೆಗಳು

ಇಂಗ್ಲೀಷ್ ವೆಬ್ ಪತ್ರಿಕೆಗಳು ಈ ಅವಧಿಯಲ್ಲಿ ಗಮನಾರ್ಹವಾಗಿ ಬೆಳೆದಿದ್ದು, ಇಂಗ್ಲೀಷ್ ಮಾಧ್ಯಮದಲ್ಲಿ ಪರಿಣಾಮ ಬೀರಲು ಆರಂಭಿಸಿದೆ. ಪ್ರಮುಖ ಪತ್ರಿಕೆಗಳ ವೆಬ್ ಆವೃತ್ತಿಗಳು, ವಿವಿಧ ಮೂಲಗಳಿಂದ ಸುದ್ದಿಯನ್ನು ಸಂಗ್ರಹಿಸಿ ಪ್ರಕಟಿಸುವ ವೆಬ್ ತಾಣಗಳು (Inshorts, Firstpost, sify/samachar, Yahoo, Google ಇತ್ಯಾದಿ) ಮತ್ತು ಹೊಸ ವೆಬ್ ನಲ್ಲಿ ಮಾತ್ರ ಇರುವ ಸುದ್ದಿತಾಣಗಳು (Scroll, Wire, Quint, Citizen, Newsclick, Newslaundry ಇತ್ಯಾದಿ) ತಮ್ಮ ಓದುಗರನ್ನು ಗಮನಾರ್ಹವಾಗಿ ಹೆಚ್ಚಿಸಿಕೊಂಡಿವೆ. **ಹೆಚ್ಚಿನ ಈ ಪತ್ರಿಕೆಗಳು ದಾನ, ಫಂಡಿಂಗ್ ಗಳಿಂದ ನಡೆಯುತ್ತಿದ್ದು ಚಂದಾ-ಆಧಾರಿತವಾಗಿ ಬದಲಾಗಲು ತಯಾರಿ ನಡೆಸುತ್ತಿವೆ. ಪ್ರಮುಖ ಪತ್ರಿಕೆಗಳ ವೆಬ್ ಆವೃತ್ತಿಗಳು ಹೆಚ್ಚಿನವು ಈ ಅವಧಿಯಲ್ಲಿ ಚಂದಾ-ಆಧಾರಿತವಾಗಿ ಬದಲಾಗಿವೆ ಎಂದು ಗಮನಿಸಬಹುದು.** ಈ ವೆಬ್ ಪತ್ರಿಕೆಗಳ ಪ್ರಸಾರ ಸಣ್ಣದಿದ್ದರೂ ಅವುಗಳ ಪ್ರಭಾವ ಮುಖ್ಯವಾಹಿನಿ ಮಾಧ್ಯಮಗಳ ಮೇಲೂ ಜನತೆಯ ಮೇಲೂ ದೊಡ್ಡ ಪ್ರಮಾಣದಲ್ಲಿದೆ. ಅವು ರಾಷ್ಟ್ರೀಯ ಸಂವಾದ, ಸಂಕಥನಗಳ ಮೇಲೆ ದೊಡ್ಡ ಪರಿಣಾಮ ಬೀರುತ್ತಿವೆ. ಸರಕಾರಗಳಿಗೆ ಮುಜುಗರ ತರುತ್ತಿವೆ. ಇದು ಸರಕಾರ ಇವುಗಳಲ್ಲಿ ಮೂರು ಪತ್ರಿಕೆಗಳ ಕಚೇರಿ ಮತ್ತು ಒಡೆಯರ ಮನೆ ಮೇಲೆ ದಾಳಿ ಮಾಡಿದ್ದರಿಂದಲೇ ಜಾಹೀರಾಗುತ್ತದೆ. ಕನ್ನಡದಲ್ಲಿ ಸಹ ಪ್ರಮುಖ 5 ಪತ್ರಿಕೆಗಳ ವೆಬ್ ಆವೃತ್ತಿಗಳಲ್ಲಿ 3 ಚಂದಾ-ಆಧಾರಿತವಾಗಿ ಬದಲಾಗಿವೆ. ಸುದ್ದಿಯನ್ನು ಸಂಗ್ರಹಿಸಿ ಪ್ರಕಟಿಸುವ ವೆಬ್ ತಾಣಗಳು ಮತ್ತು ಹೊಸ ವೆಬ್ ನಲ್ಲಿ ಮಾತ್ರ ಇರುವ ಹಲವು ಪತ್ರಿಕೆಗಳು ಕಾಣಿಸಿಕೊಂಡಿವೆ. ಕನ್ನಡನೆಟ್.ಕಾಂ, ಪ್ರತಿಧ್ವನಿ, ನಾನುಗೌರಿ, ಜನಶಕ್ತಿ ಮೀಡಿಯಾ, ಪ್ರಸ್ತುತ, ಒನ್ ಇಂಡಿಯಾ, ಪೊಲಿಟಿಕ್, ಇತ್ಯಾದಿ ಪ್ರಮುಖವಾದವು. ಕಳೆದ ಅವಧಿಯಲ್ಲಿ ಉತ್ತಮವಾಗಿ ಸಾಕಷ್ಟು ಸಂಪನ್ಮೂಲಗಳೊಂದಿಗೆ ಆರಂಭವಾಗಿದ್ದ 'ದಿ ಸ್ಟೇಟ್' ಒಂದು ವರ್ಷದಲ್ಲೇ ಮುಚ್ಚಿದ್ದು ಈ ಅವಧಿಯ ಗಮನಾರ್ಹ ವಿದ್ಯಮಾನಗಳಲ್ಲೊಂದು. ಆಳುವ ಪಕ್ಷ ಅದಕ್ಕೆ ಸಂಪನ್ಮೂಲ ಒದಗಿಸಿದ್ದ ಉದ್ಯಮಿ ಮೇಲೆ ಬೆದರಿಕೆ/ಒತ್ತಡ ಹಾಕಿ ಅದನ್ನು ಮುಚ್ಚಿಸಲಾಯಿತು ಎಂದು ನಂಬಲರ್ಹ ಮೂಲಗಳಿಂದ ತಿಳಿದು ಬಂದಿದೆ. ಕೆಂಡಸಂಪಿಗೆ, ಋತುಮಾನ ದಂತಹ ಸಾಂಸ್ಕೃತಿಕ ಪತ್ರಿಕೆಗಳು ಪ್ರಕಟವಾಗುತ್ತಿವೆ.

ಜಾಹೀರಾತುದಾರರ ಮರ್ಜಿ ಬದಲಾಗುತ್ತಿದೆ

ಪತ್ರಿಕೆ, ಟಿವಿ, ರೇಡಿಯೋ ಮಾಧ್ಯಮಗಳು ಅದರ ಬಳಕೆದಾರ ಕೊಡುವ ಹಣಕ್ಕಿಂತ ಹೆಚ್ಚಾಗಿ ಜಾಹೀರಾತುಗಳ ಮೇಲೆ ಅವಲಂಬಿಸಿರುತ್ತವೆ. ಉದಾಹರಣೆಗೆ ದೈನಿಕ ಪತ್ರಿಕೆಗಳ ಉತ್ಪಾದನೆ ವೆಚ್ಚವೇ ಬಳಕೆದಾರ ಕೊಡುವ ಹಣಕ್ಕಿಂತ ಹೆಚ್ಚಾಗಿರುತ್ತದೆ. ದೈನಿಕ ಒಟ್ಟು ವಹಿವಾಟಿನ ಶೇ. 80 ಜಾಹೀರಾತಿನಿಂದ ಬಂದರೆ, ಶೇ. 20 ಮಾತ್ರ ಬಳಕೆದಾರರಿಂದ ಬರುತ್ತದೆ. ಆದ್ದರಿಂದ ನಿರ್ದಿಷ್ಟ ಪತ್ರಿಕೆಗಳ ಮತ್ತು ಇಡೀ ಮಾಧ್ಯಮದ (ಉದಾ: ಎಲ್ಲಾ ಪತ್ರಿಕೆಗಳ) ಭವಿಷ್ಯ ಜಾಹೀರಾತುದಾರರ ಮರ್ಜಿ ಮೇಲೆ ಅವಲಂಬಿಸಿರುತ್ತದೆ. ಜಾಹೀರಾತುದಾರರು ಅವರು ಮಾರಾಟ ಮಾಡಬೇಕಾದ ಸರಕು-ಸೇವೆಗಳ ಗ್ರಾಹಕರು ಎಲ್ಲಿದ್ದಾರೆ, ಅವರನ್ನು ಅತ್ಯಂತ ಕಡಿಮೆ ಖರ್ಚಿನಲ್ಲಿ ಖಾತರಿಯಾಗಿ ತಲುಪುವುದು ಹೇಗೆ ಎಂಬುದರ ಮೇಲೆ ಎಲ್ಲಿ ಜಾಹೀರಾತು ಕೊಡಬೇಕು ಎಂದು ನಿರ್ಧರಿಸುತ್ತಾರೆ. ಡಿಜಿಟಲ್ ಅಥವಾ ವೆಬ್ ಮಾಧ್ಯಮ ಜಾಹೀರಾತುದಾರರಿಗೆ (ಪತ್ರಿಕೆ, ಟಿವಿ, ರೇಡಿಯೋಗಳಿಗೆ ಹೋಲಿಸಿದರೆ) ಒಂದೇ ಕಡೆ ಬಹು-ಮಾಧ್ಯಮಗಳ ಜತೆಗೆ ಕೆಲವು ಅನುಕೂಲಗಳನ್ನು (ನಿರ್ದಿಷ್ಟ ಜನವಿಭಾಗಕ್ಕೆ ಟಾರ್ಗೆಟ್ ಮಾಡುವ, ತಕ್ಷಣದ ಸ್ಪಂದನೆ ಮಾಡುವ, ಜನರ ಪ್ರತಿಕ್ರಿಯೆ ಅಳೆಯುವ ಇತ್ಯಾದಿ) ಕೊಡುತ್ತದೆ. ಆದ್ದರಿಂದ ಅವರು ವೆಬ್ ಮಾಧ್ಯಮದತ್ತ ಹೊರಳುತ್ತಿದ್ದಾರೆ. ಕೊವಿಡ್ ಮಾಧ್ಯಮಗಳ ಬಳಕೆಯಲ್ಲಿ ತಂದ ಬದಲಾವಣೆಗಳು ಈ ಪ್ರಕ್ರಿಯೆಯನ್ನು ಇನ್ನಷ್ಟು ತೀವ್ರಗೊಳಿಸಿವೆ.

ಪ್ರಿಂಟನ್ನು ಹಿಂದಕ್ಕೆ ಹಾಕಿದ ಡಿಜಿಟಲ್

ಇ.ವೈ-ಫಿಕ್ಕಿ (EY-FICCI)2020 ರ ಮಾಧ್ಯಮ-ಮನೋರಂಜನಾ ಉದ್ಯಮ ವರದಿಯ ಅಂಕಿಅಂಶಗಳ ಪ್ರಕಾರ ಟಿವಿ, ಪತ್ರಿಕೆಗಳು ರೇಡಿಯೋ, ಡಿಜಿಟಲ್, ಫಿಲಂ ಸಂಗೀತ ಮತ್ತಿತರ ಸಂಬಂಧಿತ ಮಾಧ್ಯಮ-ಮನೋರಂಜನಾ ಉದ್ಯಮಗಳ ಒಟ್ಟು ವಹಿವಾಟು 2020ರಲ್ಲಿ 1.38 ಲಕ್ಷ ಕೋಟಿ ರೂ. ಗಳಾಗಿತ್ತು. 2020ರಲ್ಲಿ ಡಿಜಿಟಲ್ ಬಿಟ್ಟರೆ ಇತರ ಎಲ್ಲಾ ಮಾಧ್ಯಮಗಳ ವಹಿವಾಟು ಕುಗ್ಗಿತು. **ಮೊದಲ ಬಾರಿಗೆ ಡಿಜಿಟಲ್ ನ ವಹಿವಾಟು ಪ್ರಿಂಟ್ ನ್ನು ಹಿಂದಕ್ಕೆ ಹಾಕಿ ಟಿವಿ ನಂತರ ಎರಡನೆ ಸ್ಥಾನ ಪಡೆಯಿತು.** (ಒಟ್ಟು ವಹಿವಾಟಿನಲ್ಲಿ ಮಾಧ್ಯಮದ ಭಾಗ ಪ್ರತ್ಯೇಕಿಸುವುದು ಕಷ್ಟವಾದರೂ ಅದು 1.12 ಲಕ್ಷ ಕೋಟಿ ರೂ. ಎಂದು ಅಂದಾಜು) ಇದರಲ್ಲಿ ಜಾಹೀರಾತಿನಿಂದ ಬಂದ ಆದಾಯ 62,300 ಕೋಟಿ ರೂ.ಗಳಾಗಿತ್ತು. ಒಟ್ಟು ವಹಿವಾಟು 2019ರಲ್ಲಿ 1.82 ಲಕ್ಷ ಕೋಟಿ ರೂ. (ಇದರಲ್ಲಿ ಮಾಧ್ಯಮದ ಭಾಗ ಪ್ರತ್ಯೇಕಿಸುವುದು ಕಷ್ಟವಾದರೂ ಅದು 1.33 ಲಕ್ಷ ಕೋಟಿ ರೂ. ಎಂದು ಅಂದಾಜು) ಇದ್ದು ಕೊವಿಡ್ ಪರಿಣಾಮವಾಗಿ 2020ರಲ್ಲಿ ಗಮನಾರ್ಹವಾಗಿ ಕುಸಿದಿದೆ. ಅದು 2016ರಲ್ಲಿ 91,430 ಕೋಟಿ ರೂ. ಆಗಿತ್ತು. 2016ರಲ್ಲಿ ಜಾಹೀರಾತಿನಿಂದ ಬಂದ ಆದಾಯ 42,520 ಕೋಟಿ ರೂ.ಆಗಿತ್ತು. 2022ರಲ್ಲಷ್ಟೇ ಉದ್ಯಮ 2019ರ ಸ್ಥಿತಿಗೆ ಮರಳಿ ಆ ಮೇಲೆ ಮತ್ತೆ ಉತ್ತಮ ಬೆಳವಣಿಗೆ ಸಾಗುತ್ತದೆ ಎಂದು ವರದಿ ಹೇಳುತ್ತದೆ. 2023 ರ ವರೆಗೆ ಒಟ್ಟು ಉದ್ಯಮ 17% ಸರಾಸರಿ ವಾರ್ಷಿಕ ದರದಲ್ಲಿ ಏರಲಿದೆ. ಡಿಜಿಟಲ್ ಅತ್ಯಂತ ವೇಗವಾಗಿ (22%), ಟಿವಿ (7%), ಪ್ರಿಂಟ್ (11%), ರೇಡಿಯೊ (24%) ಸರಾಸರಿ ವಾರ್ಷಿಕ ದರದಲ್ಲಿ ಏರಲಿವೆ ಎಂದು ವರದಿ ಹೇಳುತ್ತದೆ. ರಾಜ್ಯವಾರು ಭಾಷಾವಾರು ಮಾಧ್ಯಮ ಉದ್ಯಮಗಳ ವಹಿವಾಟು, ಜಾಹೀರಾತಿನ ಅಂಕಿ ಅಂಶಗಳು ಲಭ್ಯವಿಲ್ಲ.

ಜಾಹೀರಾತು ಡಿಜಿಟಲ್ ನತ್ತ

ಇ.ವೈ-ಫಿಕ್ಕಿ (EY-FICCI)ರ ವರದಿ ಪ್ರಕಾರವೇ ಕಳೆದ 5 ವರ್ಷಗಳಲ್ಲಿ ಜಾಹೀರಾತುದಾರರು ವಿವಿಧ ಮಾಧ್ಯಮಗಳಲ್ಲಿ ಯಾವುದನ್ನು ಎಷ್ಟರ ಮಟ್ಟಿಗೆ ಆರಿಸಿಕೊಂಡರು ಎಂಬುದನ್ನು ನೋಡಿದರೆ ತಿಳಿಯುತ್ತದೆ. ಕೆಳಗಿನ ಕೋಷ್ಟಕದಲ್ಲಿ ಜಾಹೀರಾತುಗಳಲ್ಲಿ ಪಾಲು ಹಾಗೂ ಹೆಚ್ಚಳದ ದರ ಎರಡೂ ಗಮನಿಸಿದರೆ ಡಿಜಿಟಲ್ ನತ್ತ ದೊಡ್ಡ ರೀತಿಯಲ್ಲಿ ಜಾಹೀರಾತುದಾರರು ಹೊರಳುತ್ತಿದ್ದಾರೆ ಎಂಬುದು ಸ್ಪಷ್ಟ. ಟಿವಿ ಜಾಹೀರಾತು ಸ್ಥಗಿತಗೊಂಡಿದ್ದರೆ, ಪತ್ರಿಕೆಗಳು ದೊಡ್ಡ ಪ್ರಮಾಣದಲ್ಲಿ ಕಳೆದುಕೊಳ್ಳುತ್ತಿವೆ.

ಇವೆಲ್ಲವುಗಳ ಹಿನ್ನೆಲೆಯಲ್ಲಿ, ಪಕ್ಷ ಮತ್ತು ಎಡ ಪ್ರಜಾಸತ್ತಾತ್ಮಕ ಪ್ರಗತಿಪರ ಶಕ್ತಿಗಳು ಮುಂದಿನ ವರ್ಷಗಳ ಯೋಜನೆಯನ್ನು ಮಾಡಬೇಕಾಗಿದೆ. ●

ವರ್ಷದ ಒಟ್ಟು ಜಾಹೀರಾತುಗಳಲ್ಲಿ ವಿವಿಧ ಮಾಧ್ಯಮಗಳ ಪಾಲು

ವರ್ಷ	ಟಿವಿ	ಪತ್ರಿಕೆಗಳು	ರೇಡಿಯೊ	ಡಿಜಿಟಲ್	ಹೊರಾಂಗಣ
2016	38.0 %	38.0 %	4.4 %	14.7 %	4.9 %
2019	40 %	26 %	5 %	24 %	5 %
2020	42 %	20 %	3 %	32 %	3 %
2021(ಅಂದಾಜು)	41 %	20 %	3 %	32 %	4 %

ಹರಿದ್ವಾರ ಸಭೆಯಲ್ಲಿ ಸಂವಿಧಾನ ಮತ್ತು ಕಾನೂನಿನ ಉಲ್ಲಂಘನೆ ಬಲವಾದ ಕ್ರಮಕ್ಕೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಹರಿದ್ವಾರದಲ್ಲಿ 'ಧರ್ಮ ಸಂಸದ್' ಎಂದು ನಡೆದ ಸಮಾರಂಭದಲ್ಲಿ ಮುಸ್ಲಿಮರ ವಿರುದ್ಧದ ತೀವ್ರ ದ್ವೇಷದ ಭಾಷಣಗಳು ಮತ್ತು ಹಿಂಸಾಚಾರಕ್ಕೆ ಪ್ರಚೋದನೆ ಸಂವಿಧಾನ ಮತ್ತು ಕಾನೂನು ಚೌಕಟ್ಟಿನ ಘೋರ ಉಲ್ಲಂಘನೆಯಾಗಿವೆ, ಆ ಭಾಷಣಗಳನ್ನು ಮಾಡಿದವರನ್ನು ತಕ್ಷಣವೇ ಬಂಧಿಸಬೇಕು ಎಂದು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

ಈ ಭಾಷಣಗಳು ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ವಿರುದ್ಧವೂ ಸೇರಿದಂತೆ ಭಯೋತ್ಪಾದಕ ಕೃತ್ಯಗಳನ್ನು ಬೆಂಬಲಿಸುವಂತಿವೆ. ಬಿಜೆಪಿ ನೇತೃತ್ವದ ಸರ್ಕಾರಗಳ ಅಡಿಯಲ್ಲಿ ಅಂತಹವರು ಪಡೆದಿರುವ ಅಭಯಹಸ್ತದಿಂದಾಗಿ ಇದು ಮೂರು ದಿನಗಳವರೆಗೆ ಅಡೆತಡೆಯಿಲ್ಲದೆ ಮುಂದುವರಿಯಲು ಸಾಧ್ಯವಾಯಿತು ನಾಚಿಕೆಗೇಡಿನ ಸಂಗತಿಯೆಂದರೆ, ವಿಳಂಬ ಮಾಡಿ ಹಾಕಿದ ಎಫ್‌ಐಆರ್ ಕೂಡ ಕಾನೂನಿನ ಅಪಹಾಸ್ಯವಾಗಿದೆ. ಏಕೆಂದರೆ ಇದು ಅಲ್ಲಿಯ ಕಲಾಪಗಳ ವೀಡಿಯೊಗಳು ತಪ್ಪಿತಸ್ಥರ ಗುರುತನ್ನು ಸ್ಪಷ್ಟವಾಗಿ ತೋರಿಸುತ್ತಿದ್ದರೂ, ಸಂವಿಧಾನದ ಮೇಲಿನ ಈ ದಾಳಿಯ ಪ್ರಮುಖ ಅಪರಾಧಿಗಳನ್ನು ಹೆಸರಿಸುವುದಿಲ್ಲ. ಎಫ್‌ಐಆರ್‌ನಲ್ಲಿ ಅಂತವರ ಹೆಸರುಗಳನ್ನು ಸೇರಿಸಬೇಕು ಎಂದು ಆಗ್ರಹಿಸಿರುವ ಪೊಲಿಟ್ ಬ್ಯೂರೋ, ದ್ವೇಷದ ಭಾಷಣವನ್ನು ಮಾತ್ರವಲ್ಲದೆ ಹಿಂಸಾಚಾರಕ್ಕೆ ಪ್ರಚೋದನೆಯನ್ನು ನೀಡಿದ ಅವರನ್ನು ತಕ್ಷಣವೇ ಬಂಧಿಸಬೇಕು ಎಂದು ಕರೆ ನೀಡಿದೆ.

ನ್ಯೂಇಂಡಿಯಾನ್ಯೂಸ್



ವ್ಯಂಗ್ಯಚಿತ್ರ ಕೃಪೆ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಉತ್ತರಪ್ರದೇಶಕ್ಕೆ 1 ಲಕ್ಷ ಕೋಟಿ ರೂ.ಗಳ ಭರ್ಜರಿ ಪ್ರಾಜೆಕ್ಟುಗಳು, ಹೆದ್ದಾರಿಗಳು....

2 ಎಕ್ಸ್‌ಪ್ರೆಸ್ ಹೆದ್ದಾರಿಗಳು, 2 ಅಂತರ‍್ರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೇ 70ಸಾವಿರ ಕೋಟಿ ರೂ.

ಉತ್ತರಪ್ರದೇಶದಲ್ಲಿ ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿರುವಂತೆ ದೇಶದ ಪ್ರಧಾನಿಗಳು ದಿಲ್ಲಿಗಿಂತ ಹೆಚ್ಚಾಗಿ ಆ ರಾಜ್ಯದಲ್ಲೇ ಕಾಣಿಸಿಕೊಳ್ಳುತ್ತಿದ್ದಾರೆ ಎಂದು ಮಾಧ್ಯಮ ವರದಿಗಳು ಹೇಳುತ್ತಿವೆ. ವೈಯಕ್ತಿಕ ಪ್ರಕಟಣೆಗಳು, ಉದ್ಘಾಟನೆಗಳು, ಶಿಲಾನ್ಯಾಸಗಳು, ಡಿಜಿಟಲ್ ವರ್ಗಾವಣೆಗಳು, ಜತೆಜತೆಗೆ ದೇವಸ್ಥಾನಗಳಿಗೆ ಭೇಟಿಗಳು ಮತ್ತು ವಿಪಕ್ಷಗಳ ಮೇಲೆ ವಾಗ್ದಾಳಿಗಳು ಭರ್ಜರಿಯಾಗಿ ನಡೆಯುತ್ತಿವೆ.

ಅವರ ಸ್ವಂತ ಚುನಾವಣಾ ಕ್ಷೇತ್ರವೂ ಈ ರಾಜ್ಯದಲ್ಲೇ ಇದ್ದು, ಅಲ್ಲಿ, ಅಂದರೆ ವಾರಣಾಸಿಯಲ್ಲಿ ಡಿಸೆಂಬರ್ 23ರಂದು ರೂ.2095 ಕೋಟಿ ರೂ.ಗಳ ಪ್ರಾಜೆಕ್ಟ್‌ಗಳ ಸಾರಾಸಗಟು ಉದ್ಘಾಟನೆ ನಡೆಸಿದರು. ಇದಕ್ಕೆ ಮೊದಲು ಕಾಶೀ ವಿಶ್ವನಾಥ ಧಾಮ ಉದ್ಘಾಟನೆಯ ವೇಳೆಯಲ್ಲಿ 55 ಹೆಚ್‌ಡಿ ಕ್ಯಾಮರಾಗಳು, ಏಳು ಅಪ್‌ಲಿಂಕ್ ಸ್ಯಾಟಲೈಟ್ ವ್ಯಾನ್‌ಗಳು, ಒಂದು ಡ್ರೋನ್, ಒಂದು ರೇಡಿಯೋ ಫ್ರೀಕ್ವೆನ್ಸಿ ಕ್ಯಾಮರಾ ಇತ್ಯಾದಿ ಇವೆಲ್ಲವನ್ನೂ ರಾಜ್ಯದ 24 ಕೋಟಿ ಜನಗಳಿಗೆ ತಲುಪಿಸುತ್ತಿವೆಯಂತೆ.

ಇದುವರೆಗೆ ಒಟ್ಟು ರೂ.1,01,695 ಕೋಟಿ ರೂ.ಗಳ ಪ್ರಾಜೆಕ್ಟ್‌ಗಳ ಸುರಿಮಳೆ ನಡೆದಿದೆ. ಕಳೆದ 7 ವರ್ಷಗಳಲ್ಲಿ ಯಾವುದೇ ಚುನಾವಣೆ ಸಮೀಪಿಸುತ್ತಿದ್ದಂತೆ ಇಂತಹ ಸುರಿಮಳೆಗಳು ಈಗ ಹಿಂದೆಂದಿಗಿಂತಲೂ ಹೆಚ್ಚು ಸಾಮಾನ್ಯವಾಗಿದ್ದರೂ, 1ಲಕ್ಷ ಕೋಟಿ ರೂ.ಗಳನ್ನು ದಾಟಿರುವುದು ಹೊಸ ದಾಖಲೆ ಎಂದು ಕೆಲವು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

ಫೆಬ್ರುವರಿ ತಿಂಗಳಲ್ಲಿ ಚುನಾವಣೆಯ ಸಂಭವವಿದ್ದು, ಜನವರಿ ಮೊದಲ ವಾರದಲ್ಲಿ ಚುನಾವಣಾ ಪ್ರಕ್ರಿಯೆ ಆರಂಬವಾಗುವ ಸಾಧ್ಯತೆ ಇರುವುದರಿಂದ ಮಾದರಿ ಚುನಾವಣಾ ನೀರಿ ಸಂಹಿತೆ ಜಾರಿಯಾಗುವ ಮೊದಲೇ 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಈಡೇರಿಸುವ ಧಾವಂತ.

ಈ 1 ಲಕ್ಷ ಕೋಟಿ ರೂ.ಗಳ ಈ ಧಾವಂತದಲ್ಲಿ 70 ಸಾವಿರ ಕೋಟಿ ರೂ.ಗಳು ಎರಡು ಅಂತರ‍್ರಾಷ್ಟ್ರೀಯ ವಿಮಾನ ನಿಲ್ದಾಣಗಳು ಮತ್ತು ಎರಡು ಎಕ್ಸ್‌ಪ್ರೆಸ್ ಹೆದ್ದಾರಿಗಳಿಗೇ ಖರ್ಚಾಗುತ್ತಿದೆಯಂತೆ!



ಪ್ರಾಜೆಕ್ಟ್‌ಗಳು, ಧಾಮಗಳು, ರಸ್ತೆಗಳು, ಕಲ್ಯಾಣ ಯೋಜನೆಗಳು.......
"ಅವರು ನಮ್ಮ ಪ್ರಧಾನಿ"
ವ್ಯಂಗ್ಯಚಿತ್ರ ಕೃಪೆ: ಸುಭಾನಿ, ಡೆಕ್ಕನ್ ಕ್ರಾನಿಕಲ್

ಬಡತನ, ಹಸಿವು, ಉದ್ಯೋಗ ನಷ್ಟದ ಮೇಲೆ ದಾಖಲೆ ಹಣದುಬ್ಬರ

ನಗರ ನಿರುದ್ಯೋಗ ಡಿಸೆಂಬರ್ 12 ರ ವಾರಾಂತ್ಯದಲ್ಲಿ ಎರಡಂಕಿಗೆ ಏರಿದೆ. ಅಂದರೆ 10.09%ಕ್ಕೆ ಏರಿದೆ. ಇದು ಕಳೆದ 17 ವಾರಗಳಲ್ಲೇ ಅತಿ ಹೆಚ್ಚಿನ ಮಟ್ಟ. ಗ್ರಾಮೀಣ ನಿರುದ್ಯೋಗ 7.42%, ಒಟ್ಟಾರೆ ನಿರುದ್ಯೋಗ ದರ 8.53%.. ಇವೆರಡೂ ಕೂಡ ಕಳೆದ 9 ವಾರಗಳಲ್ಲೆ ಅತೀ ಹೆಚ್ಚಿನ ಮಟ್ಟ ಎಂದು ಸಿಎಂಐಇ ಹೇಳಿದೆ

ಭಾರತದ ಸಗಟು ಹಣದುಬ್ಬರ ದರ ನವಂಬರ್‌ನಲ್ಲಿ 14.2%ಕ್ಕೆ ನೆಗೆದಿದೆ. ಇದು ಕಳೆದ 30 ವರ್ಷಗಳಲ್ಲೇ ಅತಿ ವೇಗದ ಏರಿಕೆ ಎಂದು ಬ್ಲೂಮ್ ಬರ್ಗ್ ಏಷ್ಯಾ ಡಿಸೆಂಬರ್ 14ರಂದು ವರದಿ ಮಾಡಿದೆ. ಇದು ಚಿಲ್ಲರೆ ಹಣದುಬ್ಬರ ದರದ ಮೇಲೂ ಪ್ರಭಾವ ಬೀರಬಹುದು, ಮತ್ತು ಬಡ್ಡಿದರವನ್ನು ಕೆಳಮಟ್ಟದಲ್ಲಿಡುವುದು ರಿಝರ್ವ್ ಬ್ಯಾಂಕಿಗೆ ಸಾಧ್ಯವಾಗಲಿಕ್ಕಿಲ್ಲ ಎಂದೂ ಅದು ಹೇಳಿದೆ.

ಇದರ ಮರುದಿನವೇ ನವಂಬರ್ ಒಂದು ತಿಂಗಳಲ್ಲೇ 68ಲಕ್ಷ ಮಂದಿ ಉದ್ಯೋಗ ಕಳಕೊಂಡಿದ್ದಾರೆ ಎಂಬ ಇನ್ನೊಂದು ಸುದ್ದಿ ಬಂದಿದೆ.

ಈ ಸುದ್ದಿಗಳ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ಬಡತನ. ಹಸಿವು ಮತ್ತು ಉದ್ಯೋಗ ನಷ್ಟದ ಮೇಲೆ ಈ ದಾಖಲೆ ಹಣದುಬ್ಬರ ಜನಗಳ ಜೀವನವನ್ನು ಹಾಳುಗೆಡವುತ್ತಿದೆ ಎನ್ನುತ್ತ ಮೋದಿ ಸರಕಾರ ಒಂದೋ ಇದರಲ್ಲಿ ಶಾಮೀಲಾಗಿದೆ ಇಲ್ಲವೇ ಪೂರ್ಣವಾಗಿ ಅಸಮರ್ಥ ಸರಕಾರವಾಗಿದೆ ಅಥವ ಎರಡೂ ಆಗಿದೆ ಎಂದು ಹೇಳಿದ್ದಾರೆ. ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವಲ್ಲಿ ನಿರತವಾಗಿರುವ ಮೋದಿಯವರಿಗೆ ಮಾನವ ಜೀವಗಳ ಬಗ್ಗೆ ಯಾವುದೇ ಚಿಂತೆ ಇಲ್ಲ ಎಂದು ಅವರು ಖೇದ ವ್ಯಕ್ತ ಪಡಿಸಿದ್ದಾರೆ.


ಈ ನಡುವೆ ಚಳಿಗಾಲದ ಅಧಿವೇಶನದಲ್ಲಿ ವೋಟರ್ ಐಡಿಯನ್ನು ಆಧಾರ್ ನೊಂದಿಗೆ ಜೋಡಿಸುವ ತಿದ್ದುಪಡಿಯನ್ನು ಯಾವುದೇ ಚರ್ಚೆ/ಪರಿಶೀಲನೆಗೆ ಅವಕಾಶ ಕೊಡದೇ ಪಾಸು ಮಾಡಿಸಿಕೊಳ್ಳಲಾಗಿದೆ.

ಅದೇ ರೀತಿಯಲ್ಲಿ **ಹಸಿವಿನ ಸೂಚ್ಯಂಕವನ್ನು ಮತ್ತು ನಿರುದ್ಯೋಗ ದತ್ತಾಂಶವನ್ನು ವೋಟರ್ ಐಡಿ ಮತ್ತು ಆಧಾರ್‌ನೊಂದಿಗೆ ಜೋಡಿಸಬಾರದೇಕೆ** ಎಂದು ಕೇಳುತ್ತಿದ್ದಾರೆ ಈ ವ್ಯಂಗ್ಯಚಿತ್ರಕಾರರು



ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

ಭಾರತದ ರೂಪಾಯಿಯ ಮೌಲ್ಯ ಕಳೆದ ತ್ರೈಮಾಸಿಕದಲ್ಲಿ 1.9% ದಷ್ಟು ಇಳಿದಿದ್ದು, ಈ ಹಣಕಾಸು ವರ್ಷದಲ್ಲಿ ಒಟ್ಟು ಕುಸಿತ 4% ಆಗಬಹುದು ಎಂದು ಲೆಕ್ಕ ಹಾಕಲಾಗಿದೆ. ಕಳೆದ ನಾಲ್ಕು ವರ್ಷಗಳಿಂದ ರೂಪಾಯಿ ಮೌಲ್ಯ ಸತತವಾಗಿ ಇಳಿಯುತ್ತಿದ್ದು ಇದೀಗ ಏಷ್ಯಾದಲ್ಲೇ ಅತ್ಯಂತ ಕೆಟ್ಟ ಪ್ರದರ್ಶನ ನೀಡುತ್ತಿರುವ ಕರೆನ್ಸಿಯಾಗಿದೆ ಎಂದು ಹಣಕಾಸು ಪತ್ರಿಕೆಗಳು ವರದಿ ಮಾಡಿವೆ. ಇದನ್ನು ಸರಿದೂಗಿಸಲು ಭಾರತದ ರಫ್ತು ಹೆಚ್ಚಬೇಕಾಗಿದೆ. ಅದಕ್ಕೆ ಆಳುವ ಪಕ್ಷದ ಬಳಿ ಇರುವ ಪರಿಹಾರ ಎಂದರೆ ಅವರು ಪುಷ್ಕಳವಾಗಿ ಉತ್ಪಾದಿಸುತ್ತಿರುವ ಕುತರ್ಕಗಳನ್ನು, ಹುಸಿ ತರ್ಕಗಳನ್ನು ರಫ್ತು ಮಾಡುವುದು!



ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್


ಜನರಿಂದ 8 ಲಕ್ಷ ಕೋಟಿ ಲೂಟಿ ಬಂಟ ಬಂಡವಳಿಗರಿಗೆ 11 ಲಕ್ಷ ಕೋಟಿ

ಪೆಟ್ರೋಲ್ ಮೇಲೆ ಅಬಕಾರಿ ಸುಂಕ ಅಕ್ಟೋಬರ್ 5, 2018ರಲ್ಲಿ ಲೀಟರಿಗೆ ರೂ.19.48 ಇತ್ತು, ನವಂಬರ್ 4, 2021ರಂದು ಅದು ರೂ. 27.90ಕ್ಕೆ ಏರಿತು. ಅದೇ ರೀತಿಯಲ್ಲಿ ಡೀಸೆಲ್ ಮೇಲಿನ ಸುಂಕ ರೂ.15.33 ರಿಂದ ರೂ.21.80ಕ್ಕೇರಿತು. ಅಂದರೆ ಸುಮಾರು ಒಂದೂವರೆ ಪಟ್ಟಾಯಿತು. ಈ ಮೂಲಕ ಪೆಟ್ರೋಲ್ ಮತ್ತು ಡೀಸೆಲ್‌ಗಳ ಮೇಲೆ ತೆರಿಗೆಗಳಿಂದ ಕೇಂದ್ರ ಸರಕಾರ ಕಳೆದ ಮೂರು ವರ್ಷಗಳಲ್ಲಿ 8.02 ಲಕ್ಷ ಕೋಟಿ ರೂ.ಗಳನ್ನು ಸಂಗ್ರಹಿಸಿದೆ ಎಂದು ಹಣಕಾಸು ಮಂತ್ರಿಗಳು ಡಿಸೆಂಬರ್ 14ರಂದು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಸಂಸತ್ತಿನಲ್ಲಿ ಹೇಳಿದರು. ಇದರಲ್ಲಿ 3.71ಲಕ್ಷ ಕೋಟಿ ರೂ. 2020–21ರ ಹಣಕಾಸು ವರ್ಷದಲ್ಲೇ ಸಂಗ್ರಹ ಮಾಡಲಾಗಿದೆಯಂತೆ.

ಬ್ಯಾಂಕ್‌ಗಳು ಹಣಕಾಸು ವರ್ಷ 2020–21ರಲ್ಲಿ ರೂ.2.02 ಲಕ್ಷ ಕೋಟಿ ಮೊತ್ತದ ಸುಸ್ತಿ ಸಾಲಗಳನ್ನು ರೈಟ್ ಆಫ್ ಅಂದರೆ ಒಂದರ್ಥದಲ್ಲಿ ಮನ್ನಾ ಮಾಡಿದೆ ಎಂದು ಇದಕ್ಕೆ ಕೆಲವು ದಿನಗಳ ಮೊದಲು ವರದಿ ಅಗಿತ್ತು. ಮೋದಿ ಸರಕಾರ ಬಂದಂದಿನಿಂದ ಕಳೆದ 7 ವರ್ಷಗಳಲ್ಲಿ ದೊಡ್ಡ ಕಾರ್ಪೊರೇಟ್‌ಗಳ ಒಟ್ಟು 10.7 ಲಕ್ಷ ಕೋಟಿ ರೂ.ಗಳನ್ನು ಈ ರೀತಿ ಮನ್ನಾ ಮಾಡಲಾಗಿದೆ ಎಂದೂ ಈ ವರದಿ ಹೇಳಿತ್ತು.

ಅಂದರೆ ಜನಗಳಿಂದ 8 ಲಕ್ಷ ಕೋಟಿ ರೂ. ಗಳ ಲೂಟಿ ಮತ್ತು ಬಂಟ ಬಂಡವಾಳಶಾಹಿಗಳಿಗೆ ಸುಮಾರು 11 ಲಕ್ಷ ಕೋಟಿ ರೂ.ಗಳ ಸಾಲಮನ್ನಾ!

ಅಮೆರಿಕಾದ ಹಣದುಬ್ಬರದ ಪರಿಣಾಮವೂ ಮತ್ತು ಭಾರತದ ಆರ್ಥಿಕ ಚೇತರಿಕೆಯ ಬಡಾಯಿಯೂ



ಅಮೆರಿಕದ ಹಣದುಬ್ಬರ ದರದ ನವೆಂಬರ್ ಅಂಕಿ-ಅಂಶಗಳನ್ನು ಘೋಷಿಸಿದ ಕೂಡಲೇ, ಬಡ್ಡಿದರಗಳು ಅಲ್ಲಿ ಏರುವ ಮುನ್ನವೇ, ಮತ್ತು ಭಾರತದ ಚಾಲ್ತಿ ಖಾತೆಯ ಪ್ರಸ್ತುತ ಕೊರತೆಗಳಿಗೆ ಹಣಕಾಸು ಒದಗಿಸಿಕೊಳ್ಳುವಲ್ಲಿ ಯಾವುದೇ ತೊಂದರೆ ಉದ್ಭವವಾಗುವ ಮುನ್ನವೇ, ಡಾಲರ್‌ಗೆ ಎದುರಾಗಿ ರೂಪಾಯಿ 16 ಪೈಸೆಗಳಷ್ಟು ಕುಸಿದಿದೆ. ಅದರಿಂದಾಗಿ ಹಣದುಬ್ಬರ ಮತ್ತಷ್ಟು ಉಲ್ಬಣಗೊಳ್ಳುತ್ತದೆ. ಈ ಕಾರಣಗಳಿಂದಾಗಿ, ಭಾರತದ ಅರ್ಥವ್ಯವಸ್ಥೆಯ ಚೇತರಿಕೆಯು ಕಟ್ಟುಮಸ್ತಾಗಿದೆ ಎಂಬುದಾಗಿ ಬಡಾಯಿ ಕೊಚ್ಚಿಕೊಂಡ ಹಣಕಾಸು ಸಚಿವಾಲಯದ ಹೇಳಿಕೆಯು ಸಂಪೂರ್ಣವಾಗಿ ಆಧಾರ-ರಹಿತವಾಗಿದೆ: ನಿಜ ಹೇಳಬೇಕೆಂದರೆ, ನವಉದಾರವಾದದ ಮತಾಂಧ ಅನುಯಾಯಿಯಾಗಿರುವ ಮೋದಿ ಸರ್ಕಾರವು ಮುಂದಿನ ದಿನಗಳಲ್ಲಿ ಭಾರತದ ಜನರಿಗೆ ಮತ್ತಷ್ಟು ಆರ್ಥಿಕ ಸಂಕಷ್ಟಗಳ ಹೊರೆಯನ್ನು ಹೇರಲಿದೆ.

ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ಕೊರೊನಾ ನಂತರದಲ್ಲಿ ಭಾರತದ ಅರ್ಥವ್ಯವಸ್ಥೆಯು ಸಾರವತ್ತಾಗಿ ಚೇತರಿಕೆ ಕಟ್ಟುಮಸ್ತಾಗಿದೆ ಎಂಬ ಒಂದು ಟೊಳ್ಳು ಹೇಳಿಕೆಯನ್ನು ಹಣಕಾಸು ಸಚಿವಾಲಯವು ನೀಡಿದ ಡಿಸೆಂಬರ್ 11ರಂದೇ ಪತ್ರಿಕೆಗಳು ಅಮೆರಿಕಾದಲ್ಲಿ ಹಣದುಬ್ಬರವು ತೀವ್ರವಾಗಿ ಏರುತ್ತಿದೆ ಎಂಬ ಸುದ್ದಿಯನ್ನೂ ಪ್ರಕಟಿಸಿದ್ದವು. ನವೆಂಬರ್ 2021ರಲ್ಲಿ ಅಮೆರಿಕಾದ ಹಣದುಬ್ಬರ ದರವು ಹಿಂದಿನ ವರ್ಷದ ನವೆಂಬರ್‌ಗೆ ಹೋಲಿಸಿದರೆ 6.8% ಹೆಚ್ಚಳವಾಗಿತ್ತು. ಈ ಹೆಚ್ಚಳವು ಕಳೆದ 40 ವರ್ಷಗಳಲ್ಲೇ ಅತಿ ಹೆಚ್ಚಿನದು. ಅಮೆರಿಕಾದಲ್ಲಿ ಪೆಟ್ರೋಲ್ ಬೆಲೆ ನವೆಂಬರ್ 2021ರಲ್ಲಿ 58% ಏರಿದ ಕಾರಣದಿಂದಾಗಿ ಹಣದುಬ್ಬರವು ಈ ಪಾಟಿ ಏರಿಕೆಯಾಗಿದೆ. 1980ರ ನಂತರ ಯಾವುದೇ ಒಂದು ತಿಂಗಳಿಗೆ ಹೋಲಿಸಿದರೆ, ಈ ಏರಿಕೆಯೇ ಅತ್ಯಧಿಕ. ಆದರೆ, ನವ-ಉದಾರವಾದಿ ಆಳ್ವಿಕೆಗೆ ಸಿಕ್ಕಿಹಾಕಿಕೊಂಡಿರುವ ವರೆಗೂ ಭಾರತದ ಅರ್ಥವ್ಯವಸ್ಥೆಯ ಚೇತರಿಕೆಯು ಭವಿಷ್ಯದಲ್ಲಿ ಮತ್ತಷ್ಟು ಹಾನಿಗೊಳಗಾಗುತ್ತದೆ ಎಂಬ ಅರಿವು ಹೊಂದಿರಬೇಕಾದ ಭಾರತದ ಹಣಕಾಸು ಸಚಿವಾಲಯವು ಅಮೆರಿಕಾದ ಈ ಪರಿಯ ಹಣದುಬ್ಬರವನ್ನು ನಿರ್ಲಕ್ಷಿಸಿ, ತನ್ನ ಚೇತರಿಕೆಯ ಬಗ್ಗೆ ಅದ್ಭುತವಾದ ಕಲ್ಪನೆಯ ಹೇಳಿಕೆಗಳನ್ನು ನೀಡುತ್ತದೆ.

ಕೊರೊನಾ ಸಂದರ್ಭದಲ್ಲಿ ಉಂಟಾದ ಬೃಹತ್ ನಿರುದ್ಯೋಗದಿಂದ ಇನ್ನೂ ಚೇತರಿಸಿಕೊಳ್ಳಲಾಗದ ಈ ಸಮಯದಲ್ಲಿ ತೀವ್ರಗೊಳ್ಳುತ್ತಿರುವ ಅಮೆರಿಕಾದ ಹಣದುಬ್ಬರವು ವಿಚಿತ್ರವಾಗಿ ಕಾಣಬಹುದು. ಕೊರೊನಾ ಸಮಯದಲ್ಲಿ, 21 ಮಿಲಿಯನ್ ಅಮೆರಿಕಾದ ಜನರು ತಮ್ಮ ಉದ್ಯೋಗಗಳನ್ನು ಕಳೆದುಕೊಂಡಿದ್ದರು ಮತ್ತು ಅವರಲ್ಲಿ ಹೆಚ್ಚಿನವರು ಇನ್ನೂ ನಿರುದ್ಯೋಗಿಗಳಾಗಿ ಉಳಿದಿದ್ದಾರೆ ಎಂಬುದನ್ನು ನೆನಪಿಸಿಕೊಳ್ಳಬಹುದು. ಇದ್ದಕ್ಕಿದ್ದಂತೆ ಉಂಟಾದ ಪೂರೈಕೆ-ವ್ಯತ್ಯಯದಿಂದಾಗಿ (supply-constrained) ಅಲ್ಲಿನ ಹಣದುಬ್ಬರ ತೀವ್ರಗೊಂಡಿದೆ ಎನ್ನುವಂತಿಲ್ಲ. ಬದಲಿಗೆ, ಕೆಲವು ತಕ್ಷಣದ ಪೂರೈಕೆಯ ಕಡೆಯಿಂದ ಆಗಿರುವ ಅಡಚಣೆಗಳು ತಲೆ ಎತ್ತಿರುವುದು, ಇದನ್ನು ಒಂದೆಡೆ ಸಟ್ಟಾಕೋರತನ , ಇನ್ನೊಂದೆಡೆಯಲ್ಲಿ ವೆಚ್ಚ ಹೆಚ್ಚಳ ಇವೆಲ್ಲವೂ ಸೇರಿದ ನಿರ್ದಿಷ್ಟ ವಿದ್ಯಮಾನದಿಂದಾಗಿ ಹಣದುಬ್ಬರ ತೀವ್ರಗೊಂಡಿದೆ. ಈ ಅಡಚಣೆಗಳನ್ನು ನಿವಾರಿಸುವಲ್ಲಿ ಸಮಯ ಹಿಡಿಯುತ್ತದೆ. ಹಾಗಾಗಿ, ಈ ಹಣದುಬ್ಬರವು 2022ರ ಮಧ್ಯದವರೆಗೂ ಮುಂದುವರಿಯಬಹುದು. ಆದರೆ, ಅಮೆರಿಕಾದಲ್ಲಿ ಹಣದುಬ್ಬರ ಗೋಚರಿಸಿರುವ ಅಂಶವು, ಭಾರತದ ಆರ್ಥಿಕ ಚೇತರಿಕೆಯ ಮೇಲೆ ಮತ್ತಷ್ಟು ಕರಿ ನೆರಳು ಬೀರಲಿದೆ. ಜನರ ನಿರಂತರ ಕುಗ್ಗಿದ ಮಟ್ಟದ ಬಳಕೆಯಿಂದಾಗಿ ಭಾರತದ ಅರ್ಥವ್ಯವಸ್ಥೆಯ ಚೇತರಿಕೆಯು ನೇತಾಡುತ್ತಿರುವ ತೂಗು ಕತ್ತಿಯಡಿಯಲ್ಲಿದೆ ಎಂಬ ಅಂಶವನ್ನು ಕಳೆದ ವಾರದ ಲೇಖನದಲ್ಲಿ ಪ್ರಸ್ತಾಪಿಸಲಾಗಿದೆ. (ಜನಶಕ್ತಿ, ಡಿಸೆಂಬರ್ 20-26, ಸಂಚಿಕೆ: 52).

ಅಮೆರಿಕದ ಫೆಡರಲ್ ರಿಸರ್ವ್ ಬೋರ್ಡ್ (ನಮ್ಮ ರಿಸರ್ವ್ ಬ್ಯಾಂಕ್‌ಗೆ ಸಮಾನವಾದದ್ದು-ಅನು) ಅಮೆರಿಕದ ಅರ್ಥವ್ಯವಸ್ಥೆಯನ್ನು ಉತ್ತೇಜಿಸುವ ಸಲುವಾಗಿ ಹಣಕಾಸು ಮಾರುಕಟ್ಟೆಯಲ್ಲಿ ಬಾಂಡ್‌ಗಳನ್ನು ಕೊಳ್ಳುತ್ತದೆ ಮತ್ತು ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳ ಮೇಲಿನ ಬಡ್ಡಿ ದರಗಳನ್ನು ಕೆಳ ಮಟ್ಟದಲ್ಲಿ ಇಟ್ಟಿದೆ (ವಾಸ್ತವವಾಗಿ, ಸೊನ್ನೆಗೆ ಹತ್ತಿರದ ಮಟ್ಟದಲ್ಲಿಟ್ಟಿದೆ). ಕಳೆದ ಕೆಲವು ವರ್ಷಗಳಿಂದಲೂ ಒಂದು ಸುಲಭ ಹಣಕಾಸು ನೀತಿಯನ್ನು ಅನುಸರಿಸುತ್ತಿದೆ. ಹಣದುಬ್ಬರವು ಇತ್ತೀಚೆಗೆ ತೀವ್ರಗೊಳ್ಳುತ್ತಿರುವ ಪರಿಸ್ಥಿತಿಯಲ್ಲಿ, ಅದು ಬಾಂಡ್ ಖರೀದಿಗಳನ್ನು ಅಂದುಕೊಂಡದ್ದಕ್ಕಿಂತಲೂ ಕಡಿಮೆ ಮಟ್ಟದಲ್ಲಿ ಕೊಳ್ಳುವ ಮತ್ತು ಬಡ್ಡಿ ದರಗಳನ್ನು ಏರಿಸುವ ಸಾಧ್ಯತೆಯಿದೆ. ಅಮೆರಿಕದ ಅಲ್ಪ ಮಟ್ಟದ ಬಡ್ಡಿ ದರಗಳ ಪರಿಣಾಮವಾಗಿ, ಹೆಚ್ಚಿನ ಮಟ್ಟದ ಬಡ್ಡಿ ದರಗಳನ್ನು ನಿಗದಿಪಡಿಸಿರುವ ಭಾರತದಂತಹ ದೇಶಗಳಿಗೆ ಹಣ ಹರಿದು ಬರುತ್ತಿತ್ತು. ಈ ರೀತಿಯಲ್ಲಿ ಡಾಲರ್‌ಗಳು ಭಾರತಕ್ಕೆ ಹರಿಯುತ್ತಿದ್ದ ಕಾರಣದಿಂದಾಗಿ ಭಾರತದ ವಿದೇಶ ವ್ಯಾಪಾರದ ಚಾಲ್ತಿ ಖಾತೆಯ ಕೊರತೆಯನ್ನು ನೀಗಿಸಿಕೊಳ್ಳಲು ಹಣವನ್ನು ಒದಗಿಸಿಕೊಳ್ಳುವ ಅನುಕೂಲವಿತ್ತು. ವಾಸ್ತವವಾಗಿ, ಒಳಹರಿದ ಡಾಲರ್‌ಗಳ ಪ್ರಮಾಣವು ಎಷ್ಟು ದೊಡ್ಡದಿತ್ತು ಎಂದರೆ, ದೇಶವು ತನ್ನ ಚಾಲ್ತಿ ಖಾತೆಯ ಕೊರತೆಯನ್ನು ನಿಭಾಯಿಸಿಕೊಂಡ ನಂತರವೂ ವಿದೇಶಿ ವಿನಿಮಯ ಸಂಗ್ರಹವನ್ನು ಅಪಾರವಾಗಿ ಹೆಚ್ಚಿಸಿಕೊಂಡಿದೆ.

ಅಮೆರಿಕದಲ್ಲಿ ಹಣದುಬ್ಬರವನ್ನು ತಡೆಹಿಡಿಯಲು ಬಡ್ಡಿ ದರಗಳನ್ನು ಏರಿಸಲೇಬೇಕಾಗುತ್ತದೆ. ಏಕೆಂದರೆ, ಈ ಮೆಟ್ರೋಪಾಲಿಟನ್ ಬಂಡವಾಳಶಾಹಿ ಅರ್ಥವ್ಯವಸ್ಥೆಗಳು ಬೆಲೆಗಳ ನೇರ ನಿಯಂತ್ರಣ ಅಥವಾ ಪೂರೈಕೆ ನಿರ್ವಹಣೆಯಂತಹ ಕ್ರಮಗಳನ್ನು ಕೈಗೊಳ್ಳಲು ಇಷ್ಟಪಡುವುದಿಲ್ಲ. ಹಾಗಾಗಿ ಅಮೆರಿಕದಲ್ಲಿ ಬಡ್ಡಿ ದರಗಳು ಏರಿದರೆ, ಭಾರತದಂತಹ ದೇಶಗಳಿಗೆ ಡಾಲರ್‌ಗಳ ಹರಿವು ಬತ್ತುತ್ತದೆ. ಆಕರ್ಷಕ ಬಡ್ಡಿ ದರಗಳ ಕಾರಣದಿಂದಾಗಿಯೇ ಈ ದೇಶಗಳಲ್ಲಿ ಹೂಡಿಕೆಯಾಗಿದ್ದ ಅಮೆರಿಕದ ಹಣ, ಅದೇ ಕಾರಣದಿಂದ ಅಮೆರಿಕಾದತ್ತ ಹಿಮ್ಮುಖವಾಗಿ ಹರಿಯಲೂ ಬಹುದು.

ಭಾರತದಲ್ಲಿ ಹೂಡಿಕೆಯಾದ ಡಾಲರ್ ಹಣ ಹಿಂತಿರುಗಿದಾಗ, ಭಾರತವು ತನ್ನ ಚಾಲ್ತಿ ಖಾತೆಯ ಕೊರತೆಗೆ ಡಾಲರ್ ಒದಗಿಸಿಕೊಳ್ಳುವುದು ಕಷ್ಟಕರವಾಗುತ್ತದೆ. ಈ ಪರಿಸ್ಥಿತಿಯಲ್ಲಿ ರೂಪಾಯಿಯ ವಿನಿಮಯ ದರ ಅಪಮೌಲ್ಯಕ್ಕೊಳಗಾಗುತ್ತದೆ. ವಿನಿಮಯ ದರ ಅಪಮೌಲ್ಯಗೊಳ್ಳದಂತೆ ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ ತಾನು ಸಂಗ್ರಹಿಸಿ ಕಾಪಿಟ್ಟುಕೊಂಡಿರುವ ವಿದೇಶಿ ವಿನಿಮಯವನ್ನು ಬಳಕೆ ಮಾಡಿಕೊಳ್ಳುತ್ತದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ, ರೂಪಾಯಿಯ ವಿನಿಮಯ ದರ ಅಲುಗಾಡದಂತೆ ತಡೆ-ಹಿಡಿಯುವ ಉದ್ದೇಶಕ್ಕಾಗಿ ರಿಸರ್ವ್ ಬ್ಯಾಂಕ್ ತನ್ನ ಮೀಸಲು ಸಂಗ್ರಹವನ್ನು ಇಳಿಕೆ ಮಾಡಿಕೊಳ್ಳುವ ಕ್ರಮವು ರೂಪಾಯಿಯ ವಿನಿಮಯ ದರ ಸಂಬಂಧದ ಸಟ್ಟಾವ್ಯವಹಾರಗಳಿಗೆ ಎಡೆಮಾಡಿಕೊಟ್ಟು ಈ ಪ್ರಯತ್ನವನ್ನು ನಿಷ್ಫಲಗೊಳಿಸಲೂ ಬಹುದು. ಆದ್ದರಿಂದ, ರೂಪಾಯಿಯ ವಿನಿಮಯ ದರವನ್ನು ಈ ರೀತಿಯಲ್ಲಿ ಬೆಂಬಲಿಸುವ ಕ್ರಮವು ಪರಿಪೂರ್ಣವೂ ಆಗಲಾರದು ಅಥವಾ ಶಾಶ್ವತವೂ ಆಗಲಾರದು. ಹಾಗಾಗಿ, ಅಮೆರಿಕಾದ ಬಡ್ಡಿ ದರಗಳು ಏರಿದರೆ ರೂಪಾಯಿಯ ಅಪಮೌಲ್ಯ ಅನಿವಾರ್ಯವಾಗುತ್ತದೆ.

ರೂಪಾಯಿಯ ವಿನಿಮಯ ದರದ ಪ್ರತಿಯೊಂದು ಅಪಮೌಲ್ಯವೂ ಸರಕು-ಸಾಮಗ್ರಿಗಳ ಆಮದು ಬೆಲೆಗಳನ್ನು ರೂಪಾಯಿ ಲೆಕ್ಕದಲ್ಲಿ ಹೆಚ್ಚಿಸುತ್ತದೆ. ರೂಪಾಯಿಯ ಅಪಮೌಲ್ಯವು, ಎಲ್ಲಕ್ಕಿಂತ ಮಿಗಿಲಾಗಿ, ತೈಲ ಮತ್ತು ಪೆಟ್ರೋ-ಉತ್ಪನ್ನಗಳ ಆಮದು ಬೆಲೆಗಳನ್ನು ಹೆಚ್ಚಿಸುತ್ತದೆ. ತದನಂತರ, ಸರ್ಕಾರವು ತೈಲ ಮತ್ತು ಪೆಟ್ರೋ-ಉತ್ಪನ್ನ ಬೆಲೆಗಳನ್ನು ಏರಿಸಿ ಈ ಏರಿಕೆಯ ಹೊರೆಯನ್ನು ಗ್ರಾಹಕರಿಗೆ ರವಾನಿಸುತ್ತದೆ. ಈ ರೀತಿಯಲ್ಲಿ ಏರಿಕೆಯಾದ ಪೆಟ್ರೋ-ಉತ್ಪನ್ನಗಳ ಬೆಲೆಗಳು ಎಲ್ಲ ಸರಕು-ಸಾಮಗ್ರಿಗಳ ಬೆಲೆಗಳೂ ಏರಿಕೆಯಾಗುವಲ್ಲಿ (cost-push) ಪರಿಣಮಿಸುತ್ತವೆ. ಹಾಗಾಗಿ, ರೂಪಾಯಿಯ ಅಪಮೌಲ್ಯವು ಭಾರತದಲ್ಲಿ ಹಣದುಬ್ಬರ ದರವನ್ನು ಹೆಚ್ಚಿಸುತ್ತದೆ.

ಇದುವೇ ಇಂದಿನ ದಿನಮಾನಗಳಲ್ಲಿ ಮೆಟ್ರೋಪಾಲಿಟನ್ ದೇಶಗಳು ಮೂರನೇ ಜಗತ್ತಿನ ದೇಶಗಳಿಗೆ ಹಣದುಬ್ಬರವನ್ನು ಹರಡುವ ಕಾರ್ಯವಿಧಾನದ ನಮೂನೆ. ಹಣಕಾಸಿನ ಹರಿವನ್ನು ಒಳಗೊಂಡಿರುವ ಈ ಕಾರ್ಯವಿಧಾನವು, ಹಿಂದೆ ದೇಶ-ದೇಶಗಳು ಗಡಿಯಾಚೆ ಬಂಡವಾಳದ ಚಲನೆಗಳ ಮೇಲೆ ನಿರ್ಬಂಧಗಳನ್ನು ಹೇರುತ್ತಿದ್ದ ಸಮಯದಲ್ಲಿ ಇದ್ದುದಕ್ಕಿಂತಲೂ ಹೆಚ್ಚು ವೇಗವಾಗಿದೆ. ಅಮೆರಿಕದ ಹಣದುಬ್ಬರ ದರದ ನವೆಂಬರ್ ಅಂಕಿ-ಅಂಶಗಳನ್ನು ಘೋಷಿಸಿದ ಕೂಡಲೇ, ವಸ್ತುತಃ, ಅಮೆರಿಕಾದ ಹಣದುಬ್ಬರವು ಭಾರತದ ಅರ್ಥವ್ಯವಸ್ಥೆಯ ಮೇಲೆ ಉಂಟುಮಾಡುವ ಪರಿಣಾಮಗಳ ನಿರೀಕ್ಷೆಯಲ್ಲಿ, ಬಡ್ಡಿದರಗಳು ಅಲ್ಲಿ ಏರುವ ಮುನ್ನವೇ, ಮತ್ತು ಭಾರತದ ಚಾಲ್ತಿ ಖಾತೆಯ ಪ್ರಸ್ತುತ ಕೊರತೆಗಳಿಗೆ ಹಣಕಾಸು ಒದಗಿಸಿಕೊಳ್ಳುವಲ್ಲಿ ಯಾವುದೇ ತೊಂದರೆ ಉದ್ಭವವಾಗುವ ಮುನ್ನವೇ, ಡಾಲರ್‌ಗೆ ಎದುರಾಗಿ ರೂಪಾಯಿ 16 ಪೈಸೆಗಳಷ್ಟು ಕುಸಿದಿದೆ. ಈ ಕುಸಿತವು ಇತ್ತೀಚಿನ ಹಲವು ತಿಂಗಳುಗಳಲ್ಲೇ ಅತಿ ದೊಡ್ಡದು.


ಹಣಕಾಸಿನ ಒಳಹರಿವನ್ನು ಆಕರ್ಷಿಸುವ ಮೂಲಕ ವಿದೇಶ ವ್ಯಾಪಾರದ ಕೊರತೆ (ಪಾವತಿ ಶೇಷ) ಸಮಸ್ಯೆಗಳನ್ನು ನಿರ್ವಹಿಸಲು ಮತ್ತು ಅದರ ಜೊತೆಗೆ ರೂಪಾಯಿಯ ಕುಸಿತವನ್ನೂ ತಡೆಯಲು ಮತ್ತು ಒಟ್ಟು ಬೇಡಿಕೆಯ ಮಟ್ಟವನ್ನು ತಗ್ಗಿಸುವ ಮೂಲಕ ಹಣದುಬ್ಬರವನ್ನು ನಿಗ್ರಹಿಸಲು, ಬಡ್ಡಿ ದರಗಳನ್ನು ಹೆಚ್ಚಿಸಬೇಕಾಗುತ್ತದೆ. ಅರ್ಥವ್ಯವಸ್ಥೆಯ ನವಉದಾರವಾದಿ ಪರಿಸರದಲ್ಲಿ ಲಭ್ಯವಿರುವ ಪ್ರಮುಖ ನೀತಿ ಸಾಧನವೆಂದರೆ, ಬಡ್ಡಿ ದರ. ಆದರೆ, ಬಡ್ಡಿ ದರ ಏರಿಕೆಯ ಕ್ರಮವು ಕೊರೊನಾ-ಸಂಬಂಧಿತ ಆರ್ಥಿಕ ಹಿಂಜರಿತದಿಂದ ಹೊರ ಬರುವ ಚೇತರಿಕೆಯ ಪ್ರಯತ್ನಗಳನ್ನು ಹೆಚ್ಚು ತ್ರಾಸದಾಯಕವಾಗಿಸುತ್ತದೆ.

ಒಂದು ವೇಳೆ ತನ್ನ ಬಡ್ಡಿ ದರಗಳನ್ನು ಅಮೆರಿಕ ಏರಿಸಿದರೆ, ಯಾವುದೇ ಸರ್ಕಾರಕ್ಕೆ ಅದು ಇಷ್ಟವಿರಲಿ ಅಥವಾ ಇಷ್ಟವಿಲ್ಲದಿರಲಿ, ನವಉದಾರವಾದಿ ಅರ್ಥವ್ಯವಸ್ಥೆಯಲ್ಲಿ ಬಡ್ಡಿ ದರಗಳ ಏರಿಕೆಯಿಂದ ಅದು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಬಡ್ಡಿ ದರಗಳನ್ನು ಏರಿಸುವವರೆಗೂ ಬಂಡವಾಳದ ಹೊರಹರಿವುಗಳು ಸಂಭವಿಸುತ್ತಲೇ ಇರುತ್ತವೆ. ಪರಿಣಾಮವಾಗಿ, ರೂಪಾಯಿಯ ಮೌಲ್ಯವು ತೀವ್ರವಾಗಿ ಕುಸಿಯುತ್ತದೆ. ಅದರಿಂದಾಗಿ ಹಣದುಬ್ಬರ ಮತ್ತಷ್ಟು ಉಲ್ಬಣಗೊಳ್ಳುತ್ತದೆ. ಈ ಕಾರಣಗಳಿಂದಾಗಿ, ಭಾರತದ ಅರ್ಥವ್ಯವಸ್ಥೆಯ ಚೇತರಿಕೆಯು ಗಟ್ಟಿಮುಟ್ಟಾಗಿದೆ ಎಂಬುದಾಗಿ ಬಡಾಯಿ ಕೊಚ್ಚಿಕೊಂಡ ಹಣಕಾಸು ಸಚಿವಾಲಯದ ಹೇಳಿಕೆಯು ಎರಡು ಕಾರಣಗಳಿಂದಾಗಿ ಸಂಪೂರ್ಣವಾಗಿ ಆಧಾರ-ರಹಿತವಾಗಿದೆ:

ಒಂದು, ಕಳೆದ ವಾರ ಈ ಅಂಕಣದಲ್ಲಿ ಚರ್ಚಿಸಿದಂತೆ, ಜನರ ಕೈಯಲ್ಲಿ ಕೊಳ್ಳುವ ಶಕ್ತಿಯ ಅಭಾವದಿಂದಾಗಿ ಬಳಕೆಯ ಪ್ರಮಾಣ ಕುಗ್ಗಿದೆ; ಮತ್ತು, ಎರಡು, ಅಮೆರಿಕದ ಹಣದುಬ್ಬರ ದರವು ವೇಗವಾಗಿ ಏರುತ್ತಿರುವುದರಿಂದಾಗಿ ಉದ್ಭವಿಸುವ ಬಾಹ್ಯ ಒತ್ತಡವು ನಮ್ಮ ಸರ್ಕಾರವನ್ನು ಕಠಿಣ ಸ್ವರೂಪದ ಹಣಕಾಸು ಮತ್ತು ವಿತ್ತೀಯ ನಿಲುವನ್ನು ತಳೆಯುವಂತೆ ಮಾಡುತ್ತದೆ.

ಈ ರೀತಿಯಲ್ಲಿ ಅನಾವರಣಗೊಳ್ಳುತ್ತಿರುವ ಘಟನಾವಳಿಗಳು ಜಾಗತಿಕ ನವಉದಾರವಾದಿ ವ್ಯವಸ್ಥೆಯ ಕಾರ್ಯವೈಖರಿಯನ್ನು ಬಹಳ ಸ್ಪಷ್ಟವಾಗಿ ಹೊರಗೆಡುವುತ್ತವೆ. ಈ ಹಿಂದೆ ಅಸ್ತಿತ್ವದಲ್ಲಿದ್ದ ನೀತಿ-ನಿಯಂತ್ರಣ ವ್ಯವಸ್ಥೆಯಲ್ಲಿ (dirigiste regime), ಅಮೆರಿಕದ ಹಣದುಬ್ಬರ ತೀವ್ರತೆಯು, ಆ ಕಾರಣದಿಂದಾಗಿಯೇ, ಭಾರತದ ಅರ್ಥವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿರಲಿಲ್ಲ. ಮತ್ತು, ಅಮೆರಿಕ

ಪುಟ 14 ನೋಡಿ



.....ಆರ್ಥಿಕ ಚೇತರಿಕೆಯ ಬಡಾಯಿಯೂ



ಪುಟ 13 ರಿಂದ

ಅನುಸರಿಸಿದ ನಿರ್ಬಂಧಿತ ಹಣಕಾಸು ಮತ್ತು ವಿತ್ತೀಯ ನೀತಿಗಳ ಒಂದೇ ಒಂದು ಪರಿಣಾಮವೆಂದರೆ, ಭಾರತದ ರಫ್ತುಗಳಿಗೆ ಅಮೆರಿಕ ಕೆಲವು ನಿರ್ಬಂಧಗಳನ್ನು ಹೇರುತ್ತಿತ್ತು. ರಫ್ತುಗಳ ಅಂತಹ ಕುಸಿತವು ಪಾವತಿ ಶೇಷದ ಮೇಲೆ ಉಂಟುಮಾಡುವ ನಕಾರಾತ್ಮಕ ಪರಿಣಾಮಗಳನ್ನು ಆಮದು ನಿಯಂತ್ರಣಗಳನ್ನು ಬಿಗಿಗೊಳಿಸುವ ಮೂಲಕ ಭಾರತ ನಿರ್ವಹಿಸುತ್ತಿತ್ತು. ಹಾಗಾಗಿ, ರಫ್ತುಗಳ ಕುಸಿತದ ಜೊತೆಗೆ ಆಮದುಗಳೂ ಕುಸಿಯುತ್ತಿದ್ದವು. ರಫ್ತುಗಳ ಕುಸಿತದಿಂದಾಗಿ ಉಂಟಾಗುತ್ತಿದ್ದ ಆರ್ಥಿಕ ಚಟುವಟಿಕೆಗಳ ಇಳಿಕೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಆಮದುಗಳ ಮೇಲೆ ಹೇರಿದ ನಿರ್ಬಂಧಗಳು ಈ ಸಮಸ್ಯೆಯನ್ನು ಸರಿಪಡಿಸುತ್ತಿರಲಿಲ್ಲ, ನಿಜ. ಆದರೆ, ಈ ಸಮಸ್ಯೆಯನ್ನು ಸರ್ಕಾರದ ವೆಚ್ಚಗಳನ್ನು ಹೆಚ್ಚಿಸುವ ಮೂಲಕ ಸರಿದೂಗಿಸಲಾಗುತ್ತಿತ್ತು.

ಈ ವಿದ್ಯಮಾನವನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನಿಯಂತ್ರಣಗಳ ಯುಗದಲ್ಲಿ ಪ್ರತಿಯೊಂದು ದೇಶದ ಅರ್ಥವ್ಯವಸ್ಥೆಯೂ ಒಂದು ಪ್ರತ್ಯೇಕ ಘಟಕವೇ ಆಗಿತ್ತು. ಯಾವುದೊ ಒಂದು ದೇಶದಲ್ಲಿ ಏರಿದ ಹಣದುಬ್ಬರವನ್ನು ಮತ್ತೊಂದು ದೇಶವು, ಆ ಹಣದುಬ್ಬರವನ್ನು ಆಮದು ಮಾಡಿಕೊಳ್ಳದೆ, ತನ್ನ ಚಟುವಟಿಕೆಗಳು ಮೊಟಕುಗೊಳ್ಳದ ರೀತಿಯಲ್ಲಿ ನಿಭಾಯಿಸಿಕೊಳ್ಳಬಹುದಿತ್ತು. ಮತ್ತು, ಒಂದು ಪ್ರಧಾನ ಬಂಡವಾಳಿಗ ದೇಶದಲ್ಲಿ ಸಂಭವಿಸುವ ತೀವ್ರ ಹಣದುಬ್ಬರ ಮತ್ತು ತರುವಾಯದ ಆರ್ಥಿಕ ಹಿಂಜರಿತಗಳು ಉಂಟುಮಾಡುತ್ತಿದ್ದ ಪರಿಣಾಮಗಳನ್ನು ಮೂರನೇ ಜಗತ್ತಿನ ದೇಶಗಳು ತಾವು ಹೊಂದಿದ್ದ ವಿವಿಧ ನೀತಿ ಸಾಧನಗಳ ಅಲ್ಪ ಬದಲಾವಣೆಗಳ ಮೂಲಕ ನಿಭಾಯಿಸುವುದು ಸಾಧ್ಯವಿತ್ತು.

ನವಉದಾರವಾದದ ಅಡಿಯಲ್ಲಿ, ಹಣಕಾಸು ಬಂಡವಾಳವು ದೇಶ ದೇಶಗಳ ನಡುವೆ ಸರಾಗವಾಗಿ ಚಲಿಸುತ್ತದೆ. ಜೊತೆಗೆ, ಸರಕು ಮತ್ತು ಸೇವೆಗಳ ಆಮದಿನ ಮೇಲೆ ನಿರ್ಬಂಧಗಳನ್ನು ಹೇರುವಂತಿಲ್ಲ. ಆದ್ದರಿಂದ, ದೇಶವು ಹೊರಗಿನ ಆರ್ಥಿಕ ವಿದ್ಯಮಾನಗಳು ಬೀರುವ ಪ್ರಭಾವಗಳನ್ನು ಪ್ರತಿರೋಧಿಸುವ ಶಕ್ತಿಯನ್ನು ಕಳೆದುಕೊಳ್ಳುತ್ತದೆ ಮತ್ತು ತನಗೆ ಬೇಕೆನಿಸಿದ ಒಂದು ನಿರ್ದಿಷ್ಟ ಮಟ್ಟದ ಚಟುವಟಿಕೆಗಳನ್ನು ನಿರ್ವಹಿಸುವ ಸ್ವಾಯತ್ತತೆಯನ್ನು ಕಳೆದುಕೊಳ್ಳುತ್ತದೆ. ಬದಲಿಗೆ, ಒಂದು ಪ್ರಮುಖ ಬಂಡವಳಿಗ ಅರ್ಥವ್ಯವಸ್ಥೆಯ ಆಗು–ಹೋಗುಗಳು ಭಾರತವೂ ಸೇರಿದಂತೆ ಮೂರನೇ ಜಗತ್ತಿನ ದೇಶಗಳ ಅರ್ಥವ್ಯವಸ್ಥೆಯ ಮೇಲೆ ಅಗಾಧ ಪರಿಣಾಮ ಬೀರುತ್ತವೆ. ಸರ್ಕಾರಕ್ಕೆ ಇಷ್ಟವಿರಲಿ ಅಥವಾ ಇಲ್ಲದಿರಲಿ, ಕೆಲವು ನಿರ್ದಿಷ್ಟ ನೀತಿಗಳನ್ನು ಅಳವಡಿಸಿಕೊಳ್ಳುವಂತೆ ಒತ್ತಡ ಹೇರಲಾಗುತ್ತದೆ. ಹಾಗಾಗಿ, ಅರ್ಥವ್ಯವಸ್ಥೆಯ ಮೇಲೆ ಬೀಳುವ ಇಂತಹ ಅಗಾಧ ಪರಿಣಾಮಗಳು ಸಹಜವಾಗುತ್ತವೆ.

ನಿರ್ದಿಷ್ಟ ಆರ್ಥಿಕ ನೀತಿಗಳನ್ನು ಒಪ್ಪಿಕೊಳ್ಳುವಂತೆ ಮಾಡುವ ಈ ಒತ್ತಡವನ್ನು ಅಸಾಧಾರಣ ವೇಗದಲ್ಲಿ ಹೇರಲಾಗುತ್ತದೆ. ದೇಶ ದೇಶಗಳ ಗಡಿಗಳನ್ನು ದಾಟುವ ಹಣಕಾಸು ಬಂಡವಾಳದ (ಮತ್ತು ಸರಕುಗಳು ಮತ್ತು ಸೇವೆಗಳ) ಸ್ವಾತಂತ್ರ್ಯವು, ಆರ್ಥಿಕ ಹಿಂಜರಿತದ ಮತ್ತು ಹಣದುಬ್ಬರದ ಪ್ರವೃತ್ತಿಗಳನ್ನು ದೇಶ ದೇಶಗಳಾದ್ಯಂತ ಸುಲಭವಾಗಿಯೂ ಮತ್ತು ತ್ವರಿತವಾಗಿಯೂ ಹರಡುವಂತೆ ಮಾಡುತ್ತದೆ. ಹಾಗಾಗಿ, ಭಾರತದಂತಹ ಒಂದು ದೇಶವು ತನ್ನ ಆಂತರಿಕ ಬೆಳವಣಿಗೆಗಳ ಕಾರಣಗಳಿಂದಾಗಿ ಮಾತ್ರವಲ್ಲ, ಅಧಿಕವಾಗಿ, ಅಮೆರಿಕದಂತಹ ಬಂಡವಾಳ–ಪ್ರಧಾನ ದೇಶದಲ್ಲಿ ಜರುಗುವ ವಿದ್ಯಮಾನದ ಕಾರಣಗಳಿಂದಾಗಿಯೂ ನಿರುದ್ಯೋಗದ ಹೊರೆಯನ್ನು ಹೊರಬೇಕಾಗುತ್ತದೆ. ಹಾಗಾಗಿ, ನವಉದಾರವಾದದ ಮತಾಂಧ ಅನುಯಾಯಿಯಾಗಿರುವ ಮೋದಿ ಸರ್ಕಾರವು ಮುಂದಿನ ದಿನಗಳಲ್ಲಿ ಭಾರತದ ಜನರಿಗೆ ಮತ್ತಷ್ಟು ಆರ್ಥಿಕ ಸಂಕಷ್ಟಗಳ ಹೊರೆಯನ್ನು ಹೇರಲಿದೆ.

ಚುನಾವಣಾ ಕ್ಷೇತ್ರ ಮರುವಿಂಗಡಣೆ ಆಯೋಗದ ಶಿಫಾರಸುಗಳು ವಿಭಜನಕಾರಿ-ಜನವರಿ 1 ರಂದು ಪ್ರತಿಭಟನೆ: ಪಿಎಜಿಡಿ

ಜಮ್ಮು ಮತ್ತು ಕಾಶ್ಮೀರ ಕುರಿತ ಕ್ಷೇತ್ರ ಮರುವಿಂಗಡಣೆ ಆಯೋಗದ ಶಿಫಾರಸುಗಳು "ವಿಭಜನಕಾರಿಯಾಗಿವೆ, ಸ್ವೀಕಾರಾರ್ಹವಾಗಿಲ್ಲ" ಎಂದು 'ಜನತೆಯ ಗುಪ್ಕರ್ ಘೋಷಣೆಯ ಮೈತ್ರಿಕೂಟ'(ಪಿಎಜಿಡಿ) ಹೇಳಿದೆ ಹಾಗೂ ಇದರ ವಿರುದ್ಧ ಒಂದು ಶಾಂತಿಯುತ ಪ್ರತಿಭಟನೆ ನಡೆಸುವುದಾಗಿ ಪ್ರಕಟಿಸಿದೆ.

ಈಗ ಕೇಂದ್ರಾಡಳಿತ ಪ್ರದೇಶವಾಗಿರುವ ಈ ರಾಜ್ಯದ ವಿಧಾನಸಭಾ ಕ್ಷೇತ್ರಗಳ ಮರುವಿಂಗಡಣೆಗೆ ನೇಮಿಸಿದ್ದ ಆಯೋಗ ಅದರ ಐದು ಸಹ ಸದಸ್ಯರಾದ ನ್ಯಾಷನಲ್ ಕಾನ್ಫರೆನ್ಸ್ ನ ಮೂರು ಸಂಸತ್ ಸದಸ್ಯರು ಮತ್ತು ಬಿಜೆಪಿಯ ಇಬ್ಬರು ಸಂಸತ್ ಸದಸ್ಯರೊಂದಿಗೆ ಚರ್ಚಿಸಿ 'ಪೇಪರ್1'ರಲ್ಲಿ ಜಮ್ಮು ಪ್ರದೇಶಕ್ಕೆ 6 ಹೆಚ್ಚುವರಿ ಕ್ಷೇತ್ರಗಳನ್ನು ಮತ್ತು ಕಾಶ್ಮೀರ ಕಣಿವೆಗೆ ಒಂದು ಹೆಚ್ಚುವರಿ ಕ್ಷೇತ್ರವನ್ನು ಶಿಫಾರಸು ಮಾಡಿರುವುದಾಗಿ ತಿಳಿದು ಬಂದಿದೆ.

"ನಾವು ಶಾಂತಿ ಬಯಸುತ್ತೇವೆ, ಯಾವುದೇ ಸಂಸ್ಥೆ ಅಥವ ಸರಕಾರದೊಂದಿಗೆ ಯಾವುದೇ ಸಂಘರ್ಷವನ್ನು ಬಯಸುವುದಿಲ್ಲ. ಆದರೆ ಜನತೆಯ ನ್ಯಾಯಬದ್ಧ ಹಕ್ಕುಗಳ ರಕ್ಷಣೆಗೆ ನಮ್ಮ ದನಿಯನ್ನು ಶಾಂತಿಯುತ ರೀತಿಯಲ್ಲಿ ಎತ್ತುತ್ತೇವೆ. ನಮ್ಮ ಅಭಿಪ್ರಾಯದಲ್ಲಿ ಕ್ಷೇತ್ರ ಮರುವಿಂಗಡಣಾ ಆಯೋಗ ಮುಂದಿಟ್ಟಿರುವ ಪ್ರಸ್ತಾವನೆ ಜನರಿಗೆ ಮತ್ತು ಎಲ್ಲ ಸಮುದಾಯಗಳಿಗೆ ಸ್ವೀಕಾರ್ಯವಾಗಿಲ್ಲವಾದ್ದರಿಂದ ಜನವರಿ 1 ರಂದು ಶ್ರೀನಗರದಲ್ಲಿ ಒಂದು ಶಾಂತಿಯುತ ಪ್ರತಿಭಟನೆಯನ್ನು ನಡೆಸಲು ನಿರ್ಧರಿಸಿದ್ದೇವೆ" ಎಂದು ಪಿಎಜಿಡಿಯ ಮುಖ್ಯ ವಕ್ತಾರ ಮತ್ತು ಸಿಪಿಐ(ಎಂ) ಮುಖಂಡ ಮಹಮ್ಮದ್ ಯುಸುಫ್ ತರಿಗಾಮಿ ಹೇಳಿದ್ದಾರೆ.

ಪಿಎಜಿಡಿ ಜಮ್ಮು ಮತ್ತು ಕಾಶ್ಮೀರದ ಐದು ಮುಖ್ಯಧಾರೆಯ ಪಕ್ಷಗಳ ಮೈತ್ರಿಕೂಟವಾಗಿದ್ದು, ಇದರಲ್ಲಿ ಎನ್‌ಸಿ, ಪಿಡಿಪಿ, ಸಿಪಿಐ(ಎಂ) ಮತ್ತಿತರ ಪಕ್ಷಗಳು ಸೇರಿವೆ. ಕೇಂದ್ರ ಸರಕಾರ ಆಗಸ್ಟ್ 2019ರಲ್ಲಿ ರದ್ದು ಮಾಡಿರುವ ರಾಜ್ಯದ ವಿಶೇಷ ಸ್ಥಾನಮಾನವನ್ನು ಮತ್ತೆ ತರಬೇಕು ಎಂದು ಹೇಳುತ್ತಿರುವ ಮೈತ್ರಿಕೂಟ.

ಜಮ್ಮುವಿನಲ್ಲಿ ಅದು ತನ್ನ ಎರಡನೇ ಸಭೆಯನ್ನು ನಡೆಸಿದ ನಂತರ ಈ ಹೇಳಿಕೆಯನ್ನು ನೀಡಿದೆ.

ಮರುವಿಂಗಡಣಾ ಆಯೋಗದ ಪ್ರಸ್ತಾವನೆ ವಿಭಜನಕಾರಿಯಾಗಿದೆ, ಅದು ಜಮ್ಮು ಮತ್ತು ಕಾಶ್ಮೀರದ ನಡುವಿನ ವಿಭಜನೆಯನ್ನು ಇನ್ನಷ್ಟು



ಆಳಗೊಳಿಸುತ್ತದೆ ಎಂಬುದು ಪಿಎಜಿಡಿಯ ದೃಢ ಅಭಿಪ್ರಾಯ ಎಂದು ತರಿಗಾಮಿ ಹೇಳಿದ್ದಾರೆ. "ಅದು ಜನತೆಯಲ್ಲಿನ ಪರಕೀಯ ಭಾವವನ್ನು ಇನ್ನಷ್ಟು ಆಳಗೊಳಿಸುತ್ತದೆ ಮತ್ತು ಇನ್ನೂ ದೊಡ್ಡ ಕಂದರವನ್ನು ಸೃಷ್ಟಿಸುತ್ತದೆ. ಇದು ಒಟ್ಟಾಗಿ ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನ ಜನತೆಯ ಹಿತಗಳಿಗೂ ಕೇಡುಂಟು ಮಾಡುವಂತದ್ದು ಕೂಡ" ಎಂದು ಒಂದು ಗಂಟೆಗೂ ಹೆಚ್ಚು ಕಾಲ ನಡೆದ ಸಭೆಯ ನಂತರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತ ಅವರು ಹೇಳಿದರು.

ಈ ಸಭೆ ನ್ಯಾಷನಲ್ ಕಾನ್ಫರೆನ್ಸಿನ ಅಧ್ಯಕ್ಷ ಫಾರುಖ್ ಅಬ್ದುಲ್ಲಾ ಅಧ್ಯಕ್ಷತೆಯಲ್ಲಿ ನಡೆಯಿತು. ಪಿಡಿಪಿ ಅಧ್ಯಕ್ಷರಾದ ಮೆಹಬೂಬ ಮುಫ್ತಿ ಮತ್ತು ಆವಾಮಿ ನ್ಯಾಷನಲ್ ಕಾನ್ಫರೆನ್ಸಿನ ಮುಝಫ್ಫರ್ ಅಹ್ಮದ್ ಅವರು ಸಭೆಯಲ್ಲಿ ಭಾಗವಹಿಸಿದ್ದರು. ಈ ಸಭೆಯಲ್ಲಿ 'ನಮ್ಮ ನೋವ'ನ್ನು ಎತ್ತಿ ತೋರಲಿಕ್ಕಾಗಿ ದೇಶದ ಜನತೆಯ ಬಳಿಸಾರಲು ನಿರ್ಧರಿಸಲಾಯಿತು ಎಂದು ತರಿಗಾಮಿ ಹೇಳಿದ್ದಾರೆ. ದೇಶದ ಜನತೆಯನ್ನು, ರಾಜಕೀಯ ಪಕ್ಷಗಳ ಮುಖಂಡರನ್ನು, ಭಿನಾಭಿಪ್ರಾಯ ಹೊಂದಿರುವವರನ್ನು ಕೂಡ ಭೇಟಿಯಾಗಲು ಪತ್ರಿಯೊಂದು ಅವಕಾಶವನ್ನು ಮತ್ತು ವೇದಿಕೆಯನ್ನು ಬಳಸಿಕೊಂಡು "ನಮ್ಮ ಹಕ್ಕುಗಳನ್ನು ತುಳಿಯುತ್ತಿರುವುದರಿಂದಾಗಿ ನಾವು ಅನುಭವಿಸುತ್ತಿರುವ ನೋವನ್ನು, ಅದರಿಂದ ದೇಶಕ್ಕಾಗುವ ಬಹಳ ಗಂಭೀರ ದುಷ್ಪರಿಣಾಮಗಳನ್ನು ಅವರು ಅರ್ಥಮಾಡಿಕೊಳ್ಳುವಂತೆ ಮಾಡುತ್ತೇವೆ" ಎಂದು ತರಿಗಾಮಿ ಹೇಳಿದರು.

ಮರುವಿಂಗಡಣೆಯ ಕೆಲಸಕ್ಕೆ ಜನಗಣತಿಯ ಪ್ರಕಾರದ ಜನಸಂಖ್ಯೆಯೇ ಸಂವಿಧಾನಿಕ ಚೌಕಟ್ಟು, ದುರದೃಷ್ಟವಶಾತ್, ಅದನ್ನು ಕಡೆಗಣಿಸಲಾಗಿದೆ ಎಂಬುದು ಖೇದದ ಸಂಗತಿ. ಎಂದೂ ಅವರು ನೆನಪಿಸಿದರು.

ವಿಸರ್ಜನೆಗೊಂಡಿರುವ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆಯಲ್ಲಿ ಕಾಶ್ಮೀರ ವಿಭಾಗದಿಂದ 46 ಕ್ಷೇತ್ರಗಳು ಮತ್ತು ಜಮ್ಮು ಪ್ರದೇಶದಿಂದ 37 ಕ್ಷೇತ್ರಗಳು ಇದ್ದವು. 2011ರ ಜನಗಣತಿ ಪ್ರಕಾರ ಕಾಶ್ಮೀರ ವಿಭಾಗದ ಜನಸಂಖ್ಯೆ 68.83ಲಕ್ಷವಾದರೆ, ಜಮ್ಮು ಪ್ರದೇಶದ್ದು 53.72 ಲಕ್ಷ. ಆಯೋಗಕ್ಕೆ ಇದು ಆಧಾರ.

2019ರ ವಿಶೇಷ ಸ್ಥಾನಮಾನ ರದ್ದತಿ ಮತ್ತು ಮರು ಸಂಘಟನೆ ಕಾಯ್ದೆಯ ವಿರುದ್ಧ ವಿವಿಧ ರಾಜಕೀಯ ಪಕ್ಷಗಳು ಸುಪ್ರಿಂ ಕೋರ್ಟಿಗೆ ಹೋಗಿರುವುದನ್ನು ಪ್ರಸ್ತಾಪಿಸುತ್ತ ತರಿಗಾಮಿಯವರು "ನಾವು ಕ್ಷೇತ್ರ ಮರುವಿಂಗಡಣೆ ಕೆಲಸವನ್ನು ರಾಷ್ಟ್ರೀಯ ಮರುವಿಂಗಡಣೆಯ ಪ್ರಕಾರ ಮಾಡಬೇಕು ಎಂದು ಆಗ್ರಹಿಸುತ್ತಲೇ ಬಂದಿದ್ದೇವೆ" ಎಂದರು.

2019ರ ನಿರ್ಣಯ ಅಸಂವಿಧಾನಿಕ ಎಂದು ನ್ಯಾಯಾಲಯದಲ್ಲಿ ಸವಾಲು ಹಾಕಿರುವುದರಿಂದಾಗಿ ಅದರ ನಿರ್ಧಾರ ಬರುವ ವರೆಗೆ ಸರಕಾರ ಕಾಯಬೇಕಿತ್ತು. ಆದರೆ ಸರಕಾರ ತರಾತುರಿಯಲ್ಲಿದೆ. ಇದು ದೇಶಕ್ಕಾಗಲೀ, ಜನತೆಗಾಗಲೀ ಹಿತಕಾರಿಯಲ್ಲ.

ಪ್ರಧಾನ ಮಂತ್ರಿಗಳು ಹೃದಯಗಳನ್ನು ಬೆಸೆಯುವ ಮತ್ತು ಕಂದರಗಳನ್ನು ಮುಚ್ಚುವ ಬಗ್ಗೆ ಮಾತಾಡುತ್ತಾರೆ. ಆದರೆ ಇಂತಹ ಕ್ರಮಗಳು ಕಂದರಗಳನ್ನು ಆಳಗೊಳಿಸುತ್ತವೆ, ಹೃದಯಗಳನ್ನು ಮುರಿಯುತ್ತವೆ ಎನ್ನುತ್ತ ತರಿಗಾಮಿ ಎಲ್ಲ ಸಂಸದ್ ಸದಸ್ಯರಿಗೆ, ಕ್ಷೇತ್ರ ಮರುವಿಂಗಡಣಾ ಆಯೋಗಕ್ಕೆ ಮತ್ತು ಎಲ್ಲ ರಾಜಕೀಯ ಪಕ್ಷಗಳಿಗೆ "ನಮ್ಮ ದನಿಯನ್ನು ಕೇಳಿ", ಇದನ್ನು ಮಾಡಬೇಡಿ ಎಂದು ಮನವಿ ಮಾಡಿದರು.

ಪಿಎಜಿಡಿ ಯಾವುದೇ ಒಂದು ಪ್ರದೇಶವನ್ನು ಅಥವ ಸಮುದಾಯವನ್ನು ಪ್ರತಿನಿಧಿಸುವಂತದ್ದಲ್ಲ, ಇದು ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖಿನ ಎಲ್ಲ ಸಮುದಾಯಗಳು, ಪ್ರದೇಶಗಳು, ಉಪಪ್ರದೇಶಗಳ ವೇದಿಕೆ, ಇದು ಜನಗಳನ್ನು ವಿಭಜಿಸುವ ಗುರಿಯಿಟ್ಟುಕೊಂಡ ಯಾವುದೇ ಅಸಂವಿಧಾನಿಕ ಮತ್ತು ಪ್ರಜಾಪ್ರಭುತ್ವ–ವಿರೋಧಿ ಕ್ರಮಕ್ಕೆ ಅವಕಾಶ ಕೊಡುವುದಿಲ್ಲ ಎಂದ ತರಿಗಾಮಿ ವೋಟ್ ಬ್ಯಾಂಕ್‌ಗಾಗಿ ಹಿಂದು ಮತ್ತು ಮುಸ್ಲಿಮರನ್ನು, ಜಮ್ಮು ಮತ್ತು ಕಾಶ್ಮೀರವನ್ನು ವಿಭಜಿಸುವ ಪ್ರಯತ್ನಗಳ ನಂತರ ಗುಜ್ಜರರನ್ನು ಪಹಾಡಿಗಳ ವಿರುದ್ಧ ಎತ್ತಿ ಕಟ್ಟುವ ಪ್ರಯತ್ನ ನಡೆಯುತ್ತಿದೆ ಎಂದರು. ಇದು ಅತ್ಯಂತ ದುರದೃಷ್ಟಕರ, ಮತಗಳಿಕೆಗಾಗಿ ಸಂವಿಧಾನಿಕ ಮತ್ತು ನೈತಿಕ ಎಲ್ಲೆಗಳನ್ನು ಉಲ್ಲಂಘಿಸಲಾಗುತ್ತಿದೆ ಎಂದು ಖೇದ ವ್ಯಕ್ತಪಡಿಸಿದ ತರಿಗಾಮಿ "ನಾವು ಇದಕ್ಕೆ ಅವಕಾಶ ಕೊಡುವುದಿಲ್ಲ ನಮ್ಮ ಜನತೆಯ ಹಕ್ಕುಗಳಿಗಾಗಿ ಮತ್ತು ಕಲ್ಯಾಣಕ್ಕಾಗಿ ನಮ್ಮ ಪ್ರದೇಶ ಮತ್ತು ಸಮುದಾಯಗಳ ಐಕ್ಯತೆಗಾಗಿ ನಾವು ಒಂದಾಗಿ ನಿಲ್ಲುತ್ತೇವೆ" ಎಂದು ಹೇಳಿದರು.

ಕೊಲ್ಕತ ಮಹಾನಗರ ಸಭೆಗೆ ಚುನಾವಣೆಯೆಂಬ ಪ್ರಹಸನ

ಪಶ್ಚಿಮ ಬಂಗಾಲದ ರಾಜಧಾನಿ ಕೊಲ್ಕತಾದ ಮಹಾನಗರಸಭೆಗೆ ಚುನಾವಣೆಗಳು ನಡೆದು ಫಲಿತಾಂಶಗಳೂ ಬಂದಿವೆ. ಪಶ್ಚಿಮ ಬಂಗಾಲದಲ್ಲಿ ಯಾವ ತೆರನ 'ಪ್ರಜಾಪ್ರಭುತ್ವ' ಇದೆ ಎಂಬುದು ಮತ್ತೊಮ್ಮೆ ಬಯಲಿಗೆ ಬಂದಿದೆ. ಇನ್ನೊಂದು ಪ್ರಹಸನ ನಡೆದಿದೆ ಎಂದು ಎಡರಂಗ ಪ್ರತಿಕ್ರಿಯಿಸಿದೆ.

ಟಿಎಂಸಿ ಭಾರೀ ಬಹುಮತ ಗಳಿಸಿದೆ, ಇತರ ಪಕ್ಷಗಳು ಧೂಳಿಪಟಗೊಂಡಿವೆ ಎಂದು ಮಾಧ್ಯಮಗಳು ಹೇಳಿವೆ. ಜತೆಗೆ ಮತದಾನದ ದಿನ ವ್ಯಾಪಕ ಪ್ರಮಾಣದಲ್ಲಿ ಮತಗಟ್ಟೆ ವಶದ ಪ್ರಕರಣಗಳು ನಡೆದಿರುವುದನ್ನೂ ಈ ಮೊದಲು ವರದಿ ಮಾಡಿದ್ದವು. ವಾಸ್ತವವಾಗಿ ಇಡೀ ಮತದಾನ ಪ್ರಕ್ರಿಎಯನ್ನು ಟಿಎಂಸಿ ಗಲಭೆಕೋರು ಹೈಜಾಕ್ ಮಾಡಿರುವುದು ಕಂಡು ಬಂತು. ಇದಕ್ಕಾಗಿ ಕೊಲಕ್ತಾದ ಹೊರಗಿನಿಂದ ಗಲಭೆಕೋರರನ್ನು ತರಿಸಲಾಗಿತ್ತು ಎಂದು ವರದಿಯಾಗಿದೆ. ಇಡಿಡೀ ಪ್ರದೇಶಗಳ ಜನರು ಮತದಾನಕ್ಕೆ ಬರದಂತೆ ಮಾಡಲಾಯಿತು. ಬಿಜೆಪಿ ಆಳ್ವಿಕೆಯ ತ್ರಿಪುರಾದ ಪುರಸಭಾ ಚುನಾವಣೆಗಳಲ್ಲಿ ನಡೆದದ್ದೇ ಟಿಎಂಸಿ ಆಳ್ವಿಕೆಯ ಪಶ್ಚಿಮ ಬಂಗಾಲದಲ್ಲಿ ಪುನರಾವರ್ತನೆಗೊಂಡಿತು.

ಟಿಎಂಸಿ ಮತದಾನದ ಹಿಂದಿನ ದಿನದಿಂದಲೇ ಭಯೋತ್ಪಾದಕ ವಾತಾವರಣವನ್ನು ಸೃಷ್ಟಿಸಿತು. 34 ವಾರ್ಡುಗಳಲ್ಲಿ ಟಿಎಂಸಿ ಅಭ್ಯರ್ಥಿಗಳು 80%ಕ್ಕಿಂತಲೂ ಹೆಚ್ಚು ಮತಗಳನ್ನು 'ಪಡೆದರು', 44 ರಲ್ಲಿ 70 ರಿಂದ 80%, ಕೆಲವು ವಾರ್ಡುಗಳಲ್ಲಂತೂ 90%ಕ್ಕಿಂತಲೂ ಹೆಚ್ಚು ಮತ ಪಡೆದಿರುವರೆಂಬುದೇ ಚುನಾವಣಾ ಮೋಸವನ್ನು ಬಿಂಬಿಸುತ್ತದೆ.

ಎಷ್ಟೇ ಚುನಾವಣಾ ಮೋಸ ನಡೆಸಿದರೂ ಅವುಗಳ ಹೊರತಾಗಿಯೂ ಎಡರಂಗದ ಮತಗಳಿಕೆ ಇತ್ತೀಚಿನ ವಿಧಾಸಭಾ ಚುನಾವಣೆಗಳಿಗಿಂತ ಹೆಚ್ಚಿದೆ ಎಂಬುದು ಗಮನಾರ್ಹ.

ಎಡರಂಗ ಗೆದ್ದ ವಾರ್ಡುಗಳ ಸಂಖ್ಯೆ ಎರಡೇ ಆದರೂ ಒಟ್ಟು 11.89% ಮತ ಪಡೆಯಿತು. 65 ರಲ್ಲಿ ಎರಡನೇ ಸಥಾನ ಪಡೆಯಿತು, ಕಾಂಗ್ರೆಸ್ 17 ವಾರ್ಡುಗಳಲ್ಲಿ ಮತ್ತು ಬಿಜೆಪಿ 47 ವಾರ್ಡುಗಳಲ್ಲಿ 2ನೇ ಸ್ಥಾನದಲ್ಲಿತ್ತು.

ಈ ಚುನಾವಣೆಗಳಲ್ಲಿ ಪಡೆದ ಮತಗಳ ವಿಶ್ಲೇಷಣೆ ನಡೆಸಿರುವ ಎಡರಂಗ, ಇದೊಂದು ಪ್ರಹಸನವಾಗಿತ್ತಾದರೂ, ಎಡರಂಗವನ್ನು ಜನಗಳು ನಿಜವಾದ ಪರ್ಯಾಯವಾಗಿ ಸ್ವೀಕರಿಸಲಾರಂಭಿಸಿದ್ದಾರೆ ಎಂಬುದು ಕಾಣ ಬಂದಿದೆ ಎಂದಿದೆ.

ಚಿಲಿಯಲ್ಲಿ ಎಡಶಕ್ತಿಗಳು ಜಯಭೇರಿ ಬಾರಿಸಿವೆ. ಗಾಬ್ರಿಯೆಲ್ ಬೋರಿಕ್, 35 ವರ್ಷದ ಮಾಜಿ ವಿದ್ಯಾರ್ಥಿ ನಾಯಕ ತಮ್ಮ ಉಗ್ರ ಬಲಪಂಥೀಯ ಪ್ರತಿಸ್ಪರ್ಧಿ ಜೋಸ್ ಅಂಟೊನಿಯೊ ಕಾಸ್ಟ್ ಅವರನ್ನು ಭಾರಿ ಬಹುಮತದಿಂದ ಸೋಲಿಸಿದ್ದಾರೆ. ಲ್ಯಾಟಿನ್ ಅಮೆರಿಕದಲ್ಲಿ 1970ರ ದಶಕದಲ್ಲಿ ನವ-ಉದಾರವಾದಿ ನೀತಿಗಳು ಮತ್ತು ಅವುಗಳನ್ನು ಜಾರಿ ಮಾಡಲು, ಜನಪರ ಸರಕಾರಗಳನ್ನು ಉರುಳಿಸಲು, ಸರ್ವಾಧಿಕಾರವನ್ನು ಹೇರಲು ಹೇಸದ ಯು.ಎಸ್ ರಾಜಕೀಯ–ಮಿಲಿಟರಿ ಹಸ್ತಕ್ಷೇಪ ಆರಂಭವಾದ ಚಿಲಿಯಲ್ಲಿ ನ ಈ ಎಡವಿಜಯ ಮಹತ್ವಪೂರ್ಣ ಮತ್ತು ಗಮನಾರ್ಹ. ಒಂದು ಸಕಾರಾತ್ಮಕ ಜಾಗತಿಕ ರಾಜಕೀಯ ಬೆಳವಣಿಗೆ. ಚಿಲಿಯ ವಿಜಯದೊಂದಿಗೆ, ಇತ್ತೀಚೆಗೆ ಅರ್ಜೆಂಟಿನಾ, ಬೊಲಿವಿಯ, ನಿಕರಾಗುವ, ಹೊಂಡುರಸ್, ಪೆರು ಗಳಲ್ಲಿ ಎಡಶಕ್ತಿಗಳ ವಿಜಯದೊಂದಿಗೆ ಆರಂಭವಾಗಿರುವ 'ಎಳೆಗೆಂಪು ಅಲೆ' ಮತ್ತೆ ರಭಸ ಪಡೆದುಕೊಂಡಿದೆ. ಈ 'ಎಳೆಗೆಂಪು ಅಲೆ' ಮುಂದೆ ಬ್ರೆಜಿಲ್ ನ್ನೂ ಅಪ್ಪಳಿಸಲಿದೆ.



ವಸಂತರಾಜ ಎನ್.ಕೆ.

ಚಿಲಿಯಲ್ಲಿ ಎಡ ಜಯಭೇರಿ: ಲ್ಯಾಟಿನ್ ಅಮೆರಿಕದಲ್ಲಿ ಜೋರಾದ ಎಳೆಗೆಂಪು ಅಲೆ

ಚಿಲಿಯಲ್ಲಿ ಎಡಶಕ್ತಿಗಳು ಜಯಭೇರಿ ಬಾರಿಸಿವೆ. ಗಾಬ್ರಿಯೆಲ್ ಬೋರಿಕ್, 35 ವರ್ಷದ ಮಾಜಿ ವಿದ್ಯಾರ್ಥಿ ನಾಯಕ, ತಮ್ಮ ಉಗ್ರ ಬಲಪಂಥೀಯ ಪ್ರತಿಸ್ಪರ್ಧಿ ಜೋಸ್ ಅಂಟೊನಿಯೊ ಕಾಸ್ಟ್ ಅವರನ್ನು ಭಾರಿ ಬಹುಮತದಿಂದ ಸೋಲಿಸಿದ್ದಾರೆ. ಬೊರಿಕ್ ಅವರು ಶೇ.56 ಮತಗಳಿಸಿದರೆ, ಕಾಸ್ಟ್ ಶೇ.44 ಮತ ಗಳಿಸಿ 10 ಲಕ್ಷದಷ್ಟು ಭಾರೀ ಅಂತರದಿಂದ ಜಯ ಗಳಿಸಿದ್ದಾರೆ. ಮೊದಲ ಸುತ್ತಿನಲ್ಲಿ ಕಾಸ್ಟ್ ಶೇ.27.9 ಮತ ಗಳಿಸಿ ಮೊದಲ ಸ್ಥಾನದಲ್ಲಿದ್ದರು, ಬೊರಿಕ್ ಎರಡನೆಯ ಸ್ಥಾನದಲ್ಲಿದ್ದು ಶೇ. 25.8 ಮತ ಗಳಿಸಿದ್ದರು ಎಂದು ಗಮನಿಸಬಹುದು. ಎರಡನೆಯ ಸುತ್ತಿನಲ್ಲಿ 12 ಲಕ್ಷದಷ್ಟು ಹೆಚ್ಚಾಗಿ ಶೇ. 56ರಷ್ಟು ಮತದಾನ ಆಗಿತ್ತು. ಪಿನೋಶೆ ಸರ್ವಾಧಿಕಾರ 1990ರಲ್ಲಿ ಕೊನೆಗೊಂಡ ನಂತರ ಮೊದಲ ಬಾರಿಗೆ ಮೊದಲೆರಡು ಸ್ಥಾನ ಗಳಿಸುತ್ತಿದ್ದ ಆಳುವ ವರ್ಗಗಳ ಪಕ್ಷಗಳಾದ ನಡು–ಬಲಪಂಥೀಯ "ಸ್ವತಂತ್ರ ಡೆಮೊಕ್ರಾಟಿಕ್ ಯೂನಿಯನ್" (ಐ.ಡಿ,.ಯು) (ಶೇ. 12.8 ಮತಗಳಿಕೆ) ಮತ್ತು ನಡು–ಎಡಪಂಥೀಯ "ಸೋಶಲಿಸ್ಟ್ ಪಾರ್ಟಿ' (ಶೇ. 11.6 ಮತಗಳಿಕೆ) ಗಳು ಮೊದಲ ಸುತ್ತಿನಲ್ಲೇ ಹೊರಕ್ಕೆ ಬಿದ್ದವು ಎಂಬುದು ಸಹ ಗಮನಾರ್ಹ. 1973ರಲ್ಲಿ ಎಡ ಸರಕಾರದ ನಾಯಕತ್ವ ವಹಿಸಿದ್ದ ಅಧ್ಯಕ್ಷ ಅಲೆಂದೆ ಅವರ ಕೊಲೆ ಮಾಡಿ ತೀವ್ರ ಹಿಂಸಾಚಾರ ನಡೆಸಿ, ಯು. ಎಸ್ ನ ಸಕ್ರಿಯ ಬೆಂಬಲದೊಂದಿಗೆ ಮಿಲಿಟರಿ ಕ್ಷಿಪ್ರದಂಗೆ ಮೂಲಕ ಜನರಲ್ ಪಿನೊಶೆ ಅಧಿಕಾರಕ್ಕೆ ಬಂದಿದ್ದರು. ಅವರ ಸರ್ವಾಧಿಕಾರ ಸುಮಾರು ಎರಡು ದಶಕಗಳ ಕಾಲ ಚಿಲಿಯನ್ನು ಬಾಧಿಸಿತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಮೊದಲ ಸುತ್ತಿನಲ್ಲಿ ಇತರ ಎರಡು ಎಡ ಅಭ್ಯರ್ಥಿಗಳು ಶೇ.9 ಮತ ಗಳಿಸಿದ್ದರು.

ಧ್ರುವೀಕರಣ ಮುಳುವಾಯಿತು

ಕಾಸ್ಟ್ ಉಗ್ರ ಬಲಪಂಥೀಯ ಯು.ಎಸ್ ಮಾಜಿ ಅಧ್ಯಕ್ಷ ಟ್ರಂಪ್ ಥರದ ಉಗ್ರ ನವ-ಉದಾರವಾದಿ ನೀತಿಗಳನ್ನು ಪ್ರತಿಪಾದಿಸಿದ್ದರು. ಸರ್ವಾಧಿಕಾರಿ ಪಿನೋಶೆ ಅವರ ಪ್ರಜಾಸತ್ತಾತ್ಮಕ-ವಿರೋಧಿ ಕುಕೃತ್ಯಗಳನ್ನು ಸಮರ್ಥಿಸಿಕೊಂಡಿದ್ದರು. ಅವರು ಮಹಿಳಾ–ವಿರೋಧಿ ಪುರುಷ ಪ್ರಾಧಾನ್ಯದ ಹಾಗೂ ಪರಿಸರ–ವಿರೋಧಿ ಧೋರಣೆಗಳನ್ನೂ ಪ್ರತಿಪಾದಿಸಿದರು. ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಹಿಂದಿನ ನೀತಿಗಳನ್ನು ಮುಂದುವರೆಸುವುದಾಗಿ ಸಾರಿದರು. ಇದರಿಂದಾಗಿ ಚುನಾವಣಾ ಪ್ರಚಾರ ಅತ್ಯಂತ ಧ್ರುವೀಕೃತವಾಗಿತ್ತು. ಇದೇ ಅವರ ಪರಾಭವಕ್ಕೆ ಭಾರೀ ಮತಗಳ ಅಂತರಕ್ಕೆ ಕಾರಣವಾದಂತಿದೆ. ಇದಕ್ಕೆ ಪ್ರತಿಯಾಗಿ ಬೊರಿಕ್ ಅವರು ಚಿಲಿ ಆಳುವ ವರ್ಗಗಳು ಪಾಲಿಸಿಕೊಂಡು ಬರುತ್ತಿದ್ದ ನವ-ಉದಾರವಾದಿ ನೀತಿಗಳನ್ನು ಬಲವಾಗಿ ವಿರೋಧಿಸಿ ಅದನ್ನು ತೊಡೆಯುವ ಭರವಸೆ ನೀಡಿದರು. ಪಿನೋಶೆ ಜಾರಿಗೆ ತಂದ ಅತ್ಯಂತ ಅಪ್ರಜಾಸತ್ತಾತ್ಮಕ ಸಂವಿಧಾನ ಮತ್ತು ಕಾನೂನುಗಳನ್ನು ಆಮೂಲಾಗ್ರವಾಗಿ ಬದಲಾಯಿಸುವುದಾಗಿ ಸಾರಿದರು. ಪರಿಸರ ರಕ್ಷಿಸುವ ಸುಸ್ಥಿರ ಬೆಳವಣಿಗೆ ಮತ್ತು ಮಹಿಳಾ ಸಮಾನತೆಯ ನೀತಿಗಳನ್ನು ಪ್ರತಿಪಾದಿಸಿದರು.

ಬೊರಿಕ್ 2013 ರಿಂದ ವಿದ್ಯಾರ್ಥಿ–ಯುವಜನರ ಮಹಿಳೆಯರ ಕಾರ್ಮಿಕರ ಚಳುವಳಿಗಳ ನಾಯಕತ್ವ ವಹಿಸಿದ್ದು, ಸ್ವತಃ ಯುವಕರಾಗಿದ್ದು ಸ್ಫೂರ್ತಿಯುತ ನಾಯಕರಾದ್ದರಿಂದ ವಿದ್ಯಾರ್ಥಿ–ಯುವಜನರನ್ನು ಮಹಿಳೆಯರನ್ನು ರೈತ ಕಾರ್ಮಿಕರನ್ನು ದೊಡ್ಡ ಸಂಖ್ಯೆಯಲ್ಲಿ ಮತಗಟ್ಟೆಗೆ ಆಕರ್ಷಿಸಿದ್ದರು. ಬೊರಿಕ್ ಅವರು Apruebo Dignidad ('ಘನತೆಯನ್ನು ಮನ್ನಿಸಿ') ಎಂಬ ರಾಜಕೀಯ ಮೈತ್ರಿಕೂಟದ ಅಭ್ಯರ್ಥಿಯಾಗಿದ್ದರು. ಇದು ಚಿಲಿಯ ಕಮ್ಯುನಿಸ್ಟ್ ಪಕ್ಷ ಸೇರಿದಂತೆ ಎಡ–ಪ್ರಗತಿಪರ ಪಕ್ಷಗಳ ಮತ್ತು ಪ್ರಗತಿಪರ ಸಾಮಾಜಿಕ ಚಳುವಳಿಗಳ ಮೈತ್ರಿಕೂಟವಾಗಿತ್ತು. ಎರಡನೆಯ ಸುತ್ತಿನಲ್ಲಿ ಎಲ್ಲ ಎಡ ಶಕ್ತಿಗಳು, ಪ್ರಗತಿಪರ ಸಾಮಾಜಿಕ ಶಕ್ತಿಗಳ ಜತೆಗೆ ನಡು–ಎಡ ಶಕ್ತಿಗಳು ಸಹ ಬೊರಿಕ್ ಅವರಿಗೆ ಬೆಂಬಲಿಸಿದಂತೆ ಕಂಡು ಬರುತ್ತದೆ. ಅದೇ ರೀತಿಯಾಗಿ ಕಾಸ್ಟ್ ಅವರ ರಿಪಬ್ಲಿಕನ್ ಪಕ್ಷ ಮತ್ತು ಕ್ರಿಶ್ಚಿಯನ್ ಸೋಶಲಿಸ್ಟ್ ಪಕ್ಷದ ಮೈತ್ರಿಕೂಟವಾದ "ಕ್ರಿಶ್ಚಿಯನ್ ಸೋಶಲಿಸ್ಟ್ ಫ್ರಂಟ್' ಎಂಬ ಮೈತ್ರಿಕೂಟದ ಅಭ್ಯರ್ಥಿಯಾಗಿದ್ದರು. ಈ ಎರಡೂ ಮೈತ್ರಿಕೂಟಗಳು ಅಧ್ಯಕ್ಷೀಯ ಅಭ್ಯರ್ಥಿಯನ್ನು ಆರಿಸಲು ತಮ್ಮದೇ ಪ್ರಾಥಮಿಕ ಚುನಾವಣೆಗಳನ್ನು ನಡೆಸಿದ್ದವು. 'ಘನತೆಯನ್ನು ಮನ್ನಿಸಿ' ಮೈತ್ರಿಕೂಟದ ಪ್ರಾಥಮಿಕ ಚುನಾವಣೆಗಳಲ್ಲಿ ಮೊದಲ ಸ್ಥಾನ ಪಡೆದ Frenta Amplio (ಸಾಮಾಜಿಕ ಸಂಗಮ) ಪಕ್ಷದ ಬೊರಿಕ್ ಮತ್ತು ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯಾಗಿದ್ದ ಇನ್ನೊಬ್ಬ ಯುವನಾಯಕ ಡೇನಿಯಲ್ ಜಾಡೂ ಎರಡನೆಯ ಸ್ಥಾನ ಪಡೆದಿದ್ದರು.

'ಘನತೆಯನ್ನು ಮನ್ನಿಸಿ' ಮೈತ್ರಿಕೂಟ ಬರಿಯ ಚುನಾವಣಾ ಕೂಟವಲ್ಲ

'ಘನತೆಯನ್ನು ಮನ್ನಿಸಿ' ಮೈತ್ರಿಕೂಟ ಬರಿಯ ಚುನಾವಣೆಗೆ ಆದ ಕೂಟವಲ್ಲ. ಈ ಮೈತ್ರಿಕೂಟದ ಪಕ್ಷಗಳು ಚಳುವಳಿಗಳು ಪಿನೊಶೆ–ಪ್ರಣೀತ ಅಪ್ರಜಾಸತ್ತಾತ್ಮಕ ಸಂವಿಧಾನವನ್ನು ಬದಲಾಯಿಸಲು 2018ರಿಂದ 2020ರ ವರೆಗೆ ನಡೆದ ಚಾರಿತ್ರಿಕ ರಾಜಕೀಯ ಹೋರಾಟದಲ್ಲಿ ಅಣಿನೆರೆದವುಗಳು. ಆ ಸಂವಿಧಾನವೇ ಇಂದಿನ ಜನ–ವಿರೋಧಿ ನವ-ಉದಾರವಾದಿ ನೀತಿಗಳ ಮೂಲ ಎಂಬ ವ್ಯಾಪಕ ಪ್ರಚಾರವನ್ನು ಕೈಗೊಂಡು ಹೊಸ ಸಂವಿಧಾನ ಬರೆಯಬೇಕು ಎಂದು ಜನಾಭಿಪ್ರಾಯ ಸಂಗ್ರಹ ನಡೆಯುವಂತೆ ಮಾಡುವುದರಲ್ಲಿ ಮತ್ತು ಅದರಲ್ಲಿ ಹೊಸ ಸಂವಿಧಾನ ಬರೆಯಬೇಕು ಎಂಬ ಅಭಿಪ್ರಾಯಕ್ಕೆ ಬಹುಮತಗಳಿಸುವುದರಲ್ಲಿ ಯಶಸ್ವಿಯಾಗಿದ್ದವು. ಮಾತ್ರವಲ್ಲ, ಆ ಮೇಲೆ ಹೊಸ ಸಂವಿಧಾನ ಸಭೆಗೆ ನಡೆದ ಚುನಾವಣೆಗಳಲ್ಲಿ ಎಡಶಕ್ತಿಗಳಿಗೆ ಬಹುಮತ ಸಿಕ್ಕಿತ್ತು. ಬಲಪಂಥೀಯರನ್ನು ಮೂರನೆಯ ಒಂದರಷ್ಟು ಸೀಟುಗಳಿಗೆ ಸೀಮಿತಗೊಳಿಸಿತ್ತು. ಮುಂದೆ ಅಧ್ಯಕ್ಷೀಯ ಚುನಾವಣೆಗಳಿಗೂ ಒಂದೇ ಎಡ ಅಭ್ಯರ್ಥಿಗೂ ಅದು ಮುಂದುವರೆದಿತ್ತು. ಈ ಕೂಟಕ್ಕೆ ಚಿಲಿ ಸೋಶಲಿಸ್ಟ್ ಪಕ್ಷವನ್ನು ಆಹ್ವಾನಿಸಲಾಗಿತ್ತು. ಆದರೆ ಅದು 'ಹೊಸ ಸಾಮಾಜಿಕ ಒಪ್ಪಂದ' ಎಂಬ ಮತ್ತೊಂದು ರಂಗವನ್ನು ಸೇರಿತು.

'ಘನತೆಯನ್ನು ಮನ್ನಿಸಿ' ಮೈತ್ರಿಕೂಟದಲ್ಲಿದ್ದ ಶಕ್ತಿಗಳು, 2013ರಿಂದ ನವ–ಉದಾರವಾದಿ ನೀತಿಗಳ ವಿರುದ್ಧ ತೀವ್ರವಾಗಿ ಮೂಡಿಬಂದ ವಿವಿಧ ಜನವಿಭಾಗಗಳ ವ್ಯಾಪಕ ಚಳುವಳಿಗಳಲ್ಲಿ ಭಾಗವಹಿಸಿ, ಅವುಗಳಲ್ಲಿ ನಾಯಕತ್ವ ವಹಿಸಿ ಹೊಮ್ಮಿದ್ದವು. ಕಮ್ಯುನಿಸ್ಟ್ ಪಕ್ಷ ಚಿಲಿಯಲ್ಲಿ ಒಂದು ಪ್ರಮುಖ ರಾಜಕೀಯ ಶಕ್ತಿಯಾಗಿದ್ದು, 1970ರ ದಶಕದ ಆರಂಭದಲ್ಲಿ ಎಡ ಶಕ್ತಿಗಳನ್ನು ಒಗ್ಗೂಡಿಸಿ ಸ್ವಾಲ್ವಡೊರ್ ಅಲೆಂಡೆ ಅವರ ಎಡ ಸರಕಾರವನ್ನು ತರಲು ಶಕ್ತವಾಗಿತ್ತು. ಆದರೆ 1973ರ ಮಿಲಿಟರಿ ಕ್ಷಿಪ್ರದಂಗೆ ಮತ್ತು ಪಿನೊಶೆ ಸರ್ವಾಧಿಕಾರಿ ಆಡಳಿತದಲ್ಲಿ ಕಮ್ಯುನಿಸ್ಟ್ ನಾಯಕರು ಕಾರ್ಯಕರ್ತರನ್ನು ಬೇಟೆಯಾಡಿ ನರಮೇಧ ನಡೆಸಿ ಪಕ್ಷವನ್ನು ತೀವ್ರ ದಮನಕ್ಕೆ ಗುರಿ ಮಾಡಲಾಯಿತು. ಆದರೆ ಪಕ್ಷದ ಅಳಿದುಳಿದ ನಾಯಕರು ಕಾರ್ಯಕರ್ತರು ದುಡಿಯುವ ಮತ್ತಿತರ ಜನವಿಭಾಗಗಳನ್ನು (ಮುಖ್ಯವಾಗಿ ಕಾರ್ಮಿಕರು ಮತ್ತು ವಿದ್ಯಾರ್ಥಿಗಳು) ಹೋರಾಟಗಳಿಗೆ ಅಣಿನೆರೆಸುವುದನ್ನು ಮುಂದುವರೆಸಿದ್ದರು. 1990ರ ನಂತರ ಪ್ರಜಾಸತ್ತೆ ತೋರಿಕೆಗಾದರೂ ಮರುಸ್ಥಾಪಿತವಾದ ಮೇಲೆ ಇದು ತೀವ್ರಗೊಂಡಿತು. ಮುಂದಿನ ದಶಕದಲ್ಲಿ ಲ್ಯಾಟಿನ್ ಅಮೆರಿಕದಲ್ಲೆಲ್ಲ ಹೊರಿಸಲಾದ ನವ–ಉದಾರವಾದಿ ನೀತಿಗಳ ರಿಹರ್ಸಲ್ ಚಿಲಿ ಯಲ್ಲಾಗಿತ್ತು. ಚಿಲಿಯ ಮೇಲೆ ಪಿನೋಶೆ ಹೊರಿಸಿದ ನವ–ಉದಾರವಾದಿ ನೀತಿಗಳು ವಿವಿಧ ಜನವಿಭಾಗಗಳ ಮೇಲೆ ಗಂಭೀರ ಪರಿಣಾಮವುಂಟು ಮಾಡಿತ್ತು. ಲ್ಯಾಟಿನ್ ಅಮೆರಿಕದ ಇತರ ದೇಶಗಳಿಗೆ ಹೋಲಿಸಿದರೆ ಗಟ್ಟಿಯಾದ ಪ್ರಜಾಸತ್ತಾತ್ಮಕ ಪರಂಪರೆಯಿದ್ದ ಚಿಲಿ ಯಲ್ಲಿ ಇದು ಭಾರೀ ಸಾಮಾಜಿಕ ರಾಜಕೀಯ ಸಂಚಲನ ಉಂಟು ಮಾಡಿದವು.

ಹೋರಾಟಗಳ ಸರಣಿಯಿಂದ ಮೂಡಿದ ಕೂಟ

ಕಮ್ಯುನಿಸ್ಟ್ ನಾಯಕತ್ವದಲ್ಲಿ ನಡೆದ 2007ರಲ್ಲಿ ತಾಮ್ರ ಗಣಿಗಳ 90 ಸಾವಿರ ಕಾರ್ಮಿಕರ ಚಾರಿತ್ರಿಕ ದೀರ್ಘ ಮುಷ್ಕರ ಪ್ರಮುಖ ಜಯಗಳಿಸಿ ಈ ಅಣಿನೆರೆಸುವಿಕೆಗಳಿಗೆ ನಾಂದಿಯಾಯಿತು. 2011ರ ವ್ಯಾಪಕ ವಿದ್ಯಾರ್ಥಿ ಚಳುವಳಿ ಇನ್ನೊಂದು ಪ್ರಮುಖ ಮೈಲಿಗಲ್ಲಾಯಿತು. 2011ರಲ್ಲಿ ಜಗತ್ತಿನಾದ್ಯಂತ ನಡೆದ "ವಶಪಡಿಸಿಕೊಳ್ಳಿ' ಚಳುವಳಿಯ ಭಾಗವಾಗಿ ಚಿಲಿಯಲ್ಲಿ ವಿದ್ಯಾರ್ಥಿಗಳು ವಿ.ವಿ ಗಳನ್ನು ವಶಪಡಿಸಿಕೊಂಡು ಶಿಕ್ಷಣದ ಖಾಸಗೀಕರಣ, ವ್ಯಾಪಾರೀಕರಣದ ವಿರುದ್ಧ ತಮ್ಮ ದನಿಯೆತ್ತಿದರು. ಉತ್ತಮ ಗುಣಮಟ್ಟದ, ಉಚಿತ, ಸಾರ್ವಜನಿಕ ಶಿಕ್ಷಣಕ್ಕಾಗಿ ಒತ್ತಾಯಿಸಿದರು. ಇದಕ್ಕೆ ಅಧ್ಯಾಪಕರ ಸಂಘಗಳೂ ಬೆಂಬಲವಿತ್ತವು. ಚಿಲಿಯ ಸರಕಾರ ಈ ಚಳುವಳಿಯನ್ನು ತೀವ್ರ ದಮನಕ್ಕೆ ಒಳಪಡಿಸಿತು. ಈ ದಮನಗಳ ವಿರುದ್ಧ ಎಲ್ಲ ಜನವಿಭಾಗಗಳು ಬೀದಿಗಿಳಿದವು ಮತ್ತು ತಮ್ಮದೇ ಹಕ್ಕೊತ್ತಾಯಗಳನ್ನು ಮಂಡಿಸಲಾರಂಭಿಸಿದವು. ಲಕ್ಷಾಂತರ ಪಿಂಚಣಿದಾರರು ಪಿಂಚಣಿ ಖಾಸಗೀಕರಣದ ವಿರುದ್ಧ ದೀರ್ಘ ಹೋರಾಟ ನಡೆಸಿದರು. ರಾಜಧಾನಿಯಲ್ಲಿ 20 ಲಕ್ಷ ಪಿಂಚಣಿದಾರರ ಚಾರಿತ್ರಿಕ ಮೆರವಣಿಗೆ ನಡೆಯಿತು. ಲೈಂಗಿಕ ದೌರ್ಜನ್ಯ, ಹಿಂಸೆಗಳ ವಿರುದ್ಧ, ಗರ್ಭಪಾತದ ಹಕ್ಕಿಗಾಗಿ ಮಹಿಳೆಯರ ಗುಂಪುಗಳು ಕಾಲೇಜು, ವಿ.ವಿ, ವಾಸಸ್ಥಳ, ಉದ್ಯೋಗಸ್ಥಳಗಳಲ್ಲಿ ರಚಿತವಾಗಿ ಸಂಘಟಿತ ಹೋರಾಟ ನಡೆಸಿದವು. ಹೋರಾಟಕ್ಕೆ ಇಳಿದ ಈ ವಿವಿಧ ಜನವಿಭಾಗಗಳು, ಚಳುವಳಿಗಳು, ಸಂಘಟನೆಗಳು, ನಾಯಕತ್ವಗಳ ನಡುವೆ ಸಂಪರ್ಕ, ಸಂಯೋಜನೆ, ಜಂಟಿ ಕಾರ್ಯಾಚರಣೆ ಗಳು ಆರಂಭವಾಗಿ ಹೊಸ ರಾಜಕೀಯ ಸಾಮಾಜಿಕ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು. ಈಗ ಅಧ್ಯಕ್ಷರಾಗಿರುವ ಬೊರಿಕ್ ವಿದ್ಯಾರ್ಥಿ ಚಳುವಳಿಯ ನಾಯಕರು ಸ್ಥಾಪಿಸಿದ Frenta Amplio (ಸಾಮಾಜಿಕ ಸಂಗಮ) ಪಕ್ಷದ ಸ್ಥಾಪಕ ನಾಯಕರಾಗಿ ಹೊಮ್ಮಿದವರು. ಬೊರಿಕ್, ಇನ್ನೊಬ್ಬ ಕಮ್ಯುನಿಸ್ಟ್ ಯುವ ನಾಯಕ ಕಾಮಿಲ್ಲಾ ವಲ್ಲೆಜೊ ಸೇರಿದಂತೆ ಈ ವಿವಿಧ ಚಳುವಳಿಗಳ ಸಂಘಟನೆಗಳ ನಾಯಕರುಗಳು 2013ರ ಚುನಾವಣೆಯಲ್ಲಿ ಪಾರ್ಲಿಮೆಂಟಿಗೆ ಆಯ್ಕೆಯಾದರು. 2013ರ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಎಡ ಶಕ್ತಿಗಳಿಗೆ ಶೇ.20 ಮತಗಳಿಕೆ ಸಾಧ್ಯವಾಯಿತು. 2018ರ ಹೊತ್ತಿಗೆ ಈ ಎಲ್ಲ ಚಳುವಳಿಗಳು ತಾರಕಕ್ಕೆ ಏರಿದ್ದು ಮೆಟ್ರೋ ಟಿಕೆಟ್ ಬೆಲೆಏರಿಕೆ ವಿರುದ್ಧ ಚಳುವಳಿ ಇವೆಲ್ಲದರ ಸಂಗಮಕ್ಕೆ ಸಾಕ್ಷಿಯಾಗಿತ್ತು. ಇದರ ದಮನ ಇವರೆಲ್ಲರಿಗೂ ತಮ್ಮ ಸಮಸ್ಯೆಯ ಮೂಲ ನವ–ಉದಾರವಾದಿ ನೀತಿಗಳು. ಈ ನೀತಿಗಳನ್ನು ಕ್ರೂರದಮನದೊಂದಿಗೆ ಜಾರಿ ಮಾಡುವುದು ಸಾಧ್ಯವಾಗುತ್ತಿರುವುದು ಪಿನೋಶೆ–ಪ್ರಣೀತ ಸಂವಿಧಾನದಿಂದಾಗಿ ಎಂಬ ಅರಿವು ಮೂಡಿಸಿತು. ಅದನ್ನು ಬದಲಾಯಿಸಲು ವ್ಯಾಪಕ ಜನಚಳುವಳಿ ಆರಂಭವಾಯಿತು.

ರಭಸ ಪಡೆದುಕೊಂಡ 'ಎಳೆಗೆಂಪು ಅಲೆ'

ಹೀಗೆ ವಿವಿಧ ಜನವಿಭಾಗಗಳ ಅಣಿನೆರೆಸುವಿಕೆ, ಕಾರ್ಯಾಚರಣೆಗಳು ಹಾಗೂ ನವ–ಉದಾರವಾದಿ ನೀತಿಗಳ ವಿರುದ್ಧ ರಾಜಕೀಯ ಹೋರಾಟ, ಸೈದ್ಧಾಂತಿಕ ಅರಿವುಗಳ ಗಟ್ಟಿ ನೆಲೆಯ ಮೇಲೆ ಈ ವಿಜಯ ಸಾಧ್ಯವಾಗಿದೆ. ಇವು ಆಳುವ ವರ್ಗದ ಮತ್ತು ಸ್ಪಷ್ಟ ಜನಪರ ನವ–ಉದಾರವಾದಿ ವಿರೋಧಿ ಧೋರಣೆಯಿಲ್ಲದ ಶಕ್ತಿಗಳ ಜತೆ ಹೊಂದಾಣಿಕೆ ಮಾಡದಿರುವುದು ಕಾರಣವಾಗಿದೆ. ಇದರ ಜತೆಗೆ ನಡೆದ ರಾಷ್ಟ್ರೀಯ ಪ್ರಾದೇಶಿಕ ಮತ್ತು ನಗರಗಳ ಶಾಸನಸಭೆಗಳಿಗೆ ಮತ್ತು ಮೇಯರುಗಳಿಗೆ ನಡೆದ ಚುನಾವಣೆಗಳಲ್ಲಿಯೂ ಈ ಎಡಶಕ್ತಿಗಳು ಗಮನಾರ್ಹ ಮುನ್ನಡೆ ಸಾಧಿಸಿವೆ.

ಲ್ಯಾಟಿನ್ ಅಮೆರಿಕದಲ್ಲಿ 1970ರ ದಶಕದಲ್ಲಿ ನವ-ಉದಾರವಾದಿ ನೀತಿಗಳು ಮತ್ತು ಅವುಗಳನ್ನು ಜಾರಿ ಮಾಡಲು ಜನಪರ ಸರಕಾರಗಳನ್ನು ಉರುಳಿಸಲು ಸರ್ವಾಧಿಕಾರವನ್ನು ಹೇರಲು ಹೇಸದ ಯು.ಎಸ್ ರಾಜಕೀಯ–ಮಿಲಿಟರಿ ಹಸ್ತಕ್ಷೇಪ ಆರಂಭವಾಗಿದ್ದು ಚಿಲಿಯಲ್ಲಿ. ಹಾಗಾಗಿ ಚಿಲಿಯಲ್ಲಿನ ಈ ಎಡವಿಜಯ ಮಹತ್ವಪೂರ್ಣ ಮತ್ತು ಗಮನಾರ್ಹ ಸಕಾರಾತ್ಮಕ ಜಾಗತಿಕ ರಾಜಕೀಯ ಬೆಳವಣಿಗೆ. ಚಿಲಿಯ ವಿಜಯದೊಂದಿಗೆ, ಇತ್ತೀಚೆಗೆ ಅರ್ಜೆಂಟಿನಾ, ಬೊಲಿವಿಯ, ನಿಕರಾಗುವ, ಹೊಂಡುರಸ್, ಪೆರು ಗಳಲ್ಲಿ ಎಡಶಕ್ತಿಗಳ ವಿಜಯದೊಂದಿಗೆ ಆರಂಭವಾಗಿರುವ ಎಳೆಗೆಂಪು ಅಲೆ (ಕೆಂಪು ಯಾಕಲ್ಲ, ಎಳೆಗೆಂಪು ಯಾಕೆಂದರೆ ಕೆಲವು ಕಡೆ ಹೊಯ್ದಾಡುವ ನಡು–ಎಡ ಶಕ್ತಿಗಳ ಜತೆ ಕೂಟದಲ್ಲಿ ಅಧಿಕಾರದಲ್ಲಿವೆ) ರಭಸ ಪಡೆದುಕೊಂಡಿದೆ. ಮುಂದೆ ಈ 'ಎಳೆಗೆಂಪು ಅಲೆ' ಬ್ರೆಜಿಲ್ ನ್ನೂ ಅಪ್ಪಳಿಸಲಿದೆ.

ಇಂತಹ ಎಡ ಸರಕಾರಗಳು ಅಧಿಕಾರಕ್ಕೆ ಬಂದಾಗ, ಆರ್ಥಿಕ ದಿಗ್ಬಂಧನ, ರಾಜಕೀಯ ಅಪಪ್ರಚಾರ, ಹಿಂಸಾತ್ಮಕ ಬುಡಮೇಲು ಕೃತ್ಯಗಳು ಮತ್ತು ಮಿಲಿಟರಿ ದಾಳಿಗಳ ಮೂಲಕ ನೇರ ಹಸ್ತಕ್ಷೇಪ ಇವುಗಳ ಮೂಲಕ ಅವುಗಳನ್ನು ಉರುಳಿಸಲು ಯು. ಎಸ್ ಪ್ರಯತ್ನಿಸುತ್ತದೆ. ಇಂತಹ ಮಧ್ಯಪ್ರವೇಶ ಮಾಡಿ ಕ್ಷಿಪ್ರದಂಗೆ ನಡೆಸಿದ ನಾಲ್ಕು ದೇಶಗಳಲ್ಲೇ – ಬೊಲಿವಿಯ, ಪೆರು, ಹೊಂಡುರಸ್, ಚಿಲಿ – ಎಡಶಕ್ತಿಗಳು ಇತ್ತೀಚೆಗೆ ವಿಜಯ ಸಾಧಿಸಿರುವುದು ಗಮನಾರ್ಹ. 21ನೆಯ ಶತಮಾನದ ಆರಂಭದ ದಶಕದಲ್ಲಿ ಇಡೀ ಲ್ಯಾಟಿನ್ ಅಮೆರಿಕವನ್ನು ವ್ಯಾಪಿಸಿದ್ದ 'ಎಳೆಗೆಂಪು ಅಲೆ' ಖಂಡವ್ಯಾಪಿ ಸೌಹಾರ್ದತೆ, ಸಹಕಾರಗಳ ಮೂಲಕ ಯು.ಎಸ್ ಗೆ ಪ್ರಬಲ ಪ್ರತಿರೋಧ ಒಡ್ಡುವುದು ಸಾಧ್ಯವಾಯಿತು. ಈ ದಶಕದಲ್ಲಿ ಮತ್ತೆ ಲ್ಯಾಟಿನ್ ಅಮೆರಿಕ ಅದೇ ಹಾದಿ ತುಳಿಯುವಂತೆ ಕಾಣುತ್ತಿದೆ. ■

JANASHAKTHI KANNADA VARA PATRIKE DECEMBER 27, 2021-JANUARY 2, 2022 Price: Rs. 10/- Date of Publication: 24 DECEMBER 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21





ಸಿಪಿಐ(ಎಂ) ಉತ್ತರ ಕನ್ನಡ 11 ನೇ ಜಿಲ್ಲಾ ಸಮ್ಮೇಳನ

ಸಿಪಿಐ(ಎಂ) ಪಕ್ಷದ ಉತ್ತರ ಕನ್ನಡ 11 ನೇ ಜಿಲ್ಲಾ ಸಮ್ಮೇಳನವು ಹೊನ್ನಾವರದಲ್ಲಿ ಡಿ. 19–20 ರಂದು ಹೊನ್ನಾವರದ ನಗರದಲ್ಲಿ ಎರಡು ದಿನಗಳ ಕಾಲ ಯಶಸ್ವಿಯಾಗಿ ನಡೆಯಿತು.

ಕಾ. ಸುಭಾಸ್ ಕೊಪ್ಪಿಕರ್ ಸಭಾಭವನ, ಕಾ. ವಿಠ್ಠಲ ಭಂಡಾರಿ, ಕಾ. ಮಂಜುನಾಥ ಪುಲ್ಕರ್, ಕಾ. ಟಿ.ಎಸ್. ನಾಯ್ಕ ನೆನಪಿನ ವೇದಿಕೆಯಲ್ಲಿ ಕಲಾಪಗಳು ಜರುಗಿದವು.

ಮೊದಲ ದಿನ ಹೊನ್ನಾವರದ ನಗರದಲ್ಲಿ ಆಕರ್ಷಕ ಮೆರವಣಿಗೆಯೊಂದಿಗೆ ನಡೆದ ಬಹಿರಂಗ ಸಭೆ ಉದ್ದೇಶಿಸಿ ರಾಜ್ಯ ಕೇಂದ್ರದ ನಾಯಕರಾದ ಕಾಮ್ರೇಡ್ ಕೆ. ಶಂಕರ್ ಮುಖ್ಯ ಭಾಷಣ ಮಾಡಿದರು. ಭಾರತದ ಚರಿತ್ರೆಯಲ್ಲಿ ಕಂಡರಿಯದ ಜನವಿರೋಧಿ ಸರ್ಕಾರಗಳೆಂದರೆ ಈ ಬಿಜೆಪಿಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು. ಹಸಿವೆಗೆ ದೂಡಿರುವ ಬೆಲೆ ಏರಿಕೆ, ಅನ್ನದಾತರನ್ನು ಬೀದಿಗಿಳಿಸಿದ ಕೃಷಿ ಕಾಯ್ದೆಗಳು, ಕಾರ್ಮಿಕ ಕೂಲಿಕಾರರನ್ನು ಬೀದಿಪಾಲಾಗಿಸುವ ಲೇಬರ್ ಕೋಡ್, ಶಿಕ್ಷಣವನ್ನು ಖಾಸಗಿ ಮತ್ತು ವಿದೇಶಿಯರಿಗೆ ತೆರೆದಿಡುವ ಹೊಸ ಶಿಕ್ಷಣ ನೀತಿ ಹಾಗೂ ಉದ್ಯೋಗ ರಹಿತ ಬೆಳವಣಿಗೆಯ ಕೆಟ್ಟ ಆರ್ಥಿಕ ನೀತಿ ಇವುಗಳನ್ನು ಸೋಲಿಸಲು ಜನತೆಯ ಐಕ್ಯ ಆಂದೋಲನ ಇನ್ನಷ್ಟು ಗಟ್ಟಿಕೊಳಿಸಬೇಕಿದೆ. ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿ ಗೆ ಪರಿಸರ, ಕೃಷಿ ಪೂರಕ ಕೈಗಾರಿಕೆಗಳ ಅಗತ್ಯವಿದೆ ಎಂದರು.

ಜಿಲ್ಲಾ ಕಾರ್ಯದರ್ಶಿ ಕಾ. ಶಾಂತಾರಾಮ ನಾಯಕ ಅಧ್ಯಕ್ಷತೆ ವಹಿಸಿದ್ದರು. ಕಾ. ಯಮುನಾ ಗಾಂವ್ಕರ್, ಕಾ. ಹರೀಶ ನಾಯ್ಕ ಸಾಂದರ್ಭಿಕ ಮಾತನಾಡಿದರು. ಕಾ. ತಿಲಕ ಗೌಡ ಸ್ವಾಗತ ಸಮಿತಿ ಪರವಾಗಿ ಬಹಿರಂಗ ಸಭೆಗೆ ಸ್ವಾಗತ ಕೋರಿದರು. ಕಾ. ತಿಮ್ಮಪ್ಪ ಗೌಡ ವಂದಿಸಿದರು.

ನಂತರ ಅಪ್ಸರ ಕೊಂಡದಲ್ಲಿ ಪ್ರತಿನಿಧಿ ಅಧಿವೇಶನದ ಪ್ರಾರಂಭದಲ್ಲಿ ಹಿರಿಯ ಸಂಗಾತಿ ಕಾ. ಎಚ್. ಬಿ. ನಾಯಕ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಹುತಾತ್ಮ ಸ್ತಂಭಕ್ಕೆ ಕೆಂಪುನಮನ ಸಲ್ಲಿಸಿ ಪ್ರತಿನಿಧಿ ಅಧಿವೇಶನದ ಉದ್ಘಾಟನಾ ಕಾರ್ಯಕ್ರಮ ನೆರವೇರಿತು. ಕಾ. ಹರೀಶ ನಾಯ್ಕ, ಜಯಶ್ರೀ ಹಿರೇಕರ್, ನಾಗಪ್ಪ ನಾಯ್ಕ ಇದ್ದ ಅಧ್ಯಕ್ಷೀಯ ಮಂಡಳಿಯು ಕಲಾಪವನ್ನು ನಡೆಸಿತು. ಪ್ರತನಿಧಿ ಸಭೆ ಉದ್ದೇಶಿಸಿ ಕಾ. ಕೆ ಶಂಕರ್ ಮಾರ್ಗದರ್ಶನ ಮಾತನಾಡಿದರು.

ಕಳೆದ ನಾಲ್ಕು ವರ್ಷಗಳಲ್ಲಿ ವಿಶ್ವದಲ್ಲಿ, ದೇಶದಲ್ಲಿ, ರಾಜ್ಯದಲ್ಲಿ ಹಾಗೂ ಜಿಲ್ಲೆಯಾದ್ಯಂತ ನಡೆದ ವಿದ್ಯಮಾನಗಳ ವಿಶ್ಲೇಷಣೆ, ಪಕ್ಷದ ಚಟುವಟಿಕೆಗಳು, ಸಂಘಟನಾ ವಿಷಯ ಹಾಗೂ ಮುಂದಿನ ಕರ್ತವ್ಯಗಳನ್ನು ಒಳಗೊಂಡ ಕರಡು ವರದಿಯನ್ನು ಕಾರ್ಯದರ್ಶಿ ಕಾ. ಶಾಂತಾರಾಮ ನಾಯಕ ಮಂಡಿಸಿದರು. ಪ್ರತಿನಿಧಿಗಳ ಚರ್ಚೆಯ ನಂತರ ಸಮ್ಮೇಳನ ಸರ್ವಾನುಮತದಿಂದ ವರದಿಯನ್ನು ಅಂಗೀಕರಿಸಿತು.

ನಿರ್ಣಯಗಳು:

ಜಿಲ್ಲೆಯ ಸಮಗ್ರ ಅಭಿವೃದ್ಧಿ, ರಾಷ್ಟ್ರೀಯ ಶಿಕ್ಷಣ ನೀತಿ ಜಾರಿ ವಿರೋಧಿಸಿ, ಅಸ್ಪೃಶ್ಯತೆ ಆಚರಣೆ ಮತ್ತು ಜಾತಿ ತಾರತಮ್ಯ ಹಾಗೂ ದಲಿತರು ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಮೇಲಿನ ದಾಳಿ ದೌರ್ಜನ್ಯ ಖಂಡಿಸಿ, ಕೃಷಿ ಕಾಯ್ದೆಗಳನ್ನು ವಿರೋಧಿಸಿ ಯಶಸ್ವಿ ಹೋರಾಡ ಮಾಡಿದ ರೈತರಿಗೆ ಅಭಿನಂದಿಸಿ ನಿರ್ಣಯ, ಫೆಬ್ರವರಿ 23–24 ರಂದು ನಡೆಯಲಿರುವ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ಬೆಂಬಲಿಸಿ, ಅರಣ್ಯ ಭೂಮಿ ಸಾಗುವಳಿ ಹಕ್ಕು ಪತ್ರಕ್ಕೆ, ಕುಣಬಿ ಬುಡಕಟ್ಟು ಎಂದು ಘೋಷಿಸಲು ಆಗ್ರಹಿಸಿ ನಿರ್ಣಯ ಹೀಗೆ ಹತ್ತು ನಿರ್ಣಯಗಳನ್ನು ಕೈಗೊಂಡಿತು.

ನೂತನ ಜಿಲ್ಲಾ ಸಮಿತಿ:

ಸಮ್ಮೇಳನವು 17 ಜನರ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿದೆ.

ಕಾರ್ಯದರ್ಶಿಯಾಗಿ ಕಾಮ್ರೇಡ್ ಯಮುನಾ ಗಾಂವ್ಕರ್ ಆಯ್ಕೆಯಾದರು. ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಶಾಂತಾರಾಮ ನಾಯಕ, ತಿಲಕ ಗೌಡ, ಹರೀಶ ನಾಯ್ಕ, ಸಿ ಆರ್ ಶಾನಭಾಗ್, ಜಯಶ್ರೀ ಹಿರೇಕರ್, ತಿಮ್ಮಪ್ಪ ಗೌಡ ಆಯ್ಕೆಯಾದರು.



ಸದಸ್ಯರಾಗಿ ಎಚ್.ಬಿ. ನಾಯಕ, ಶ್ಯಾಮನಾಥ ನಾಯ್ಕ, ನಾಗಪ್ಪ ನಾಯ್ಕ, ಪ್ರೇಮಾನಂದ ವೆಳಿಪ್, ಮೋಹಿನಿ ನಮ್ಸೇಕರ್, ಗೀತಾ ನಾಯ್ಕ, ಸಲೀಂ ಸಯ್ಯದ್, ಭೀಮಣ್ಣ ಬೋವಿ, ಗಂಗಾ ನಾಯ್ಕ, ಡಿ. ಸ್ಯಾಮ್ಸನ್ ಹಾಗೂ ಖಾಯಂ ಆಹ್ವಾನಿತರಾಗಿ ಪುಂಡಲೀಕ ಆಯ್ಕೆ ಆಗಿದ್ದಾರೆ.

ಈವರೆಗೆ ಜಿಲ್ಲಾ ಸಮಿತಿ ಸದಸ್ಯರಾಗಿದ್ದು ಈಗ ಬಿಡುಗಡೆಗೊಂಡ ಸಂಗಾತಿ ಆರ್.ಎಂ. ಮುಲ್ಲಾ ರವರ ಕೆಲಸವನ್ನು ಸ್ಮರಿಸಲಾಯಿತು.

ಬಡತನ ನಿರ್ಮೂಲನೆಯ ಬದಲು ಬಡವರ ನಿರ್ಮೂಲನೆಗೆ ಕೇಂದ್ರ ಬಿಜೆಪಿ ಸರ್ಕಾರ ಮುಂದಾಗಿದೆ. ಜನಜೀವನವನ್ನು ಸದಾ ಸಂಕಷ್ಟದಲ್ಲೇ ಇರಿಸುವುದು ಅವರ ಉದ್ದೇಶ. ಹಾಗಾಗಿಯೇ ರೈತರನ್ನು ವರ್ಷಾನುಗಟ್ಟಲೆ ಬೀದಿಯಲ್ಲಿ ಹಿಂಸಿಸಿದರು. ಕಾರ್ಮಿಕರ ನೈಜ ಹಕ್ಕು ಕಸಿದು ದುಡಿಸುವ ಮತ್ತು ದಂಡಿಸುವ ನೀತಿ ಜಾರಿ ಮಾಡುತ್ತಿದ್ದಾರೆ. ಇದನ್ನೆಲ್ಲ ಎದುರಿಸಲು ಫೆಬ್ರವರಿ 23–24 ರಂದು ದೇಶ ವ್ಯಾಪಿ ಸಾರ್ವತ್ರಿಕ ಮುಷ್ಕರ ಯಶಸ್ವಿಯಾಗಿ ನಡೆಸಲು ತಯಾರಾಗಿ ಎಂದು ಕರೆ ನೀಡಿದವರು ಕಾಮ್ರೇಡ್ ಮೀನಾಕ್ಷಿ ಸುಂದರಂ. ಅವರು ಸಮ್ಮೇಳನದ ಸಮಾರೋಪ ಮಾತನಾಡಿದರು.

ಸಮ್ಮೇಳನದ ಪ್ರತಿನಿಧಿಗಳಿಗೆ, ಮಾರ್ಗದರ್ಶನ ಮಾಡಿದ ರಾಜ್ಯ ಸಮಿತಿಯವರಿಗೆ, ಅಧ್ಯಕ್ಷೀಯ ಮಂಡಳಿಗೆ, ಎಲ್ಲಾ ಸಮಿತಿಗಳಿಗೆ, ಸಮ್ಮೇಳನ ಯಶಸ್ವಿಯಾಗಿ ನಡೆಯಲು ದುಡಿದ ಸ್ವಯಂಸೇವಕ ಸಂಗಾತಿಗಳಿಗೆ, ಮೆರವಣಿಗೆ ಬಹಿರಂಗ ಸಭೆಗಳಲ್ಲಿ ಭಾಗವಹಿಸಿದ ಸಂಗಾತಿಗಳಿಗೆ ಮತ್ತು ಕಲಾವಿದರಿಗೆ ಧನ್ಯವಾದಗಳನ್ನುಸಲ್ಲಿಸಲಾಯಿತು. ಸಮಾಜ ಬದಲಾವಣೆಯ ಹೋರಾಟವನ್ನು ಬಲಿಷ್ಟಗೊಳಿಸುವ ಘೋಷಣೆಗಳ ಮಧ್ಯೆ ಕೆಂಬಾವುಟವನ್ನು ಇಳಿಸಿ ಸಮ್ಮೇಳನದ ಕಲಾಪ ಮುಕ್ತಾಯಗೊಳಿಸಲಾಯಿತು.

ಸಿಪಿಐ(ಎಂ) ವಿಜಯಪುರ 20ನೇ ಜಿಲ್ಲಾ ಸಮೇಳನ

ಡಿಸೆಂಬರ್ 20, 2021 ರಂದು ಸಿಂದಗಿ ನಗರದ ಡಾ॥ ಬಿ.ಆರ್. ಅಂಬೇಡ್ಕರ ಭವನದಲ್ಲಿ ನಡೆಯಿತು. ಉದ್ಘಾಟನೆಯನ್ನು ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಉದ್ಘಾಟನೆ ಮಾಡಿದರು.

ನೂತನ ಜಿಲ್ಲಾ ಸಮಿತಿ:

ಅಣ್ಣಾರಾಯ ಈಳಗೇರ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಸುರೇಖಾ ರಜಪುತ, ಭೀಮರಾಯ ಪೂಜಾರಿ, ಲಕ್ಷ್ಮಣ ಹಂದ್ರಾಳ, ಖಾಜೇಸಾಬ ಕೋಲಾರ, ಭೀಮಶಿ ಕೋಟ್ಯಾಳ, ಭಾರತಿ ವಾಲಿ, ಸುಮಿತ್ರಾ ನಾಯ್ಕ, ಸಲಿಂ ನಾಯ್ಕೋಡಿ, ಎಸ್.ಜಿ. ಬೋರಗಿ, ನಿಂಗಣ್ಣ ಪೂಜಾರಿ, ಭವಾನಿ ತಳವಾರ ಮುಂತಾದ 17 ಜನ ಒಳಗೊಂಡ ಜಿಲ್ಲಾ ಸಮಿತಿಗೆ ಆಯ್ಕೆಯಾದರು. ಪಕ್ಷದ ಹಿರಿಯ ನಾಯಕರಾದ ಭೀಮಶಿ ಕಲಾದಗಿ, ಪುಂಡಲಿಕ ಹಂದಿಗನೂರ ಅವರನ್ನು ಖಾಯಂ ಅವ್ಹಾನಿತ ಸದಸ್ಯರೆಂದು ಹಾಗೂ ಈರಣ್ಣ ಬಳೂಂಡಗಿಯವರನ್ನು ಅವ್ಹಾನಿತ ಸದಸ್ಯರೆಂದು ಸಮೇಳನವು ಆಯ್ಕೆ ಮಾಡಿದೆ.







JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**